ಮಂಗಳವಾರ, ಜನವರಿ 31, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ಮುಂಬೈನಲ್ಲಿ ನಡೆದ 'ಪಠಾಣ್' ಸಿನಿಮಾದ ಸುದ್ದಿಗೋಷ್ಠಿಯಲ್ಲಿ ನಟ ದೀಪಿಕಾ ಪಡುಕೋಣೆ ಪಾಲ್ಗೊಂಡಿದ್ದರು



ಸಂಕ್ಷಿಪ್ತ ಸುದ್ದಿ

ಬೆಂಗಳೂರು, ತುಮಕೂರಿಗೆ ಫೆ. 6ಕ್ಕೆ ಮೋದಿ



ಮೋದಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 6ರಂದು ರಾಜ್ಯ ಪ್ರವಾಸ ಕೈಗೊಳ್ಳಲಿದ್ದು, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಫೆ. 6ರಂದು ಬೆಳಿಗ್ಗೆ ನಗರಕ್ಕೆ ಆಗಮಿಸುವ ಪ್ರಧಾನಿ, ಮಾದಾವರ ಸಮೀಪದ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) 'ಇಂಡಿಯಾ ಎನರ್ಜಿ ವೀಕ್' ಕಾರ್ಯಕ್ರಮ ಉದ್ಘಾಟಿಸುವರು.

ನಂತರ ಪ್ರಧಾನಿಯವರು ಗುಬ್ಬಿ ತಾಲ್ಲೂಕಿನ ಬಿದರೆಹಳ್ಳಿಯಲ್ಲಿ ಎಚ್‌ಎಎಲ್‌ನ ಹೆಲಿಕಾಪ್ಟರ್ ಉತ್ಪಾದನಾ ಕಾರ್ಖಾನೆಯನ್ನು ಉದ್ಘಾಟಿಸುವರು. ಜಲಜೀವನ್ ಮಿಷನ್ ಯೋಜನೆಯಡಿ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ನೀರು ಪೂರೈಸುವ ಕಾಮಗಾರಿಗಳಿಗೆ ಅದೇ ಸ್ಥಳದಿಂದ ಭೂಮಿಪೂಜೆ ನೆರವೇರಿಸುವರು.

ರಾಜ್ಯದ 2ನೇ ಅಧಿಕೃತ ಭಾಷೆಯಾಗಿ ತುಳು: ಸಮಿತಿ ರಚನೆ

ಬೆಂಗಳೂರು: ತುಳು ಭಾಷೆಯನ್ನು ಕರ್ನಾಟಕದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಈ ಕುರಿತು ಟ್ವೀಟ್ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್, 'ತುಳು ಭಾಷೆಯನ್ನು ಕರ್ನಾಟಕದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಸಂಬಂಧ ಅಧ್ಯಯನ ನಡೆಸಿ ಸೂಕ್ತ ಶಿಫಾರಸಿನೊಂದಿಗೆ ವರದಿ ನೀಡಲು ಡಾ. ಮೋಹನ ಆಳ್ವ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಅಲ್ಲದೆ, ಒಂದು ವಾರದಲ್ಲಿ ವರದಿ ನೀಡಲು ಈ ಸಮಿತಿಗೆ ಸೂಚಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರಿಸಬೇಕೆಂದು ತುಳು ಭಾಷಿಕರು ಅನೇಕ ವರ್ಷಗಳಿಂದ ಬೇಡಿಕೆ ಮುಂದಿಡುತ್ತಲೇ ಇದ್ದಾರೆ. ರಾಜ್ಯದ ಸಂಸದರು ಹಲವು ಬಾರಿ ಈ ವಿಚಾರವನ್ನು ಸಂಸತ್‌ನಲ್ಲಿ ಪ್ರಸ್ತಾಪಿಸಿದ್ದರು.

ಶಿಕ್ಷಕರ ವರ್ಗಾವಣೆಗೆ ಅರ್ಜಿ: ಮಾರ್ಚ್ 4ರವರೆಗೆ ಅವಕಾಶ

ಬೆಂಗಳೂರು: ಶಿಕ್ಷಕರ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾರ್ಚ್ 4ರವರೆಗೆ ವಿಸ್ತರಿಸಿದೆ.

ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಜ.30ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ಪ್ರಕ್ರಿಯೆಯನ್ನು ಕೆಲ ದಿನಗಳ ಹಿಂದೆ ಸ್ಥಗಿತಗೊಳಿಸಿ, ಸುತ್ತೋಲೆ ಹೊರಡಿಸಿದ್ದ ಕಾರಣ ವರ್ಗಾವಣೆ ಪ್ರಕ್ರಿಯೆಗೂ ತೊಡಕಾಗಿತ್ತು. ಹಾಗಾಗಿ, ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಲಾಗಿದೆ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಫೆ.4ರ ಒಳಗೆ ಶಿಕ್ಷಕರ ಸೇವಾ ಮಾಹಿತಿ ಅಪ್‌ಲೋಡ್ ಮಾಡಬೇಕು. ವಿನಾಯಿತಿ ಸೇರಿದಂತೆ ಕೋರಿಕೆಯ ಅಗತ್ಯ ದಾಖಲೆಗಳನ್ನು ಫೆ.8ರ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು. ಆಯಾ ಶಿಕ್ಷಣಾಧಿಕಾರಿಗಳು 10ರ ಒಳಗೆ ಪ್ರಮಾಣಪತ್ರಗಳ ನೈಜತೆ ಪರಿಶೀಲಿಸಿ ದೃಢೀಕರಿಸಬೇಕು. ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆಯ ನಂತರ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಮಾರ್ಚ್ 4ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಕೋಲಾರದಿಂದ ಸ್ಪರ್ಧೆ: ಬಾಡಿಗೆ ಮನೆ ಪರಿಶೀಲನೆ • ತಂದೆಯ ಪರ ಪ್ರಚಾರ ಆರಂಭ

ಹೈಕಮಾಂಡ್ ಬೇಡ ಅನ್ನಲ್ಲ: ಯತೀಂದ್ರ

ಪ್ರಜಾವಾಣಿ ವಾರ್ತೆ

ಕೋಲಾರ: 'ಹೈಕಮಾಂಡ್ ಒಪ್ಪಿದರೆ ನನ್ನ ತಂದೆ ಸಿದ್ದರಾಮಯ್ಯ ಕೋಲಾರದಿಂದಲೇ ಸ್ಪರ್ಧಿಸುತ್ತಾರೆ. ಹೈಕಮಾಂಡ್ ಕೂಡ ಅವರ 'ಇಚ್ಛೆಗೆ ವಿರುದ್ಧವಾಗಿ ಹೋಗಲ್ಲ' ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅವರ ವಾಸ್ತವ್ಯಕ್ಕೆ ಬಸವನತ್ತದಲ್ಲಿ ಗುರುತಿಸಿರುವ ಬಾಡಿಗೆ ಮನೆಯನ್ನು ಪರಿಶೀಲಿಸಲು ಸೋಮವಾರ ನಗರಕ್ಕೆ ಬಂದಿದ್ದ ಅವರು ಕೆಲವು ಗ್ರಾಮಗಳಲ್ಲಿ ತಂದೆಯ ಪರ ಪ್ರಚಾರವನ್ನೂ ಆರಂಭಿಸಿದರು.

'ಮನೆ ಚೆನ್ನಾಗಿದೆ. ನನ್ನ ತಂದೆಯೂ ಒಮ್ಮೆ ನೋಡಿ ತೀರ್ಮಾನಿಸಲಿದ್ದಾರೆ. ವಾಸ್ತು ಮೇಲೆ ನಮಗೆ ನಂಬಿಕೆ 'ಇಲ್ಲ' ಎಂದು ಅವರು ಹೇಳಿದರು.

'ವರುಣಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವಂತೆ ತಂದೆಗೆ ಹೇಳಿದ್ದೇನೆ. ಆದರೆ, ಕೋಲಾರದಿಂದ ಸ್ಪರ್ಧಿಸಬೇಕು, ಅದಕ್ಕೆ ಹೈಕಮಾಂಡ್ ಒಪ್ಪಬೇಕು ಎನ್ನುವ ಮನಸ್ಸು ಅವರಿಗಿದೆ' ಎಂದರು.



ಕೋಲಾರ ತಾಲ್ಲೂಕಿನ ಬಸವನತ್ತದಲ್ಲಿ ಸಿದ್ದರಾಮಯ್ಯ ಅವರಿಗೆ ವ್ಯವಸ್ಥೆ ಮಾಡಿರುವ ಮನೆ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಅಲ್ಪಸಂಖ್ಯಾತ ಸಭೆಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರನ್ನು ಸೋಲಿಸಲು ಎಲ್ಲಾ ಶಕ್ತಿಗಳು ಪ್ರಯತ್ನಿಸುತ್ತಿವೆ. ಮುಸ್ಲಿಮರು ಜೆಡಿಎಸ್ ಬೆಂಬಲಿಸಿದರೆ ಅವರು ಕೋಮುವಾದಿ ಬಿಜೆಪಿ ಜೊತೆ ಕೈಜೋಡಿಸುತ್ತಾರೆ' ಎಂದು ಎಚ್ಚರಿಸಿದರು.

ಕೆ.ಎಚ್.ಮುನಿಯಪ್ಪ ಬಣದ ಮುಖಂಡರು ಗೈರಾಗಿದ್ದರು. ಕೆ.ಆರ್. ರಮೇಶ್ ಕುಮಾರ್ ಬೆಂಬಲಿಗರು ಯತೀಂದ್ರ ಅವರ ಜೊತೆಗಿದ್ದರು.

ಸಿದ್ದರಾಮಯ್ಯ ಗೆದ್ದರೆ ದಲಿತರನ್ನು ತುಳಿಯುತ್ತಾರೆ: ಎಂ.ವೆಂಕಟಸ್ವಾಮಿ

'ಕೋಲಾರದಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದರೆ ಅವರನ್ನು ಸೋಲಿಸುವ ಪಣ ತೊಡಲಿ. ಯಾವುದೇ ಕಾರಣಕ್ಕೂ ಅವರನ್ನು ಶಾಸಕರಾಗಲು ಬಿಡಬೇಡಿ. ಗೆದ್ದರೆ ದಲಿತರನ್ನು ತುಳಿದು ಮುಖ್ಯಮಂತ್ರಿ ಆಗುತ್ತಾರೆ' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ.ವೆಂಕಟಸ್ವಾಮಿ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

'ಕೋಲಾರದ ಹಳ್ಳಿಹಳ್ಳಿಗಳಲ್ಲಿ ಸಿದ್ದರಾಮಯ್ಯ ಹಟಾವೋ ಘೋಷಣೆ ಮೊಳಗಿಸಬೇಕು. ಅವರನ್ನು ಇಲ್ಲಿಗೆ ಕರೆತಂದಿರುವ ದಲಿತ ಮುಖಂಡರನ್ನೂ ದೂರವಿಡಬೇಕು. ದಲಿತರಿಗೆ ಮಾಡಿರುವ ಅನ್ಯಾಯ ಕುರಿತು ಮುಖಂಡರು ಕರಪತ್ರ ಹಂಚುತ್ತಿದ್ದಾರೆ. ಈ ಬಗ್ಗೆ ದೊಡ್ಡಮಟ್ಟದ ಚರ್ಚೆಯಾಗಿಯೂ ನಡೆಯುತ್ತಿದೆ' ಎಂದರು.

ವರುಣಾ ಹೆಚ್ಚು ಸುರಕ್ಷಿತ: ರಾಜಣ್ಣ


'ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದಲ್ಲೇ ಸ್ಪರ್ಧಿಸುವುದು ಹೆಚ್ಚು ಸುರಕ್ಷಿತ ಎಂಬುದು ನನ್ನ ಭಾವನೆ. ಅಲ್ಲೇ ಸ್ಪರ್ಧಿಸುವಂತೆ ಮನವಿ ಮಾಡುತ್ತೇನೆ. ಮಧುಗಿರಿಯಿಂದ ಸ್ಪರ್ಧಿಸುವಂತೆ ಮೊದಲಿನಿಂದಲೂ ಮನವಿ ಮಾಡುತ್ತಲೇ ಇದ್ದೇನೆ' ಎಂದು ಕಾಂಗ್ರೆಸ್ ಮುಖಂಡ ಕೆ.ಎನ್. ರಾಜಣ್ಣ ತುಮಕೂರಲ್ಲಿ ಹೇಳಿದರು.

ಸುದ್ದಿ 2 ನಿಮಿಷ

'ಮತ ಮಾರಾಟಕ್ಕಿಲ್ಲ' ಜನಾಂದೋಲನವಾಗಲಿ: ಕಾಗೇರಿ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): 'ಚುನಾವಣೆಗಳಲ್ಲಿ ಹಣ, ಹೆಂಡ, ಇತರ ಆಮಿಷಗಳಿಗೆ ಮತ ಮಾರಿಕೊಳ್ಳುವುದಿಲ್ಲ ಎಂದು ಪ್ರತಿ ಪ್ರಜೆಯೂ ಅಭಿಯಾನ ಆರಂಭಿಸಿ, ಶ್ರೇಷ್ಠ ಪ್ರಜಾಸತ್ತಾತ್ಮಕ ಸಂಸದೀಯ ವ್ಯವಸ್ಥೆ ರಕ್ಷಿಸಬೇಕು' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಜಿಬಿಆರ್ ಕಾಲೇಜು ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, 'ಹಣದ ಆಮಿಷ, ಜಾತಿ, ಉಪ ಜಾತಿ, ತೋಳ್ಬಲಕ್ಕೆ ಮತಗಳು ಮಾರಾಟವಾಗುತ್ತಿರುವುದು ಅಪಾಯದ ಸಂಕೇತ. ಅಂಬೇಡ್ಕರ್ ಅವರ ಕೊಡುಗೆಯಿಂದ ಜಗತ್ತಿಗೆ ಮಾದರಿಯಾದ ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆ ಹೊಂದಿದ್ದೇವೆ. ಆದರ್ಶ ಸಂಸದೀಯ ವ್ಯವಸ್ಥೆ ರಕ್ಷಿಸಿ, ಇನ್ನಷ್ಟು ಶಕ್ತಿಯುತವಾಗಿ ಬೆಳೆಸಬೇಕಿದೆ. ಯುವ ಸಮೂಹ ಜವಾಬ್ದಾರಿ ಅರಿತು ಪ್ರಜಾಪ್ರಭುತ್ವದ ಕಾವಲುಗಾರರಾಗಿ ಕೆಲಸ ಮಾಡಬೇಕು' ಎಂದರು.



'ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸೇರಿದಂತೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಆದರ್ಶ ಮೌಲ್ಯಗಳು ಕುಸಿದಿವೆ. ಈ ವಿಷ ವರ್ತುಲದಿಂದ ಹೊರ ಬರಬೇಕಾದ ಅಗತ್ಯವಿದೆ. ವ್ಯವಸ್ಥೆ ಆಮೂಲಾಗ್ರ ಬದಲಾವಣೆ ತರುವುದು ಅವಶ್ಯವಿದೆ' ಎಂದರು.

ಉದ್ದೇಶಪೂರ್ವಕ ಜಾತಿನಿಂದನೆ ಮಾತ್ರ ಅಪರಾಧ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇವಲ ಜಾತಿ ಹಿಡಿದು ಬೈಯ್ದಾಕ್ಷಣ ಅದನ್ನು ಪರಿಶಿಷ್ಟ ಜಾತಿ (ಎಸ್ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್ಟಿ) ದೌರ್ಜನ್ಯ ತಡೆ ಕಾಯ್ದೆಯಡಿಯ ಅಪರಾಧ ಎಂದು ಪರಿಗಣಿಸಲು ಆಗದು. ಉದ್ದೇಶಪೂರ್ವಕ ಮತ್ತು ಅಪಮಾನ ಮಾಡುವುದಕ್ಕಾಗಿಯೇ ಜಾತಿ ನಿಂದನೆ ಮಾಡಿದರಷ್ಟೇ ಅಪರಾಧ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಿಸಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಆನೇಕಲ್‌ನ ಸೂರ್ಯನಗರದ ವಿ.ಶಶಿಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಮಾನ್ಯ ಮಾಡಿದೆ.

'ಈ ಪ್ರಕರಣದಲ್ಲಿ ಜಗಳ ನಡೆದಾಗ ಎರಡೂ ಕಡೆಯವರ ಮಧ್ಯೆ ಮಾತಿಗೆ ಮಾತು ಬೆಳೆದಿದೆ. ಆರೋಪಿಯು ಉದ್ದೇಶಪೂರ್ವಕವಾಗಿ ಅಥವಾ ಅಪಮಾನ ಮಾಡಲೆಂದೇ ಜಾತಿ ನಿಂದನೆ ಮಾಡಿದ್ದಾನೆ ಎನ್ನುವುದಕ್ಕೆ ಯಾವುದೇ ವಿವರಗಳಿಲ್ಲ. ಆರೋಪ ಪಟ್ಟಿ ಮತ್ತು ಸಾಕ್ಷಿಗಳ ಹೇಳಿಕೆಯಲ್ಲೂ ಕೂಡಾ ಯಾಕಾಗಿ ಜಾತಿ ನಿಂದನೆ ಮಾಡಲಾಯಿತು, ಹೇಗೆ ಮಾಡಲಾಯಿತು ಎಂಬುದರ ವಿವರಗಳಿಲ್ಲ. ಹೀಗಾಗಿ, ಈ ಪ್ರಕರಣ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ವಿಚಾರಣೆಗೆ ಊರ್ಜಿತವಲ್ಲ' ಎಂದು ನ್ಯಾಯಪೀಠ ಹೇಳಿದೆ.

ಅರ್ಜಿದಾರರ ವಿರುದ್ಧದ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಕಲಂ 3(1)(ಆರ್) ಮತ್ತು (ಎಸ್)ರ ಅಡಿಯ ಆರೋಪಗಳನ್ನು ರದ್ದುಗೊಳಿಸಿರುವ ನ್ಯಾಯಪೀಠ, ಭಾರತೀಯ ದಂಡ ಸಂಹಿತೆ ಕಲಂಗಳಡಿ ದಾಖಲಾಗಿರುವ ಪ್ರಕರಣದ ಮುಂದುವರಿಕೆಗೆ ಅನುಮತಿ ನೀಡಿದೆ.

ಪ್ರಕರಣವೇನು?: 'ನನ್ನ ಮಗ ಮತ್ತು ಆತನ ಸ್ನೇಹಿತರು ಕ್ರಿಕೆಟ್ ಆಡುತ್ತಿದ್ದ ವೇಳೆ ಎರಡು ತಂಡಗಳ ನಡುವೆ ಜಗಳ ನಡೆದಿದೆ. ಆಗ ನನ್ನ ಮಗನನ್ನು ಥಳಿಸಲಾಗಿದೆ' ಎಂದು ಆರೋಪಿಸಿ ಜಯಮ್ಮ ಎಂಬುವವರು 2020ರ ಜೂನ್ 14ರಂದು ಪೊಲೀಸರಿಗೆ ದೂರು ನೀಡಿದ್ದರು. ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ತನಿಖೆಯ ವೇಳೆ, 'ಫಿರ್ಯಾದಿದಾರರ ಮಗನನ್ನು ಕೇವಲ ಥಳಿಸಿಲ್ಲ, ಅವಾಚ್ಯ ಶಬ್ದಗಳಿಂದಲೂ ನಿಂದಿಸಲಾಗಿದೆ' ಎಂದು ಆರೋಪಿಸಿದ್ದ ಕಾರಣ ತನಿಖೆ ಮುಂದುವರಿಸಿದ ಪೊಲೀಸರು, ಅರ್ಜಿದಾರರು ಹಾಗೂ ಇತರ ಆರೋಪಿಗಳ ವಿರುದ್ಧ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಕಲಂ 3(1)(ಆರ್) ಮತ್ತು (ಎಸ್) ಅಡಿಯಲ್ಲಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದರು.

'ಬಿಜೆಪಿಯಲ್ಲೇ ಕುಟುಂಬ ರಾಜಕಾರಣ'

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಬಿಜೆಪಿಯಲ್ಲೇ ಕುಟುಂಬ ರಾಜಕಾರಣವಿದೆ. ಕ್ರಿಕೆಟ್ ಕ್ಷೇತ್ರದಲ್ಲಿ ಅನುಭವ, ಕೊಡುಗೆ ಇಲ್ಲದ ತಮ್ಮ ಪುತ್ರನಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿ (ಬಿಸಿಸಿಐ) ದೊಡ್ಡ ಜವಾಬ್ದಾರಿ ಕೊಡಿಸಿ, ಸುಪ್ರೀಂ ಕೋರ್ಟ್ ತೀರ್ಪು ಉಲ್ಲಂಘಿಸಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

'ಯಾವುದೇ ವೃತ್ತಿ ಆಯ್ಕೆ ಮಾಡಿಕೊಳ್ಳಲು ಸಂವಿಧಾನ ಚೌಕಟ್ಟಿನಲ್ಲಿ ಅವಕಾಶವಿದೆ. ವೈದ್ಯರು, ನ್ಯಾಯಾಧೀಶರು, ಐಎಎಸ್ ಅಧಿಕಾರಿಗಳ ಮಕ್ಕಳು ಆಯಾ ವೃತ್ತಿ ಆಯ್ಕೆ ಮಾಡಿಕೊಂಡಂತೆ ರಾಜಕಾರಣಿಗಳ ಮಕ್ಕಳು ರಾಜಕಾರಣಿ ಆಗುವರು' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಶೇ 40 ಕಮಿಷನ್: ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಆಗ್ರಹ

ನವದೆಹಲಿ: 'ಬಿಜೆಪಿಯವರು ಸತ್ಯ ಹರಿಶ್ಚಂದ್ರನ ಮಕ್ಕಳಾಗಿದ್ದರೆ ಗುತ್ತಿಗೆಗಳಲ್ಲಿ ಶೇ 40 ಕಮಿಷನ್ ಆರೋಪದ ಬಗ್ಗೆ ಈಗಲಾದರೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಕಾಂಗ್ರೆಸ್ ಅವಧಿಯ ಭ್ರಷ್ಟಾಚಾರ ಆರೋಪಗಳ ಬಗ್ಗೆಯೂ ತನಿಖೆ ನಡೆಸಲಿ' ಎಂದು ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಎಸೆದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಿಷಯದಲ್ಲಿ ದಮ್, ತಾಕತ್ ಪ್ರದರ್ಶಿಸಲಿ' ಎಂದರು. ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕ ಎಟಿಎಂ ಆಗಿದೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಕ್ಕೆ ತಿರುಗೇಟು ನೀಡಿದರು.

'ಕಳೆದ ಚುನಾವಣೆ ಸಂದರ್ಭದಲ್ಲಿ ನಮ್ಮ ಸರ್ಕಾರದ ವಿರುದ್ಧ ರಾಜಕೀಯ ಭಾಷಣಕ್ಕಾಗಿ ಶೇ 10 ಭ್ರಷ್ಟಾಚಾರದ ಆರೋಪ ಮಾಡಿದರು. ಯಾವುದೇ ದಾಖಲೆಗಳನ್ನು ನೀಡಲಿಲ್ಲ. ಆದರೆ, ಬಿಜೆಪಿ ಸರ್ಕಾರದ ಮೇಲೆ ಶೇ 40 ಕಮಿಷನ್ ಆರೋಪ ಇದೆ. ಗುತ್ತಿಗೆದಾರರ ಸಂಘದವರು ದಾಖಲೆ ಸಮೇತ ಪ್ರಧಾನಿಗೆ ದೂರು ನೀಡಿದ್ದಾರೆ. ಇಬ್ಬರು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ, ಬಿಜೆಪಿಯವರು ತನಿಖೆ ನಡೆಸುತ್ತಿಲ್ಲ' ಎಂದರು.

'ಹಿಂದುತ್ವದ ರಾಜಕಾರಣ ಬಹಳ ಅಪಾಯಕಾರಿ. ಬಿಜೆಪಿಯವರು ಹಿಂದೂ ರಾಷ್ಟ್ರ ಮಾಡುತ್ತೇವೆ, ಹಿಂದುತ್ವದ ದೇಶ ಮಾಡುತ್ತೇವೆ ಎಂಬ ಹೇಳುತ್ತಾರೆ. ಇವೆಲ್ಲ ದೇಶಕ್ಕೆ ಅಪಾಯಕಾರಿ' ಎಂದರು.

ಪಂಚಮಸಾಲಿ 2 ಎ ವಿರೋಧಿಸಿದ ಅರ್ಜಿ: ಫೆ. 3ಕ್ಕೆ ವರದಿ ಸಲ್ಲಿಕೆ

ಬೆಂಗಳೂರು: 'ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ-2ಎಗೆ ಸೇರ್ಪಡೆ ಮಾಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಇತ್ತೀಚೆಗೆ ಸಲ್ಲಿಸಿರುವ ಮಧ್ಯಂತರ ವರದಿಯನ್ನು ಫೆಬ್ರುವರಿ 3ರಂದು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಬೆಂಗಳೂರಿನ ಜ್ಞಾನಭಾರತಿಯ ಮೃತ್ಯುಂಜಯ ನಗರದ ನಿವಾಸಿ ಡಿ.ಜಿ ರಾಘವೇಂದ್ರ ಬಿನ್ ಸೂರ್ಯ ದೇವಾಡಿಗ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಆಯೋಗವು ಇತ್ತೀಚೆಗೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ಮಧ್ಯಂತರ ವರದಿಯನ್ನು ಫೆಬ್ರುವರಿ 3ರಂದು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 3ಕ್ಕೆ ಮುಂದೂಡಿತು.

13 ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ರಾಮನಗರ, ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಎಸ್‌ಪಿಗಳು ಸೇರಿದಂತೆ 13 ಐಪಿಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ.

ವರ್ಗಾವಣೆ ವಿವರ: ಕಾರ್ತಿಕ್ ರೆಡ್ಡಿ– ಎಸ್‌ಪಿ, ರಾಮನಗರ; ವಿನಾಯಕ್ ವಸಂತರಾವ್ ಪಾಟೀಲ್– ಅಸಿಸ್ಟೆಂಟ್ ಐಜಿಪಿ, ಬೆಂಗಳೂರು; ಕೆ. ಸಂತೋಷ್ ಬಾಬು– ಎಸ್‌ಪಿ, ಗುಪ್ತದಳ; ಡಿ. ದೇವರಾಜ್– ಡಿಸಿಪಿ, ಬೆಂಗಳೂರು ಉತ್ತರ ವಿಭಾಗ; ಡಿ.ಆರ್. ಸಿರಿಗೌರಿ– ಎಸ್‌ಪಿ, ಆಂತರಿಕ ಭದ್ರತಾ ವಿಭಾಗ; ಟಿ.ಪಿ. ಶಿವಕುಮಾರ್– ಎಸ್‌ಪಿ, ಕೆಪಿಟಿಸಿಎಲ್; ಶೇಖರ್ ಎಚ್. ಟೆಕ್ಕಣ್ಣನವರ್– ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ, ಬೆಳಗಾವಿ ನಗರ.

ಪದ್ಮಿನಿ ಸಾಹೂ– ಎಸ್‌ಪಿ ಚಾಮರಾಜನಗರ; ಪ್ರದೀಪ್ ಗುಂಟಿ– ಎಸ್‌ಪಿ, ಬಂದಿಖಾನೆ; ಗೀತಾ ಎಂ.ಎಸ್.– ಪ್ರಾಂಶುಪಾಲೆ, ಪೊಲೀಸ್ ತರಬೇತಿ ಶಾಲೆ, ಮೈಸೂರು; ಕೆ.ರಾಮರಾಜನ್– ಎಸ್‌ಪಿ, ಕೊಡಗು; ರವೀಂದ್ರ ಕಾಶಿನಾಥ್ ಗಡಾದಿ– ಡಿಸಿಪಿ, ಕಮಾಂಡ್ ಸೆಂಟರ್ ಮತ್ತು ಅಯ್ಯಪ್ಪ ಎಂ.ಎ.– ಎಸ್‌ಪಿ, ಗುಪ್ತದಳ.

ಶರಣ್ ಪಂಪ್‌ವೆಲ್ ಬಂಧಿಸಿ: ಮೃತ ಫಾಝಿಲ್ ತಂದೆ ಫಾರೂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿ ಫಾಝಿಲ್ ಹತ್ಯೆ ನಡೆಸಲಾಗಿದೆ ಎಂದು ಹೇಳಿಕೆ ನೀಡಿರುವ ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಅವರನ್ನು ಬಂಧಿಸಬೇಕು' ಎಂದು ಫಾಝಿಲ್ ಅವರ ತಂದೆ ಸುರತ್ಕಲ್ ಮಂಗಳಪೇಟೆಯ ಉಮರ್ ಫಾರೂಕ್ ಅವರು ಒತ್ತಾಯಿಸಿದ್ದಾರೆ.

ಅವರು ಮಂಗಳೂರು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರನ್ನು ಸೋಮವಾರ ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

'ಫಾಝಿಲ್ ಹತ್ಯೆಯನ್ನು ತುಮಕೂರಿನಲ್ಲಿ ನಡೆದ ಸಮಾವೇಶದಲ್ಲಿ ಶರಣ್ ಪಂಪ್‌ವೆಲ್ ಅವರು ಸಮರ್ಥಿಸಿಕೊಂಡಿದ್ದಾರೆ. ಈ ವಿಚಾರವಾಗಿ ಅವರಿಗೆ ಹೆಚ್ಚಿನ ಮಾಹಿತಿ ಇದೆ. ಹಾಗಾಗಿ ಅವರನ್ನು ಬಂಧಿಸಿ ವಿಚಾರಣೆಗೊಳಪಡಿಸಬೇಕು' ಎಂದು ಉಮರ್ ಫಾರೂಕ್ ಒತ್ತಾಯಿಸಿದ್ದಾರೆ.

'ಪ್ರವೀಣ್ ನೆಟ್ಟಾರ್ ಹತ್ಯೆಗೆ ಪ್ರತೀಕಾರವಾಗಿ ಸುರತ್ಕಲ್‌ನ ಫಾಝಿಲ್‌ನನ್ನು ನಮ್ಮವರೇ ಕೊಲೆ ಮಾಡಿರುವುದಾಗಿ ಸ್ವತಃ ಶರಣ್ ಪಂಪ್‌ವೆಲ್ ಹೇಳಿರುವುದರಿಂದ ಈ ಪ್ರಕರಣದ ಮರು ತನಿಖೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್ ಒತ್ತಾಯಿಸಿದರು.

ಶರಣ್ ಪಂಪ್‌ವೆಲ್ ಅವರನ್ನು ಬಂಧಿಸಿ ಕಾನೂನು ಕ್ರಮಕೈಗೊಳ್ಳಬೇಕು ಎಂದು ಡಿವೈಎಫ್ಐ ಹಾಗೂ ಎಸ್‌ಡಿಪಿಐ ಒತ್ತಾಯಿಸಿವೆ.

'ಈ ಬಗ್ಗೆ ಕಾನೂನು ಸಲಹೆ ಕೇಳಿದ್ದೇವೆ. ಅದನ್ನು ಆಧರಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಅದಾನಿ ಪ್ರಕರಣ: ಸೆಬಿ ತನಿಖೆಗೆ ಆಗ್ರಹ

ಬಜೆಟ್ ಅಧಿವೇಶನ: ಸರ್ವಪಕ್ಷ ಸಭೆ; ರಾಜ್ಯಪಾಲರ ನಡೆ ಬಗ್ಗೆ ಚರ್ಚೆಗೆ ಪಟ್ಟು

ನವದೆಹಲಿ (ಪಿಟಿಐ): ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಕೆ–ಇಳಿಕೆ ಮಾಡಿರುವ ಆರೋಪ ಎದುರಿಸುತ್ತಿರುವ ಅದಾನಿ ಸಮೂಹವನ್ನು 'ಸೆಬಿ' ತನಿಖೆಗೆ ಒಳಪಡಿಸಬೇಕು ಎಂದು ಪ್ರತಿಪಕ್ಷಗಳು ಸೋಮವಾರ ಆಗ್ರಹಿಸಿವೆ. ಕಾನೂನಿನ ಅಡಿಯಲ್ಲಿ ಸಾಧ್ಯವಿರುವ ಎಲ್ಲ ವಿಚಾರಗಳ ಚರ್ಚೆಗೆ ಅವಕಾಶವಿದೆ ಎಂದು ಸರ್ಕಾರ ಪ್ರತಿಪಾದಿಸಿದೆ.

ಬಜೆಟ್ ಅಧಿವೇಶಕ್ಕೂ ಮುನ್ನ, ಸಂಸದೀಯ ವ್ಯವಹಾರಗಳ ಸಚಿವಾಲಯ ಸೋಮವಾರ ಕರೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಅದಾನಿ ಸಮೂಹದ ಮೇಲೆ ಇರುವ ಅಕ್ರಮ ಆರೋಪ, ರಾಜ್ಯಪಾಲರ ನಡೆ ಹಾಗೂ ಇತರ ವಿಚಾರಗಳನ್ನು ಪ್ರತಿಪಕ್ಷಗಳು ಪ್ರಸ್ತಾಪಿಸಿದವು.

ಅದಾನಿ ಸಮೂಹವು ಷೇರು ಮಾರುಕಟ್ಟೆಯಲ್ಲಿ ಹಾಗೂ ಉದ್ಯಮದಲ್ಲಿ ಅವ್ಯವಹಾರ ನಡೆಸಿದೆ ಎಂಬುದಾಗಿ 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆ ತನ್ನ ವರದಿಯಲ್ಲಿ ಆರೋಪಿಸಿದ್ದು, ಅದಾನಿ ಕಂಪನಿಗಳಲ್ಲಿ ಎಸ್‌ಬಿಐ ಹಾಗೂ ಎಲ್‌ಐಸಿ ಮಾಡಿರುವ ಹೂಡಿಕೆಯ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು ಎಂದು ಆಗ್ರಹಿಸಿದವು.

ಪ್ರತಿಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಹಸ್ತಕ್ಷೇಪ ನಡೆಸುತ್ತಿದ್ದು, ಅವರು ರಾಜಕೀಯಕ್ಕೆ ಇಳಿದಿದ್ದಾರೆ ಎಂದು ರಾಜ್ಯಸಭೆಯಲ್ಲಿ ಶಿವಸೇನಾ ಉಪನಾಯಕಿ ಪ್ರಿಯಾಂಕಾ ಚತುರ್ವೇದಿ ಆರೋಪಿಸಿದರು. ಬಿಆರ್‌ಎಸ್ ಹಾಗೂ ಡಿಎಂಕೆ ಇದಕ್ಕೆ ದನಿಗೂಡಿಸಿದವು. ದೇಶದಾದ್ಯಂತ ಜಾತಿ ಆಧಾರಿತ ಆರ್ಥಿಕ ಗಣತಿ ನಡೆಸುವಂತೆ ವೈಎಸ್‌ಆರ್‌ಸಿ ಆಗ್ರಹಿಸಿತು. ಟಿಆರ್‌ಎಸ್, ಟಿಎಂಸಿ, ಬಿಜೆಡಿ ಇದನ್ನು ಬೆಂಬಲಿಸಿದವು. ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡದ ಕೇಂದ್ರದ ನಡೆಯ ಬಗ್ಗೆ ಚರ್ಚೆಗೆ ಟಿಎಂಸಿ ಒತ್ತಾಯಿಸಿದೆ.

ರಾಜ್ಯಗಳಿಗೆ ಆದಾಯ ಹಂಚಿಕೆಯಲ್ಲಿ ತಾರತಮ್ಯ, ಹಣದುಬ್ಬರ, ನಿರುದ್ಯೋಗ ವಿಚಾರಗಳನ್ನು ಪ್ರಸ್ತಾಪಿಸುವ ಸುಳಿವನ್ನು ಪ್ರಾದೇಶಿಕ ಪಕ್ಷಗಳು ನೀಡಿದವು. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಟಿಎಂಸಿ ಸೇರಿದಂತೆ ಹಲವು ಪಕ್ಷಗಳು ಆಗ್ರಹಿಸಿದವು.

'ಸಂಸತ್ ಕಲಾಪ ಸುಗಮವಾಗಿ ಸಾಗಲು ಪ್ರತಿಪಕ್ಷಗಳ ಸಹಕಾರ ಅಗತ್ಯ. ಕಾನೂನಿನ ಅಡಿಯಲ್ಲಿ ಎಲ್ಲ ವಿಚಾರಗಳ ಚರ್ಚೆಗೆ ಸರ್ಕಾರ ಸಿದ್ಧ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಅವರು ಹೇಳಿದರು. 27 ಪಕ್ಷಗಳ 37 ಸದಸ್ಯರು ಸಭೆಯಲ್ಲಿ ಭಾಗಿಯಾಗಿದ್ದರು.

ಸರ್ಕಾರದ ಹಲವು ನಡೆಗಳನ್ನು ಖಂಡಿಸಿ, ರಾಷ್ಟ್ರಪತಿ ಭಾಷಣವನ್ನು ಬಹಿಷ್ಕರಿಸುವ ಬಗ್ಗೆ ಬಿಆರ್‌ಎಸ್ ಪಕ್ಷವು ಇತರ ಪಕ್ಷಗಳ ಜೊತೆ ಸಮಾಲೋಚನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಅಧಿವೇಶನ ಇಂದಿನಿಂದ

- ಸಂಸತ್ತಿನ ಬಜೆಟ್ ಅಧಿವೇಶನವು ಮಂಗಳವಾರ ಆರಂಭವಾಗಲಿದ್ದು, ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಲಿದ್ದಾರೆ
- ರಾಷ್ಟ್ರಪತಿ ಭಾಷಣದ ನಂತರ ಆರ್ಥಿಕ ಸಮೀಕ್ಷೆ ಮಂಡನೆ
- ಫೆ.1ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸಲಿದ್ದಾರೆ. 2024ರ ಲೋಕಸಭೆ ಚುನಾವಣೆಗೂ ಮುನ್ನ ನಡೆಯುವ ಕೊನೆಯ ಪೂರ್ಣಪ್ರಮಾಣದ ಬಜೆಟ್ ಇದಾಗಿದೆ
- ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರ 36 ಮಸೂದೆಗಳನ್ನು ಮಂಡಿಸಲು ಉದ್ದೇಶಿಸಿದೆ
- ಎರಡು ಭಾಗಗಳಲ್ಲಿ ಬಜೆಟ್ ಅಧಿವೇಶನವು ನಡೆಯಲಿದೆ. ಮೊದಲ ಭಾಗವು ಫೆ. 14ಕ್ಕೆ ಪೂರ್ಣಗೊಳ್ಳಲಿದೆ. ಎರಡನೇ ಭಾಗವು ಮಾರ್ಚ್ 12ಕ್ಕೆ ಆರಂಭವಾಗಿ ಏಪ್ರಿಲ್ 6ಕ್ಕೆ ಕೊನೆಗೊಳ್ಳಲಿದೆ

ಸಿರಿಧಾನ್ಯಗಳ ಸವಿ

ತರಕಾರಿ ಹಾಕಿದ ಜೋಳದ ಉಪ್ಪಿಟ್ಟು, ರಾಗಿ ದೋಸೆ, ಸಜ್ಜೆಯಿಂದ ಮಾಡಿದ ಟಿಕ್ಕಿ, ಸಜ್ಜೆ ಕಿಚಡಿ– ಇವು ಬಜೆಟ್ ಅಧಿವೇಶನದ ರುಚಿ ಹೆಚ್ಚಿಸಲಿವೆ!

ವಿವಿಧ ರಾಜ್ಯಗಳಲ್ಲಿ ಸಿರಿಧಾನ್ಯಗಳಿಂದ ಮಾಡುವ ವಿಶೇಷ ಪದಾರ್ಥಗಳ ಸವಿಯನ್ನು ಸಂಸದರು, ಸಿಬ್ಬಂದಿ ಹಾಗೂ ವೀಕ್ಷಕರು ಈ ಬಾರಿಯ ಅಧಿವೇಶನದಲ್ಲಿ ಸವಿಯಲಿದ್ದಾರೆ.

ಕೇಂದ್ರವು ಸಿರಿಧಾನ್ಯಗಳ ಬಳಕೆಗೆ ಒತ್ತು ನೀಡಿದೆ. ಇದೇ ಕಾರಣಕ್ಕೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, ಈ ಬಾರಿ ರಾಗಿ, ಜೋಳ, ಸಜ್ಜೆ, ರಾಜಗಿರಿ ಮುಂತಾದ ಸಿರಿಧಾನ್ಯಗಳಿಂದಲೇ ತಿನಿಸುಗಳನ್ನು ಮಾಡಬೇಕು ಎಂದಿದ್ದಾರೆ.

ಏನೇನಿರಲಿದೆ?: ಓಟ್ಸ್ ಹಾಲು ಅಥವಾ ಸೋಯಾ ಹಾಲು, ಸಜ್ಜೆ ಸೂಪು, ರಾಗಿ, ಬಟಾಣಿಯ ಸೂಪು, ಸಜ್ಜೆ ಈರುಳ್ಳಿ ಕಟ್‌ಲೆಟ್, ರಾಗಿ ಮತ್ತು ರವಾ ಇಡ್ಲಿ, ಸಾಂಬಾರು ಇರಲಿವೆ. ಇದರೊಂದಿಗೆ ರಾಗಿ ದೋಸೆ, ಶೇಂಗಾ ಚಟ್ನಿ, ರಾಜಗಿರಿ ಪೂರಿ ಜೊತೆಗೆ ಆಲೂಗಡ್ಡೆ ಪಲ್ಯ, ಸಜ್ಜೆ ಅಥವಾ ರಾಗಿ ರೊಟ್ಟಿ, ಸಜ್ಜೆಯ ಕಿಚಡಿ ಇರಲಿದೆ.



ಬಜೆಟ್ ಅಧಿವೇಶನಕ್ಕೂ ಮುನ್ನ, ದೆಹಲಿಯಲ್ಲಿ ಸೋಮವಾರ ಸರ್ವಪಕ್ಷಗಳ ಸಭೆ ನಡೆಯಿತು — ಪಿಟಿಐ ಚಿತ್ರ

'15 ವರ್ಷಕ್ಕಿಂತ ಹಳೆಯದಾದ 9 ಲಕ್ಷ ಸರ್ಕಾರಿ ವಾಹನ ಗುಜರಿಗೆ'



ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಾರಿಗೆ ನಿಗಮಗಳು, ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿರುವ 15 ವರ್ಷಕ್ಕಿಂತಲೂ ಹಳೆಯದಾದ ಸುಮಾರು 9 ಲಕ್ಷ ವಾಹನಗಳ ಬಳಕೆಯನ್ನು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲಾಗುವುದು.

ಸೋಮವಾರ ಎಫ್‌ಐಸಿಸಿಐ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು, 'ಈ ವಾಹನಗಳ ಬದಲಿಗೆ, ಪರ್ಯಾಯ ಇಂಧನ ಆಧಾರಿತ ನೂತನ ವಾಹನಗಳು ಬಳಕೆಯಾಗಲಿವೆ' ಎಂದು ತಿಳಿಸಿದರು.

ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಾಹನಗಳ ಬಳಕೆ ಕೈಬಿಡುವುದು ಹಾಗೂ ಪರ್ಯಾಯ ಇಂಧನ ಆಧಾರಿತ ವಾಹನಗಳ ಬಳಕೆಯನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದರು.

15 ವರ್ಷಕ್ಕಿಂತಲೂ ಹಳೆಯದಾದ ವಾಹನಗಳ ಬಳಕೆಯನ್ನು ಏಪ್ರಿಲ್ 1ರಿಂದ ಕೈಬಿಡಬೇಕು. ಈ ಆದೇಶವು ರಕ್ಷಣಾ ಇಲಾಖೆ ಮತ್ತು ಆಂತರಿಕ ಭದ್ರತೆಗೆ ಸಂಬಂಧಿತ ವಾಹನಗಳಿಗೆ ಅನ್ವಯಿಸದು ಎಂದು ಭೂಸಾರಿಗೆ ಸಚಿವಾಲಯವು ಇತ್ತೀಚೆಗೆ ಅಧಿಸೂಚನೆ ಹೊರಡಿಸಿತ್ತು.

ಕೇಂದ್ರ ಸರ್ಕಾರ 2021–022ನೇ ಸಾಲಿನ ಬಜೆಟ್‌ನಲ್ಲಿ ಹಳೇ ವಾಹನಗಳ ಗುಜರಿ ನೀತಿ ಪ್ರಕಟಿಸಿತ್ತು. ಏಪ್ರಿಲ್ 1, 2022ರಿಂದ ಜಾರಿಗೆ ಬರುವ ಈ ನೀತಿಯ ಪ್ರಕಾರ, ಹಳೇ ವಾಹನಗಳನ್ನು ಗುಜರಿಗೆ ಹಾಕಿ ಹೊಸ ವಾಹನ ಖರೀದಿಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು, ಚಕೇಂದ್ರಾಡಳಿತ ಪ್ರದೇಶಗಳು ರಸ್ತೆ ತೆರಿಗೆಯಲ್ಲಿ ಶೇ 25ರಷ್ಟು ರಿಯಾಯಿತಿ ನೀಡಲಿವೆ ಎಂದು ಪ್ರಕಟಿಸಲಾಗಿತ್ತು.

2002 ಗುಜರಾತ್ ಗಲಭೆ ಕುರಿತ ಬಿಬಿಸಿ ಸಾಕ್ಷ್ಯಚಿತ್ರ • ಅಸಾಂವಿಧಾನಿಕ ಕ್ರಮ: ಆರೋಪ

ಸಾಕ್ಷ್ಯಚಿತ್ರ ತಡೆ ಪ್ರಶ್ನಿಸಿ ಅರ್ಜಿ: ಫೆ.6ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): 2002ರ ಗುಜರಾತ್ ಗಲಭೆಗಳ ಕುರಿತ ಬಿಬಿಸಿ 'ಇಂಡಿಯಾ: ದ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರಕ್ಕೆ ತಡೆಯೊಡ್ಡಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮುಂದಿನ ಸೋಮವಾರ (ಫೆ. 6) ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಹಿರಿಯ ಪತ್ರಕರ್ತ ಎನ್. ರಾಮ್ ಹಾಗೂ ಸಾಮಾಜಿಕ ಕಾರ್ಯಕರ್ತ ಹಾಗೂ ವಕೀಲ ಪ್ರಶಾಂತ್ ಭೂಷಣ್ ಸಲ್ಲಿಸಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ಪ್ರಶಾಂತ್ ಪರ ವಕೀಲ ಎಂ.ಎಲ್. ಶರ್ಮಾ ಸೋಮವಾರ ಕೋರಿದರು.



ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲಾ ಅವರನ್ನೊಳಗೊಂಡ ಪೀಠವು ಈ ಅರ್ಜಿಯ ವಿಚಾರಣೆ ನಡೆಸುತ್ತಿದೆ.

ಎನ್. ರಾಮ್ ಮತ್ತು ಪ್ರಶಾಂತ್ ಭೂಷಣ್ ಅವರ ಪರವಾಗಿ ಪ್ರತ್ಯೇಕ ಅರ್ಜಿ ಸಲ್ಲಿಸಿರುವ ಹಿರಿಯ ವಕೀಲ ಸಿ.ಯು. ಸಿಂಗ್ ಅವರು, 'ತುರ್ತು ಅಧಿಕಾರವನ್ನು ಬಳಸಿ ರಾಮ್ ಮತ್ತು ಭೂಷಣ್ ಅವರ ಟ್ವೀಟ್‌ಗಳನ್ನು ಅಳಿಸಿ ಹಾಕಲಾಗಿದೆ. ಬಿಬಿಸಿ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಿದ ಅಜ್ಮೀರ್‌ನ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದ ಹೊರಗಿಡಲಾಗಿದೆ' ಎಂದು ಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ ಅವರು 'ಈ ಬಗ್ಗೆ ವಿಚಾರಣೆ' ನಡೆಸುವುದಾಗಿ ತಿಳಿಸಿದರು.

'ಸಾಕ್ಷ್ಯಚಿತ್ರಕ್ಕೆ ತಡೆಯೊಡ್ಡಿರುವ ಕೇಂದ್ರ ಸರ್ಕಾರದ ನಿರ್ಧಾರವು ಅನಿಯಂತ್ರಿತ ಹಾಗೂ ಅಸಾಂವಿಧಾನಿಕ ಕ್ರಮವಾಗಿದೆ' ಎಂದು ಆರೋಪಿಸಿದ ವಕೀಲ ಶರ್ಮಾ ಅವರು, 'ಸಾಕ್ಷ್ಯಚಿತ್ರ ಪ್ರದರ್ಶಿಸಿದವರನ್ನು ಬಂಧಿಸಲಾಗುತ್ತಿದೆ. ದಯವಿಟ್ಟು ತುರ್ತಾಗಿ ವಿಚಾರಣೆ ನಡೆಸಬೇಕು' ಎಂದು ಮನವಿ ಮಾಡಿದರು.

'ಕೋರ್ಟ್ ಅಮೂಲ್ಯ ಸಮಯ ವ್ಯರ್ಥ'

ನವದೆಹಲಿ: ಬಿಬಿಸಿ ಸಾಕ್ಷ್ಯಚಿತ್ರವನ್ನು ತಡೆಹಿಡಿಯುವ ಕೇಂದ್ರದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿರುವ ಅರ್ಜಿದಾರರ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, 'ಸುಪ್ರೀಂ ಕೋರ್ಟ್‌ನ ಅಮೂಲ್ಯವಾದ ಸಮಯವನ್ನು ಅವರು (ಅರ್ಜಿದಾರರು) ಈ ರೀತಿ ವ್ಯರ್ಥ ಮಾಡುತ್ತಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

ಬಿಬಿಸಿಯಿಂದ ಮಾಹಿತಿ ಯುದ್ಧ: ರಷ್ಯಾ ಆರೋಪ



ಮಾರಿಯಾ ಜಖರೋವಾ

ಮಾಸ್ಕೊ (ಪಿಟಿಐ): ಬಿಬಿಸಿಯು ರಷ್ಯಾದ ವಿರುದ್ಧವಷ್ಟೇ ಅಲ್ಲದೆ ಸ್ವತಂತ್ರ ನೀತಿಗಳನ್ನು ಹೊಂದಿರುವ ಜಾಗತಿಕ ಶಕ್ತಿ ಕೇಂದ್ರಗಳ ವಿರುದ್ಧವೂ 'ಮಾಹಿತಿ ಯುದ್ಧ' ನಡೆಸುತ್ತಿದೆ ಎಂದು ರಷ್ಯಾ ಆರೋಪಿಸಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಿವಾದಾತ್ಮಕ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದ ಕೆಲ ದಿನಗಳ ಬಳಿಕ ರಷ್ಯಾ ಈ ಪ್ರತಿಕ್ರಿಯೆ ನೀಡಿದೆ.

'ನಮ್ಮ ಮಿತ್ರ ದೇಶವಾದ ಭಾರತದ ಸ್ನೇಹಿತರು ಈ ಕುರಿತು ಈಗಾಗಲೇ ಪ್ರತಿಕ್ರಿಯಿಸಿದ್ದಾರೆ. ಬಿಬಿಸಿಯು ರಷ್ಯಾದ ವಿರುದ್ಧವಷ್ಟೇ ಅಲ್ಲದೆ ಸ್ವತಂತ್ರ ನೀತಿಗಳನ್ನು ಹೊಂದಿರುವ ಜಾಗತಿಕ ಶಕ್ತಿ ಕೇಂದ್ರಗಳ ವಿರುದ್ಧವೂ 'ಮಾಹಿತಿ ಯುದ್ಧ' ನಡೆಸುತ್ತಿದೆ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ' ಎಂದು ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಜಖರೋವಾ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ.

'ಬಿಬಿಸಿ ಸ್ವತಂತ್ರವಾಗಿ ಉಳಿದಿಲ್ಲ. ಅದೂ ಅವಲಂಬಿತವಾಗಿದೆ. ಪತ್ರಿಕೋದ್ಯಮ ವೃತ್ತಿಯ ಮೂಲಭೂತ ಅವಶ್ಯಕತೆಗಳನ್ನು ಅದು ನಿರ್ಲಕ್ಷಿಸುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಛತ್ತೀಸಗಡ ಸಿಎಂ ಉಪ ಕಾರ್ಯದರ್ಶಿಯ ಬೇನಾಮಿ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಛತ್ತೀಸಗಡದಲ್ಲಿ ನಡೆದಿದೆ ಎನ್ನಲಾಗಿರುವ ಕಲ್ಲಿದ್ದಲು ತೆರಿಗೆ ವಂಚನೆ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಮುಖ್ಯಮಂತ್ರಿ ಅವರ ಉಪ ಕಾರ್ಯದರ್ಶಿ ಸೌಮ್ಯ ಚೌರಾಸಿಯಾ ಹಾಗೂ ಉದ್ಯಮಿ ಸೂರ್ಯಕಾಂತ್ ತಿವಾರಿಗೆ ಸೇರಿದ ₹17.48 ಕೋಟಿ ಮೌಲ್ಯದ ಬೇನಾಮಿ ಆಸ್ತಿ ಜಪ್ತಿ ಮಾಡಿದ್ದಾರೆ.

'ಆರೋಪಿಗಳಿಗೆ ಸೇರಿದ ಒಟ್ಟು 51 ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಪೈಕಿ ₹7.57 ಕೋಟಿ ಮೌಲ್ಯದ ಎಂಟು ಬೇನಾಮಿ ಸ್ವತ್ತುಗಳು ಸೌಮ್ಯ ಅವರಿಗೆ ಸೇರಿದ್ದಾಗಿವೆ' ಎಂದು ಇ.ಡಿ ಸೋಮವಾರ ತಿಳಿಸಿದೆ.

ಮಂಗಳವಾರ, ಜನವರಿ 31, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 31 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ಮಗುವಿನ ಅಳುವಿಗೆ ಹತ್ತಾರು ಅರ್ಥಗಳು!

ಆಳ-ಅಗಲ
'ಕೈ' ಬಲಪಡಿಸಿದ ಜೋಡೊ ಯಾತ್ರೆ

ಅದಾನಿ: ₹ 5.56 ಲಕ್ಷ ಕೋಟಿ ನಷ್ಟ 11

ಮಹದಾಯಿ ವಿವಾದ: ಅಮಿತ್ ಶಾ ಹೇಳಿಕೆ ಪ್ರಶ್ನಿಸಿದ ಗೋವಾ ಸಚಿವ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,500 ▲	17,648 ▲	₹59,100 (ಬೆಂಗಳೂರು)	₹70,500 (ಬೆಂಗಳೂರು)	81.52 ▲


ಪೆಶಾವರ: ಆತ್ಮಾಹುತಿ ಬಾಂಬ್ ಸ್ಫೋಟ, 61 ಮಂದಿ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ವಾಯವ್ಯ ಭಾಗದ ನಗರ ಪೆಶಾವರದ ಪೊಲೀಸ್ ಪ್ರಧಾನ ಕಚೇರಿ ಸಮೀಪದ ಬಿಗಿ ಭದ್ರತೆಯ ಮಸೀದಿಯಲ್ಲಿ ಸೋಮವಾರ ಮಧ್ಯಾಹ್ನ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, 61 ಮಂದಿ ಮೃತಪಟ್ಟು, 157 ಮಂದಿ ಗಾಯಗೊಂಡಿದ್ದಾರೆ.

ಪೊಲೀಸ್ ಲೈನ್ ಪ್ರದೇಶದಲ್ಲಿರುವ ಮಸೀದಿಯಲ್ಲಿ ಮಧ್ಯಾಹ್ನದ ಪ್ರಾರ್ಥನೆ ಸಲ್ಲಿಸುತ್ತಿದ್ದ ವೇಳೆ ಆತ್ಮಹತ್ಯಾ ಬಾಂಬರ್ ತನ್ನನ್ನು ತಾನು ಸ್ಫೋಟಿಸಿಕೊಂಡ. ನಾಲ್ಕು ಹಂತದ ಭದ್ರತಾ ವ್ಯವಸ್ಥೆಯನ್ನು ಆತ ಭೇದಿಸಿಕೊಂಡು ಬಂದಿದ್ದ.

11ನೇ ಪುಟ ನೋಡಿ

ಕವಿ ಕೆ.ವಿ. ತಿರುಮಲೇಶ್ ಇನ್ನಿಲ್ಲ



ಬೆಂಗಳೂರು: ಕವಿ ಹಾಗೂ ವಿಮರ್ಶಕ ಕೆ.ವಿ. ತಿರುಮಲೇಶ್ (82) ಅವರು ಹೈದರಾಬಾದ್‌ನಲ್ಲಿರುವ ತಮ್ಮ ನಿವಾಸದಲ್ಲಿ ಸೋಮವಾರ ನಿಧನರಾದರು.

ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು ಇತ್ತೀಚೆಗಷ್ಟೇ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ವಾರದ ಹಿಂದೆಯಷ್ಟೇ ಆಸ್ಪತ್ರೆಯಿಂದ ಮನೆಗೆ ಬಂದಿದ್ದರು. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರಿದ್ದಾರೆ.

ಹೈದರಾಬಾದ್‌ನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಆ್ಯಂಡ್ ಫಾರಿನ್ ಲ್ಯಾಂಗ್ವೇಜಸ್‌ನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದರು.ತಿರುಮಲೇಶ್ ಅವರ ಅಂತ್ಯಕ್ರಿಯೆ ಹೈದರಾಬಾದ್‌ನಲ್ಲಿ ಸೋಮವಾರ ನಡೆಯಿತು.

ನುಡಿ ನಮನ 10

ಒಳ ಪುಟ



'ಕುಂಬಾರರ ಅಭಿವೃದ್ಧಿ ನಿಗಮ ಸ್ಥಾಪಿಸಿ' 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ತಂದೆಯ ಆದಾಯ, ಜಾತಿ ಪರಿಗಣನೆ: ಹೊಸ ಪಟ್ಟಿಗೆ ನಿರ್ದೇಶನ

ಶಿಕ್ಷಕರ ನೇಮಕ: ಆಯ್ಕೆ ಪಟ್ಟಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 15 ಸಾವಿರ ಪದವೀಧರ ಶಿಕ್ಷಕರನ್ನು ನೇಮಕ ಮಾಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿದ್ದ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಪಡಿಸಿರುವ ಹೈಕೋರ್ಟ್, ಹೊಸ ಪಟ್ಟಿ ಸಿದ್ಧಪಡಿಸುವಂತೆ ನಿರ್ದೇಶನ ನೀಡಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪತಿಯ ಆದಾಯ ಹಾಗೂ ಜಾತಿ ಪ್ರಮಾಣಪತ್ರ ಪರಿಗಣಿಸಿ ಶಿಕ್ಷಕರ ಆಯ್ಕೆ ಪ್ರಕ್ರಿಯೆ ನಡೆಸಿದ್ದ ಶಿಕ್ಷಣ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಅಕ್ಷತಾ ಚೌಗಲಾ ಸೇರಿದಂತೆ 90ಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿಗಳನ್ನು ಮಾನ್ಯ ಮಾಡಿ ಸೋಮವಾರ ಆದೇಶಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು 1:1ರ ಅನುಪಾತದಂತೆ ಸಿದ್ಧಪಡಿಸಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿದೆ. ಪತಿಯ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಬದಲು ಅಭ್ಯರ್ಥಿಗಳ ತಂದೆಯ ಆದಾಯ ಮತ್ತು ಜಾತಿ ಪ್ರಮಾಣಪತ್ರಗಳನ್ನೂ ಪರಿಗಣಿಸಿ ಹೊಸದಾಗಿ ಪಟ್ಟಿ ಸಿದ್ಧಪಡಿಸಬೇಕು ಎಂದೂ ಸೂಚಿಸಿದೆ.

ಅರ್ಜಿದಾರರ ವಾದವೇನು?: ವಿಚಾರಣೆ ವೇಳೆ ವಾದ ಮಂಡಿಸಿದ್ದ ಅರ್ಜಿದಾರರ ಪರ ಹಿರಿಯ ವಕೀಲ ಶಶಿಕಿರಣ್ ಶೆಟ್ಟಿ, '1:1ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರಿಗಿಂತ ಕಡಿಮೆ ಅಂಕ ಪಡೆದಿರುವ ಅಭ್ಯರ್ಥಿಗಳ ಹೆಸರುಗಳಿವೆ. ಈ ಬಗ್ಗೆ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರನ್ನು (ಡಿಡಿಪಿಐ) ವಿಚಾರಿಸಿದಾಗ ವಿವಾಹಿತ ಮಹಿಳಾ ಅಭ್ಯರ್ಥಿಗಳು ಪತಿಯ ಆದಾಯ ಅಥವಾ ಜಾತಿ ಪ್ರಮಾಣ ಪತ್ರದ ಬದಲಿಗೆ ತಂದೆಯ ಆದಾಯ ಅಥವಾ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದರಿಂದ ಅರ್ಜಿದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

'ತಂದೆಯ ಆದಾಯ, ಜಾತಿ ಬದಲು ಪತಿ ಆದಾಯ, ಜಾತಿಯನ್ನು ಪರಿಗಣಿಸಿದ್ದರಿಂದಾಗಿ ಅರ್ಜಿದಾರರನ್ನು ಸಾಮಾನ್ಯ ವರ್ಗಕ್ಕೆ ಸೇರಿಸಲಾಗಿದೆ. ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ನೀಡದೆ, ಸಾಮಾನ್ಯ ಅಭ್ಯರ್ಥಿಗಳ ವರ್ಗಕ್ಕೆ ಸೇರ್ಪಡೆ ಮಾಡಿರುವ ಈ ಕ್ರಮ ಸರಿಯಲ್ಲ. ಅಂತೆಯೇ, ಪತಿಯ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಕೋರುವುದು ಕಾನೂನಿಗೆ ವಿರುದ್ಧವಾದ ನಡೆ' ಎಂದು ಆಕ್ಷೇಪಿಸಿದ್ದರು. 'ಅರ್ಜಿದಾರರ ಪತಿಯ ಆದಾಯ ಹಾಗೂ ಜಾತಿ ಪ್ರಮಾಣಪತ್ರ ಪರಿಗಣಿಸಿ, 2022ರ ನವೆಂಬರ್ 18ರಂದು ಪ್ರಕಟಿಸಿರುವ 1:1ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಬೇಕು' ಎಂದು ಕೋರಿದ್ದರು.

5ನೇ ಪುಟ ನೋಡಿ


ಪ್ರಜಾವಾಣಿ
ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ • ಜಾತಿ ತಂದೆಯದ್ದು, ಆದಾಯ ಪತಿಯದ್ದು
ಶಿಕ್ಷಕಿಯಾಗುವ ಕನಸು ಕಿತ್ತುಕೊಂಡ ಮದುವೆ!
ಕುಗ್ಗಿದ ಅಭ್ಯರ್ಥಿಗಳ ಕೊರತೆ ಅಂತರ
15,000 | 1.16 | 68,849 | 22,432 | 13,363 | 2,000
ಪ್ರಜಾವಾಣಿ ವಿಶೇಷ

ನೇಮಕಾತಿ ಕುರಿತ ತಕರಾರು ಏನು?

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ (6ರಿಂದ 8ನೇ ತರಗತಿ) ಖಾಲಿ ಇರುವ 15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ 2022ರ ಮಾರ್ಚ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಸೂಚನೆ ಹೊರಡಿಸಿತ್ತು.

ತಂದೆಯ ಆದಾಯ ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಎಂಬ ಕಾರಣಕ್ಕಾಗಿ ವಿವಾಹಿತ ಮಹಿಳೆಯರನ್ನು ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗಿತ್ತು.

ಈ ಕುರಿತು 'ಪ್ರಜಾವಾಣಿ' ನ.22ರ (2022) ಸಂಚಿಕೆಯಲ್ಲಿ 'ಶಿಕ್ಷಕಿಯಾಗುವ ಕನಸು ಕಿತ್ತುಕೊಂಡ ಮದುವೆ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

5ನೇ ಪುಟ ನೋಡಿ

'ರಾಷ್ಟ್ರೀಯತೆ ಹೆಸರಲ್ಲಿ ವಂಚನೆ ಮರೆಮಾಚಲಾಗದು'

ನವದೆಹಲಿ: 'ವಂಚನೆಯನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಮರೆಮಾಚಲು ಸಾಧ್ಯವಿಲ್ಲ' ಎಂದು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹಕ್ಕೆ ತಿರುಗೇಟು ನೀಡಿದೆ. ಸಂಸ್ಥೆಯು ತನ್ನ ವಿರುದ್ಧ ಸಿದ್ಧಪಡಿಸಿರುವ ವರದಿಯು 'ಭಾರತದ ಮೇಲಿನ ದಾಳಿ' ಎಂದು ಅದಾನಿ ಸಮೂಹವು ಭಾನುವಾರ 413 ಪುಟಗಳ ಪ್ರತಿಕ್ರಿಯೆಯಲ್ಲಿ ಹೇಳಿತ್ತು. 11


ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿ ನಾಯಕ ಉಮರ್ ಅಬ್ದುಲ್ಲಾ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಸೋಮವಾರ ಶ್ರೀನಗರದಲ್ಲಿ ನಡೆದ 'ಭಾರತ್ ಜೋಡೊ ಯಾತ್ರೆ'ಯ ಸಮಾರೋಪದಲ್ಲಿ ಭಾಗಿಯಾಗಿದ್ದರು –ಎಎಫ್‌ಪಿ ಚಿತ್ರ

'ಭಾರತ್ ಜೋಡೊ' ಶ್ರೀನಗರದಲ್ಲಿ ಸಮಾರೋಪ

'ಹಿಂಸೆ ಅಂತ್ಯವೇ ಯಾತ್ರೆ ಗುರಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ ಈಗ ಹಿಂಸೆ ನಡೆಸಲು ಹೊರಟಿರುವವರಿಗೆ ಎಂದೂ ಹಿಂಸೆಯ ಅನುಭವವಾಗಿಲ್ಲ. ಹಿಂಸೆಯ ಅನುಭವವಾಗದೇ ಇರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಆರ್‌ಎಸ್‌ಎಸ್‌ನವರಿಗೆ ಹಿಂಸೆ ಏನು ಎಂಬುದು ಅರ್ಥವಾಗುವುದಿಲ್ಲ. ಹಿಂಸಿಸಬೇಕು ಎಂಬ ಮನಃಸ್ಥಿತಿ ಕೊನೆಗಾಣಿಸಬೇಕು ಎಂಬುದೇ ಭಾರತ್ ಜೋಡೊ ಯಾತ್ರೆಯ ಉದ್ದೇಶ'- 145 ದಿನಗಳ ಭಾರತ್ ಜೋಡೊ ಯಾತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಡಿದ ಮಾತುಗಳಿವು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 14 ರಾಜ್ಯಗಳ ಮೂಲಕ 4,000 ಕೀ.ಮೀ.ಗಿಂತಲೂ ಹೆಚ್ಚು ದೂರ ಕ್ರಮಿಸಿದ ಈ ಪಾದಯಾತ್ರೆಯು ಶ್ರೀನಗರದಲ್ಲಿ ಸೋಮವಾರ ಕೊನೆಯಾಯಿತು.

ಯಾತ್ರೆಯ ಶಿಬಿರದಲ್ಲಿ ಧ್ವಜಾರೋಹಣದ ನಂತರ, ಶೇರ್-ಎ-ಕಾಶ್ಮೀರ್ ಕ್ರೀಡಾಂಗಣದಲ್ಲಿ ಸಮಾರೋಪ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಪಕ್ಷದ ನಾಯಕರಾದ ಜೈರಾಮ್ ರಮೇಶ್, ಕೆ.ಸಿ.ವೇಣುಗೋಪಾಲ್, ಡಿ.ಕೆ.ಶಿವಕುಮಾರ್ ಭಾಗಿಯಾಗಿದ್ದರು. ಸುರಿಯುತ್ತಿದ್ದ ಹಿಮದ ಮಧ್ಯೆಯೇ ತೆರೆದ ವೇದಿಕೆಯಲ್ಲಿ ಕಾರ್ಯಕ್ರಮ ನಡೆಯಿತು.

'ನನಗಾಗಿ ಮತ್ತು ಕಾಂಗ್ರೆಸ್‌ಗಾಗಿ ನಾನು ಭಾರತ್ ಜೋಡೊ ಯಾತ್ರೆಯನ್ನು ಮಾಡಲಿಲ್ಲ. ಬದಲಿಗೆ ದೇಶದ ಜನರಿಗಾಗಿ ಈ ಯಾತ್ರೆ ಮಾಡಿದೆ. ದೇಶದ ನೆಲೆಗಟ್ಟನ್ನು ಧ್ವಂಸ ಮಾಡುವಂತಹ ಸಿದ್ಧಾಂತದ ವಿರುದ್ಧ ನಿಲ್ಲಬೇಕು ಎಂಬುದೇ ನಮ್ಮ ಗುರಿ' ಎಂದು ರಾಹುಲ್ ಹೇಳಿದರು.

10ನೇ ಪುಟ ನೋಡಿ

ರಾಜಕೀಯ ಪ್ರೇರಿತ: ಬಿಜೆಪಿ

'ಇದು ('ಜೋಡೊ ಯಾತ್ರೆ') ರಾಜಕೀಯ ಪ್ರೇರಿತ. ಯಾತ್ರೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಕೇರಳದ ಬೀದಿಗಳಲ್ಲಿ ದನದ ಮಾಂಸ ತಿಂದು ಪಾರ್ಟಿ ಮಾಡಿದ್ದಾರೆ. ಕ್ರೈಸ್ತ ಧರ್ಮಗುರು ಜಾರ್ಜ್ ಪೊನ್ನಯ್ಯ ಅವರು ಭಾರತವನ್ನು ಅಶುದ್ಧ ಎಂದು ಕರೆದಿದ್ದಾರೆ' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

ರಾಹುಲ್ ಜೊತೆಗೆ ವಿವಿಧ ಭಾಗಗಳಲ್ಲಿ ಹೆಜ್ಜೆ ಹಾಕಿದ ಹಲವು ವ್ಯಕ್ತಿಗಳ ವಿಶ್ವಾಸಾರ್ಹತೆಯನ್ನು ಸುಧಾಂಶು ಪ್ರಶ್ನಿಸಿದ್ದಾರೆ. 'ತುಕ್ಡೆ ತುಕ್ಡೆ ಗ್ಯಾಂಗ್‌ನ ಭಾಗವಾಗಿದ್ದ ಕನ್ಹಯ್ಯ ಕುಮಾರ್, ನಿರ್ದಿಷ್ಟ ದಾಳಿಯನ್ನು ಪ್ರಶ್ನಿಸಿದ ದಿಗ್ವಿಜಯ್ ಸಿಂಗ್ ಅಂಥವರು, ದ್ವೇಷ ಸಾಧಕರು ರಾಹುಲ್ ಜೊತೆಗಿದ್ದರು' ಎಂದಿದ್ದಾರೆ.

ಆರೋಪ, ಪ್ರತ್ಯಾರೋಪಗಳದ್ದೇ ಜೋರು ಸದ್ದು

ಸಿ.ಡಿ ಪ್ರಕರಣ ಸಿಬಿಐಗೆ ಒಪ್ಪಿಸಿ: ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹರಕು ಚಪ್ಪಲಿ ಹಾಕಿಕೊಂಡು ಬಂದ ಡಿ.ಕೆ.ಶಿವಕುಮಾರ ಭ್ರಷ್ಟಾಚಾರದ ಮೂಲಕ ಸಾವಿರಾರು ಕೋಟಿ ಹಣ ಸಂಪಾದಿಸಿದ್ದಾನೆ. ತನ್ನ ಬಳಿ ಎಷ್ಟು ಅಕ್ರಮ ಆಸ್ತಿ ಇದೆ ಎಂದು ತಾನೇ ಬಾಯಿ ಬಿಟ್ಟ ಆಡಿಯೊ ನನ್ನ ಬಳಿ ಇದೆ' ಎಂದು ಶಾಸಕ ರಮೇಶ ಜಾರಕಿಹೊಳಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯ ಸಂದರ್ಭದಲ್ಲಿ ಸಮುದಾಯಗಳ ನಡುವೆ ಸಂಘರ್ಷ ಹುಟ್ಟಿಸಲು ಲಕ್ಷ್ಮೀ ಹೆಬ್ಬಾಳಕರ್ ಗುಂಪು ಪ್ರಯತ್ನಿಸುತ್ತಿದೆ. ಹಳೆಯ ಆಡಿಯೊವನ್ನು ಎಡಿಟ್ ಮಾಡಿ ಹರಿಬಿಡುತ್ತಿದ್ದಾರೆ ಎಂದೂ ದೂರಿದರು.

ಇದಕ್ಕೆ ಪ್ರತಿಯಾಗಿ ಪ್ರತಿಕ್ರಿಯಿಸಲು ಮಧ್ಯಾಹ್ನ ತುರ್ತು ಪತ್ರಿಕಾಗೋಷ್ಠಿ ಕರೆದ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, 'ನಮ್ಮ ಬಳಿ ಯಾವ ಆಡಿಯೋ ಸಹ ಇಲ್ಲ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿದಂತಾಗಿದೆ' ಎಂದು ವ್ಯಂಗ್ಯವಾಡಿದರು.

> **ಸಿಡಿ. ಬಗ್ಗೆ 3 ತಿಂಗಳು ಮೊದಲೇ ಗೊತ್ತಿತ್ತು. ಬೆದರಿಸಲು ಯತ್ನಿಸಿದರು. ನಾನು ಸರ್ಕಾರಕ್ಕೆ ಹಾನಿ ಮಾಡದೆ, ನನ್ನ ರಾಜಕೀಯ ಜೀವನ ನಷ್ಟ ಮಾಡಿಕೊಂಡೆ**
> **ರಮೇಶ ಜಾರಕಿಹೊಳಿ**
> ಶಾಸಕ

ಜಾರಕಿಹೊಳಿ ತಮ್ಮನ್ನೂ ಬಿಜೆಪಿಗೆ ಆಹ್ವಾನಿಸಿದ್ದರು ಎಂದು ಹೇಳಿದ್ದಕ್ಕೆ ಪ್ರತಿಯಾಗಿ ಪುನಃ ರಮೇಶ ಜಾರಕಿಹೊಳಿ ಪತ್ರಿಕಾಗೋಷ್ಠಿ ಕರೆದು, ಇದೆಲ್ಲದರ ಹಿಂದೆ ಮಹಾನಾಯಕ ಎಂದು ಕರೆಯಿಸಿಕೊಳ್ಳುವ ಡಿ.ಕೆ. ಶಿವಕುಮಾರ್ ಅವರ ಸೂಚನೆಗಳಿವೆ' ಎಂದು ಆರೋಪಿಸಿದರು.

'ದುಬೈನಲ್ಲಿ, ಲಂಡನ್‌ನಲ್ಲಿ ಮನೆ ಇವೆ. ನನ್ನ ಮನೆ ರೇಡ್ ಆದಾಗಲೇ ₹ 40 ಕೋಟಿ ಸಿಕ್ಕಿದೆ' ಎಂಬ ಧ್ವನಿ ಇರುವ ಆಡಿಯೊ ಹರಿಬಿಟ್ಟರು. ಆದರೆ, ಅದು ಯಾರ ಧ್ವನಿ ಎಂಬುದು ಸ್ಪಷ್ಟವಿರಲಿಲ್ಲ.

7ನೇ ಪುಟ ನೋಡಿ

'ಜಾತಿ ಸಂಘರ್ಷಕ್ಕೆ ಹುನ್ನಾರ'

'ಬೆಳಗಾವಿ ಗ್ರಾಮೀಣ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ವಿಧಾನಸೌಧದಲ್ಲಿ ಮಾತನಾಡುವಾಗ ತನ್ನನ್ನು ತಾನು 'ರಾಣಿ ಚನ್ನಮ್ಮನ ಅಂಶ' ಎಂದು ಹೇಳಿಕೊಂಡಳು. ಆಗ ನಾನು ಲಿಂಗಾಯತ ಸಮಾಜದ ಮುಖಂಡರೊಬ್ಬರಿಗೆ ಫೋನ್ ಮಾಡಿ 'ಈ ರೀತಿ ಹೋಲಿಕೆ ಸರಿಯಲ್ಲ. ಸಮಾಜದವರು ಇದನ್ನು ಖಂಡಿಸಿ' ಎಂದು ಹೇಳಿದ್ದೆ. ಮಾತನಾಡುವಾಗ ಶಾಸಕಿಗೆ 'ಕೆಟ್ಟ' ಪದ ಬಳಸಿದ್ದು ನಿಜ. ಆದರೆ, ಅದನ್ನು ಎಡಿಟ್ ಮಾಡಿ ರಾಣಿ ಚನ್ನಮ್ಮನ ಹೆಸರಿಗೆ ಜೋಡಿಸಿ ಆಡಿಯೊ ಸಿದ್ಧ ಮಾಡಿದ್ದಾರೆ' ಎಂದು ರಮೇಶ್ ಜಾರಕಿಹೊಳಿ ದೂರಿದರು.

'ಚುನಾವಣೆ ಸಂದರ್ಭದಲ್ಲಿ ಅದನ್ನು ಹೊರಗೆ ತಂದು ಜಾತಿ-ಜಾತಿಗಳ ಮಧ್ಯೆ ಸಂಘರ್ಷ ಮೂಡಿಸುವುದು ಇವರ ಗುರಿ. ನಾನು ಎಲ್ಲ ಸಮಾಜದವರಿಗೂ ಹೇಳುತ್ತೇನೆ;ಇಂಥ ಘಟನೆ ನಡೆದರೆ ಅದಕ್ಕೆ ಡಿಕೆಶಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಕಾರಣ' ಎಂದರು.

ಕುಂಬಳಕಾಯಿ ಕಳ್ಳನಂತೆ...

'ರಾಣಿ ಚನ್ನಮ್ಮನ ಬಗ್ಗೆ ರಮೇಶ ಜಾರಕಿಹೊಳಿ ಏನು ಮಾತಾಡಿದ್ದಾರೆ ನನಗೆ ಗೊತ್ತಿಲ್ಲ. ಯಾವುದೂ ಆಡಿಯೊ ನಮ್ಮ ಬಳಿ ಇಲ್ಲ. ಕುಂಬಳಕಾಯಿ ಕಳ್ಳನಂತೆ ತಾವೇ ಸಿಕ್ಕಿಬಿದ್ದಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಪ್ರತಿಕ್ರಿಯಿಸಿದರು.

'ರಮೇಶ ಜಾರಕಿಹೊಳಿ ಕಾಂಗ್ರೆಸ್ ಬಿಡುವಾಗ ನಮ್ಮನ್ನೂ ಕರೆದರು. ಆದರೆ, ನಾವು ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದೆವು. 'ಬಿಜೆಪಿ ಸೇರಬೇಡಿ' ಎಂದು ಅವರಿಗೂ ಕೇಳಿಕೊಂಡೆವು. ಆಗ ಅವರ ಮಾತಿಗೆ ಬೆಲೆ ಕೊಡಲಿಲ್ಲ ಎಂಬ ಕಾರಣಕ್ಕೆ ನಮ್ಮ ಮೇಲೆ ಇಷ್ಟು ದ್ವೇಷ ಸಾಧಿಸುತ್ತಿದ್ದಾರೆ' ಎಂದು ದೂರಿದರು.

ಹೋರಾಟ ತೀವ್ರಗೊಳಿಸಲು ಅಂಗನವಾಡಿ ನೌಕರರ ಸಂಘ ನಿರ್ಧಾರ: ಫೆ.2ರಂದು ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ

ಬೇಡಿಕೆ ಈಡೇರಿಕೆಗೆ 48 ಗಂಟೆ ಗಡುವು

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಮನವಿ ಸ್ವೀಕರಿಸಿ, ಸಚಿವ ಹಾಲಪ್ಪ ಬಸಪ್ಪ ಆಚಾರ್ ಮಾತನಾಡಿದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ಗ್ರಾಚ್ಯುಟಿ ವಿತರಣೆ ಹಾಗೂ ಶಿಕ್ಷಕರೆಂದು ಪರಿಗಣಿಸುವಂತೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ತೀವ್ರಗೊಳಿಸಲು ನಿರ್ಧರಿಸಿದ್ದಾರೆ.

‘ಸೋಮವಾರಕ್ಕೆ ಪ್ರತಿಭಟನೆ 8 ದಿನ ಪೂರೈಸಿದೆ. ಆದರೂ, ಸರ್ಕಾರದಿಂದ ಸ್ಪಂದನೆ ದೊರೆತಿಲ್ಲ. 48 ಗಂಟೆಗಳ ಒಳಗಾಗಿ ಅಧಿಕೃತ ಆದೇಶ ನೀಡಬೇಕು. ಇಲ್ಲದಿದ್ದರೆ ಫೆ.2ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿವಾಸಕ್ಕೆ ಮುತ್ತಿಗೆ ಹಾಕುತ್ತೇವೆ. ಮುಂದಾಗುವ ಅನಾಹುತಗಳಿಗೆ ರಾಜ್ಯ ಸರ್ಕಾರ ಹೊಣೆ’ ಎಂದು ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು.

‘ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ಸಚಿವ ಹಾಲಪ್ಪ ಬಸಪ್ಪ ಆಚಾರ್ ನಿಮ್ಮ ಪರವಾಗಿ ಇದ್ದೇನೆ. ಪರಿಶೀಲಿಸುತ್ತೇನೆ ಎಂದು ಹೇಳಿದ್ದು ಬಿಟ್ಟರೆ ಅಧಿಕೃತ ಆದೇಶದ ಬಗ್ಗೆ ಭರವಸೆ ನೀಡಲಿಲ್ಲ’ ಎಂದು ಆಕ್ರೋಶ ಹೊರಹಾಕಿದರು.

‘ಚಳಿ, ಬಿಸಿಲು ನಡುವೆ ಮಹಿಳೆಯರು ರಸ್ತೆಗೆ ಬಂದು ಹೋರಾಡುತ್ತಿದ್ದಾರೆ. ಇದನ್ನು ಹತ್ತಿಕ್ಕುವ ಕೆಲಸಗಳು ನಡೆಯುತ್ತಿವೆ’ ಎಂದರು

‘ಹೊಸ ಶಿಕ್ಷಣ ನೀತಿಯಂತೆ 3ರಿಂದ 6 ವರ್ಷದ ಮಕ್ಕಳಿಗೆ ಅಡಿಪಾಯ ಶಿಕ್ಷಣಕ್ಕೆ ಮಹತ್ವ ನೀಡಿದೆ. ಈ ಮಕ್ಕಳಿಗೆ ಅಂಗನವಾಡಿಯಲ್ಲೇ ಶಿಕ್ಷಣ ನೀಡಬೇಕು. ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕರೆಂದು ಪರಿಗಣಿಸಬೇಕು’ ಎಂದು ಕೋರಿದರು.

‘ಸುಪ್ರೀಂ ಕೋರ್ಟ್‌ನಲ್ಲಿ 16 ವರ್ಷಗಳ ನಿರಂತರ ಹೋರಾಟದ ಫಲವಾಗಿ ಗ್ರಾಚ್ಯುಟಿ ಹಕ್ಕು ಸಿಕ್ಕಿದೆ. ಈ ಹಕ್ಕನ್ನು ಪಡೆಯಬೇಕೆಂಬ ಉದ್ದೇಶದಿಂದ ಪ್ರತಿಭಟನೆ ನಡೆಸಲಾಗುತ್ತಿದೆ. 2011ರಿಂದ 30 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಿವೃತ್ತರಾಗಿದ್ದಾರೆ. ಅವರಿಗೆ ಗ್ರಾಚ್ಯುಟಿ ನೀಡಿದರೆ, ₹250 ಕೋಟಿ ಬೇಕಿದೆ. ಅದನ್ನು ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ’ ಎಂದು ದೂರಿದರು.

‘ಕಾರಣವಿಲ್ಲದೆ ಕಾರ್ಯಕರ್ತೆಯರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ. ಇದು ತಪ್ಪಬೇಕು. 48 ವರ್ಷಗಳಿಂದ ಲಕ್ಷಾಂತರ ಮಹಿಳೆಯರಿಗೆ ಗೌರವಧನ ಮಾತ್ರ ಕೊಟ್ಟು ದುಡಿಸಿಕೊಳ್ಳಲಾಗುತ್ತಿದೆ. ಅದೂ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ’ ಎಂದು ಅಳಲು ತೋಡಿಕೊಂಡರು.

‘1ನೇ ತರಗತಿ ಸೇರ್ಪಡೆಯಾಗುವ ಮಗುವಿಗೆ ಅಂಗನವಾಡಿಯಿಂದಲೇ ಟಿ.ಸಿ (ವರ್ಗಾವಣೆ ಪತ್ರ) ನೀಡುವ ವ್ಯವಸ್ಥೆ ಆಗಬೇಕು. ಸರ್ಕಾರಿ ಶಾಲೆಗಳ ಬದಲಿಗೆ ಅಂಗನವಾಡಿಯಲ್ಲೇ ಪೂರ್ಣ ಪ್ರಮಾಣದ ಎಲ್‌ಕೆಜಿ, ಯುಕೆಜಿ ಶಿಕ್ಷಣ ನೀಡಬೇಕು’ ಎಂದು ಕೋರಿದರು.

ಸಂಘದ ಕಾರ್ಯಾಧ್ಯಕ್ಷೆ ಶಾಂತಾ ಎಸ್. ಘಂಟಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಸುನಂದಾ, ಖಜಾಂಚಿ ಜಿ.ಕುಮಲಾ ಹಾಜರಿದ್ದರು.

ಊಟಕ್ಕೂ ಪರದಾಟ

ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಸ್ವಾತಂತ್ರ್ಯ ಉದ್ಯಾನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಬಂದಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ರಾತ್ರಿಯ ಗಾಂಧಿ ನಗರದ ರಸ್ತೆಯಲ್ಲೇ ಮಲಗಿ ಪ್ರತಿಭಟಿಸುತ್ತಿದ್ದಾರೆ. ಶೌಚಾಲಯಗಳ ವ್ಯವಸ್ಥೆಯಿಲ್ಲದೆ ಪರದಾಡುತ್ತಿದ್ದಾರೆ. ಊಟ ಸಿಗದೆ ತೊಂದರೆ ಅನುಭವಿಸುತ್ತಿದ್ದಾರೆ. ‘ಸರ್ಕಾರಕ್ಕೆ ಕಣ್ಣು ಇಲ್ಲ. ಮಹಿಳೆಯರ ದೇಹ ದಂಡಿಸಿ-ಕೊಳ್ಳುತ್ತಿದ್ದಾರೆ’ ಎಂದು ವರಲಕ್ಷ್ಮಿ ನೋವು ತೋಡಿಕೊಂಡರು.

ನಿಧನ ವಾರ್ತೆ

ಸಿದ್ದಮ್ಮ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪಿಆರ್‌ಒ ಸಿದ್ದಲಿಂಗಯ್ಯ ಅವರ ತಾಯಿ ಸಿದ್ದಮ್ಮ (95) ಅವರು ಸೋಮವಾರ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಸಿದ್ದಮ್ಮ ಬಳಲುತ್ತಿದ್ದರು.

ಸೋಮವಾರ ಸಂಜೆ ಕೆಂಗೇರಿಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ನಕಲಿ ಒ.ಸಿ: ತಪ್ಪಿತಸ್ಥರ ಮೇಲೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯಿಂದ ನಿವೃತ್ತರಾದವರು ನಕಲಿ ಸ್ವಾಧೀನ ಪ್ರಮಾಣಪತ್ರ (ಒ.ಸಿ) ನೀಡಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿದ್ದು, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಒಂದೆರಡು ಪ್ರಕರಣಗಳಲ್ಲಿ ನಕಲಿ ಒಸಿ ಬಗ್ಗೆ ಮಾಹಿತಿ ಇದ್ದು, ನಗರ ಯೋಜನೆ ಹೆಚ್ಚುವರಿ ನಿರ್ದೇಶಕರಿಂದ ಆಂತರಿಕ ತನಿಖೆ ನಡೆಸಲಾಗಿದೆ. ನಿವೃತ್ತ ಸಿಬ್ಬಂದಿ ಈ ಕೃತ್ಯ ಎಸಗಿರುವುದು ಕಂಡುಬಂದಿದೆ. ಇದೇ ರೀತಿಯ ಪ್ರಕರಣಗಳು ಇರುವ ಬಗ್ಗೆ ತನಿಖೆಗೆ ಸೂಚಿಸಲಾಗಿದೆ ಎಂದರು.

‘ಕೆಲ ನಾಗರಿಕರೂ ನಕಲಿ ಒ.ಸಿ ಬಗ್ಗೆ ಮಾಹಿತಿ ನೀಡಿದ್ದರು. ಸಿಬ್ಬಂದಿಯೂ ಗಮನಕ್ಕೆ ತಂದಿದ್ದರು. ಎಲ್ಲ ತಪ್ಪಿತಸ್ಥರಿಗೂ ಶಿಕ್ಷೆಯಾಗುತ್ತದೆ’ ಎಂದರು.

‘ಈಗ ಒ.ಸಿ ನೀಡುವ ಪ್ರಕ್ರಿಯೆ ಮ್ಯಾನ್ಯುಯಲ್ ಆಗಿದ್ದು, ನಂತರ ಅಪ್‌ಲೋಡ್ ಮಾಡಲಾಗುತ್ತಿದೆ. ಆನ್‌ಲೈನ್‌ನಲ್ಲೇ ನಕ್ಷೆಯಿಂದ ಹಿಡಿದು ಎಲ್ಲ ಪ್ರಕ್ರಿಯೆ ನಡೆದು, ಅಲ್ಲೇ ಒ.ಸಿ ವಿತರಿಸುವ ವ್ಯವಸ್ಥೆ ಮಾಡಲಿದ್ದು, ಆ ನಂತರ ಎಲ್ಲವೂ ವೆಬ್‌ಸೈಟ್‌ನಲ್ಲೇ ಲಭ್ಯವಾಗುತ್ತದೆ’ ಎಂದರು.

‘ಶೋಭಾ ಡೆವಲಪರ್ಸ್ ಅವರಿಗೆ ಒ.ಸಿ ನೀಡಲ್ಲ ಎಂದು ನಾವು ಹೇಳಿಲ್ಲ. ಆದರೆ ಅವರು ಹಿಂದೆ ನಕಲಿ ಪ್ರಮಾಣಪತ್ರ ನೀಡಿದ್ದರಿಂದ ರದ್ದು ಮಾಡಲಾಗಿತ್ತು. ಇದೀಗ ಅಗ್ನಿಶಾಮಕ ದಳದಿಂದ ಪ್ರಮಾಣಪತ್ರ ಬಂದಿದೆ. ಪರಿಶೀಲಿಸಲಾಗುತ್ತದೆ’ ಎಂದರು.

ತನಿಖೆಗೆ ಮನವಿ: ಪೊಲೀಸರಿಗೆ ದೂರು

ಬಿಬಿಎಂಪಿ ವಾರ್ಡ್ ನಂ. 50 ಬೆನ್ನಿಗಾನಹಳ್ಳಿಯಲ್ಲಿ ಆಸ್ತಿ ಮಾಲೀಕರಾದ ಕೆ. ಯತಿರಾಜುಲು ನಾಯ್ಡು ಮತ್ತು ಎಂ. ಆಂಜನಪ್ಪ ಹೆಸರಿನಲ್ಲಿ ನೀಡಿರುವ ಒ.ಸಿ ಸುಳ್ಳು ದಾಖಲೆ ಆಗಿದ್ದು, ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ನಗರ ಯೋಜನೆ ವಿಭಾಗದ ಪೂರ್ವ ವಲಯದ ಸಹಾಯಕ ನಿರ್ದೇಶಕರು ಬೈಯಪ್ಪನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬೆನ್ನಿಗಾನಹಳ್ಳಿ 3ನೇ ಸಿ ಅಡ್ಡರಸ್ತೆ, ಪಾಪಯ್ಯ ಲೇಔಟ್‌ನಲ್ಲಿರುವ ಸ್ವತ್ತಿಗೆ (ಪಿಐಡಿ ಸಂಖ್ಯೆ: 84-97-132-9) ಮಾಲೀಕರು ಖಾತೆ ಪಡೆಯಲು ಒ.ಸಿ ದಾಖಲೆ ಸಲ್ಲಿಸಿದ್ದರು. ಪರಿಶೀಲಿಸಿದಾಗ ನಕಲಿ ಎಂದು ಗೊತ್ತಾಗಿದೆ ಎಂದಿದ್ದಾರೆ.

ಬಿಬಿಎಂಪಿಯಲ್ಲಿ ಪರಿಶೀಲಿಸಿಕೊಳ್ಳಿ...

2018ರಿಂದ ಕಟ್ಟಡಗಳಿಗೆ ನಕ್ಷೆ ಅನುಮೋದನೆಯಾಗಿರುವ ಎಲ್ಲ ಮಾಹಿತಿ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸ್ವಾಧೀನಾನುಭವ ಪ್ರಮಾಣಪತ್ರವನ್ನೂ (ಒಸಿ) ಅಪ್‌ಲೋಡ್ ಮಾಡಲಾಗಿದೆ. ನಾಗರಿಕರು ಅಗತ್ಯ ನಕ್ಷೆ, ಒ.ಸಿಯನ್ನು ಪರಿಶೀಲಿಸಿಕೊಳ್ಳಬೇಕು. ವಲಯವಾರು ನಕ್ಷೆ, ಒ.ಸಿಯನ್ನೂ ಅಪ್‌ಲೋಡ್ ಮಾಡುವ ಪ್ರಕ್ರಿಯೆ ನಡೆದಿದೆ. ಕಟ್ಟಡ ನಕ್ಷೆ ಅನುಮೋದನೆಯಾಗಿರುವುದಕ್ಕೆ ಆನ್‌ಲೈನ್‌ನಲ್ಲೇ ಒ.ಸಿ ಸಿಗುತ್ತದೆ. ಮುಂದಿನ ದಿನಗಳಲ್ಲಿ ಎಲ್ಲ ಕಟ್ಟಡಗಳ ನಕ್ಷೆ, ಒಸಿ ಮಾಹಿತಿ ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ. ಜನರು ಬಿಬಿಎಂಪಿ ಕಚೇರಿಯಲ್ಲೂ ಪರಿಶೀಲಿಸಿದಲ್ಲಿ ವಂಚನೆ ತಪ್ಪಿದಂತಾಗುತ್ತದೆ ಎಂದು ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ಗಿರೀಶ್ ಹೇಳಿದರು.

ಸುದ್ದಿ 2 ನಿಮಿಷ

ಮೊರೊಕ್ಕೊ ಮೇಲ್ವಿಚಾರಕರಾಗಿ ಪ್ರತಾಪ್ ಮಧುಕರ್ ಕಾಮತ್

ಬೆಂಗಳೂರು: ‘ಕರ್ನಾಟಕದಲ್ಲಿ ಮೊರೊಕ್ಕೊ ದೇಶದ ಮೇಲ್ವಿಚಾರಕರನ್ನಾಗಿ ಪ್ರತಾಪ್ ಮಧುಕರ್ ಕಾಮತ್ ಅವರನ್ನು ನೇಮಿಸಲಾಗಿದೆ’ ಎಂದು ಭಾರತದಲ್ಲಿನ ಮೊರೊಕ್ಕೊ ರಾಯಭಾರಿ ಮಹಮ್ಮದ್ ಮಲಿಕಿ ತಿಳಿಸಿದರು.

‘ಈಗಾಗಲೇ ಮುಂಬೈ, ಕೋಲ್ಕತ್ತ ನಗರಗಳಲ್ಲಿ ಮೊರೊಕ್ಕೊ ಕಚೇರಿಗಳನ್ನು ತೆರೆಯಲಾಗಿದ್ದು, ಜ. 28ರಂದು ಬೆಂಗಳೂರಿನಲ್ಲಿ ನೂತನ ಕಚೇರಿಯನ್ನು ಉದ್ಘಾಟನೆ ಮಾಡಲಾಗಿದೆ. ಮೊರೊಕ್ಕೊ ಸಾಮ್ರಾಜ್ಯವು ಭಾರತದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಂದಿಗೆ ತನ್ನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮೊರೊಕ್ಕೊ ದೇಶದಲ್ಲಿ ರಾಜ್ಯದ ಹಲವಾರು ಕಂಪನಿಗಳು ಹೂಡಿಕೆ ಮಾಡಿವೆ. ಅದರೊಂದಿಗೆ ಎರಡು ದೇಶಗಳ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು’ ಎಂದು ಪ್ರತಾಪ್ ಮಧುಕರ್ ಕಾಮತ್ ತಿಳಿಸಿದರು.

ರಾಜಕಾಲುವೆ ಒತ್ತುವರಿ ತೆರವು



ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಚಿನ್ನಪ್ಪನಹಳ್ಳಿ ಹಾಗೂ ಸಾದರಮಂಗಲ ಸೇರಿ ನಾಲ್ಕು ಪ್ರದೇಶಗಳಲ್ಲಿ ರಾಜಕಾಲುವೆ ಒತ್ತುವರಿಯನ್ನು ತೆರವು ಮಾಡಲಾಗಿದೆ. ದೊಡ್ಡನೆಕ್ಕುಂದಿಯಲ್ಲಿ 3 ಅಂತಸ್ತಿನ ಕಟ್ಟಡ ತೆರವು ಕಾರ್ಯಾಚರಣೆ ಆರಂಭವಾಗಿದೆ. 2 ಅಂತಸ್ತಿನ ಕಟ್ಟಡವನ್ನು ನೆಲಸಮಗೊಳಿಸಲಾಗಿದೆ.

ಹೂಡಿ ವಾರ್ಡ್ ಸಾದರ ಮಂಗಲ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದ ಸುಮಾರು 8 ಮೀಟರ್ ಉದ್ದದ ಗೋಡೆಯನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದ್ದಾರೆ.

ಮಹದೇವಪುರ ವಲಯದಲ್ಲಿ ಈವರೆಗೆ 289 ಸರ್ವೆ ನಂಬರ್‌ಗಳಲ್ಲಿ ಒತ್ತುವರಿ ಇದೆ. 81 ತೆರವುಗೊಳಿಸಲಾಗಿದೆ. 157 ಸರ್ವೆ ನಂಬರ್‌ಗಳನ್ನು ಭೂ ಮಾಪನ ಮಾಡಲಾಗಿದ್ದು, 28 ಆದೇಶಗಳನ್ನು ಹೊರಡಿಸಲಾಗಿದೆ ಎಂದರು.



ಬೆಂಗಳೂರು ಕರಗ ನಡೆಯುವ ದ್ರೌಪದಿ ಧರ್ಮರಾಯ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಅಲಂಕಾರ ಪೂಜೆಯೊಂದಿಗೆ ಕರ್ನಾಟಕ ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘದಿಂದ ವಹ್ನಿಕುಲ ಕ್ಷತ್ರಿಯ ಜನಾಂಗದ ರಾಜಕುಲಗಳ ಇತಿಹಾಸ, ಪರಂಪರೆ, ಹಿನ್ನೆಲೆ ಒಳಗೊಂಡ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು. ರಾಜ್ಯ ಘಟಕದ ಅಧ್ಯಕ್ಷ ವರ್ತೂರ್ ಜೆ. ಕೆ. ಗಿರೀಶ್, ದೇವಸ್ಥಾನ ಸಮಿತಿ ಅಧ್ಯಕ್ಷ ಸತೀಶ್(ಪಲ್ಲರ್), ಬಾಲಕೃಷ್ಣ(ಸೂರಿ), ಕರಗದ ಪೂಜಾರಿಗಳಾದ ಜ್ಞಾನೇಂದ್ರ, ಉಪಾಧ್ಯಕ್ಷ ವೇಣು, ಸಿ.ಕೆ.ಎನ್ ಗ್ರೂಪ್‌ನ ಮಾಲೀಕ ಕೆ.ಎನ್. ರಾಜ್ ಕೃಷ್ಣಮೂರ್ತಿ, ಇತಿಹಾಸಕಾರ ನಾಗರಾಜ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಜೆಟ್: ಅಜ್ಞಾತ ಸ್ಥಳದಲ್ಲಿ ಸಿ.ಎಂ ಪೂರ್ವಭಾವಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ನೇ ಸಾಲಿನ ರಾಜ್ಯ ಬಜೆಟ್‌ಅನ್ನು ಫೆ. 17 ರಂದು ಮಂಡಿಸಲು ತಯಾರಿ ನಡೆಸುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಜ್ಞಾತ ಸ್ಥಳದಲ್ಲಿ ಸೋಮವಾರ ಬಜೆಟ್ ಪೂರ್ವಭಾವಿ ಸಭೆ ನಡೆಸಿ ಅಚ್ಚರಿ ಮೂಡಿಸಿದರು.

ಸಾಮಾನ್ಯವಾಗಿ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಶಕ್ತಿ ಭವನದಲ್ಲಿ ಬಜೆಟ್ ಪೂರ್ವಭಾವಿ ಸಭೆಗಳು ನಡೆಯುತ್ತವೆ. ಅದರಂತೆ, ಸೋಮವಾರ ಕೂಡ ಬಜೆಟ್ ಪೂರ್ವಭಾವಿ ಸಭೆಗೆ ಸಮಯ ಕಾಯ್ದಿರಿಸಲಾಗಿತ್ತು. ಶಕ್ತಿಭವನದಲ್ಲಿ ಈ ಸಭೆ ನಡೆಯಬೇಕಿತ್ತು. ಆದರೆ ವಿಧಾನಸೌಧದಿಂದ ಶಕ್ತಿ ಭವನಕ್ಕೆ ಬರುವ ಬದಲು ಮುಖ್ಯಮಂತ್ರಿ ಅಜ್ಞಾತ ಸ್ಥಳಕ್ಕೆ ತೆರಳಿದರು.

ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೂ ಮೂರು ಗಂಟೆ ಕಾಲ ಕೆಲವು ಹಿರಿಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಭೆ ನಡೆಸಿದರು. ಸಭೆಗಳು ನಡೆಯುವಾಗ ಗಣ್ಯರು ಭೇಟಿಗೆ ಬಂದು ಸಮಯ ವ್ಯಯವಾಗುವುದನ್ನು ತಪ್ಪಿಸಲು ಅಜ್ಞಾತ ಸ್ಥಳದಲ್ಲಿ ಸಭೆ ನಡೆಸಿದರು ಎಂದು ಹೇಳಲಾಗಿದೆ.

ಪಿಟಿಸಿಎಲ್ ತಿದ್ದುಪಡಿಗೆ ಆಗ್ರಹ

ಪ್ರತಿಭಟನೆ 29ನೇ ದಿನಕ್ಕೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆ ಸೋಮವಾರ 29ನೇ ದಿನ ಪೂರೈಸಿತು.

ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನೇತೃತ್ವದಲ್ಲಿ ಜ.2ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗಿದೆ. ಭೂಮಿ ಕಳೆದುಕೊಂಡ ಸಂತ್ರಸ್ತರು ಉದ್ಯಾನದಲ್ಲಿರುವ ಪೆಂಡಾಲ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದು, ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸುತ್ತಿದ್ದಾರೆ.

‘1978ರ ಕಾಯ್ದೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಲ್ಲಿಸುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ಇದರಿಂದಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಪರರ ಪಾಲಾಗುತ್ತಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಬಲಾಢ್ಯರ ಅನ್ಯಾಯದಿಂದ ಭೂಮಿ ಕಳೆದುಕೊಂಡಿರುವ ಕೋಲಾರ, ತುಮಕೂರು, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳ ಸಂತ್ರಸ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. 29 ದಿನವಾದರೂ ಸರ್ಕಾರದ ಪ್ರತಿನಿಧಿಗಳು ಸ್ಥಳಕ್ಕೆ ಬಂದಿಲ್ಲ. ಸರ್ಕಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಅಳಲು ಕೇಳುವವರು ಇಲ್ಲದಂತಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಸ್ಥಳದಲ್ಲಿ ವೃದ್ಧೆ ಮೊಕ್ಕಾಂ: ಉಳುಮೆ ಮಾಡುತ್ತಿದ್ದ ಮೂರು ಎಕರೆ ಜಮೀನು ಕಳೆದುಕೊಂಡಿರುವ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಚನ್ನಾಪುರ ಹಟ್ಟಿಯ ನೀಲಾಬಾಯಿ ಪ್ರತಿಭಟನೆ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ. ಅನೇಕ ವೃದ್ಧರು ಹಾಗೂ ಮಹಿಳೆಯರು ಸಹ ಪ್ರತಿಭಟನೆ ಸ್ಥಳದಲ್ಲಿದ್ದಾರೆ.

‘ಜಮೀನು ಕಬಳಿಸುವ ವ್ಯಕ್ತಿಗಳು, ನನಗೆ ಹಾಗೂ ಕುಟುಂಬಕ್ಕೆ ಬೆದರಿಕೆ ಹಾಕುತ್ತಿದ್ದಾರೆ. ಜಮೀನು ವಾಪಸು ಕೊಡಿಸುವವರೆಗೂ ಹೋರಾಟ ಮಾಡುತ್ತೇನೆ. ಚಳಿ ಜ್ವರ ಬಂದರೂ ವೇದಿಕೆಯಲ್ಲೇ ಮಲಗಿದ್ದೆ. ನ್ಯಾಯ ಸಿಗುವವರೆಗೂ ಊರಿಗೆ ಹೋಗುವುದಿಲ್ಲ’ ಎಂದು ನೀಲಾಬಾಯಿ ‘ಪ್ರಜಾವಾಣಿ’ಗೆ ತಿಳಿಸಿದರು.

ಈಜುಕೊಳದಲ್ಲಿ ಬಾಲಕರಿಬ್ಬರು ಸಾವು

ಬೆಂಗಳೂರು: ಜೆ.ಪಿ. ನಗರದ 7ನೇ ಹಂತದಲ್ಲಿರುವ ಎಂಎನ್‌ಸಿ ಸ್ಪೋರ್ಟ್ಸ್ ಅಕಾಡೆಮಿಯ ಈಜುಕೊಳದಲ್ಲಿ ಮುಳುಗಿ ಬಾಲಕರಿಬ್ಬರು ಮೃತಪಟ್ಟಿದ್ದು, ಈ ಸಂಬಂಧ ಕೋಣನಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜರಗನಹಳ್ಳಿಯ ಮೋಹನ್ (13) ಹಾಗೂ ಜಯಂತ್ (13) ಮೃತರು. ಇವರು ಜರಗನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದರು. ಸೋಮವಾರ ಶಾಲೆಗೆ ಹೋಗಿದ್ದ ಇವರಿಬ್ಬರು, ತರಗತಿಗೆ ಗೈರಾಗಿ ಈಜುಕೊಳಕ್ಕೆ ತೆರಳಿದ್ದರು’ ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ. ಕೃಷ್ಣಕಾಂತ್ ತಿಳಿಸಿದರು.

‘ಈಜುಕೊಳದಲ್ಲಿ ಕೆಲಸ ಮಾಡುವ ಸಿಬ್ಬಂದಿ, ಬಾಲಕರಿಬ್ಬರಿಂದ ₹100 ಪಡೆದು ಒಳಗೆ ಬಿಟ್ಟಿದ್ದರು. ಸಿಬ್ಬಂದಿಯ ನಿರ್ಲಕ್ಷ್ಯದಿಂದಲೇ ಬಾಲಕರು ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಹೇಳಿದರು.

‘ಈಜುಕೊಳ ನಿರ್ವಹಣೆಯನ್ನು ಶೇಖರ್ ಎಂಬಾತ ಗುತ್ತಿಗೆ ಪಡೆದಿದ್ದ. ಮೋಹಿನ್ ಎಂಬಾತ ತರಬೇತುದಾರನಾಗಿದ್ದ. ನರೇಶ್ ಎಂಬಾತ ಈಜುಕೊಳದ ಸಿಬ್ಬಂದಿ. ಆರೋಪಿ ಮೋಹಿನ್‌ನನ್ನು ಬಂಧಿಸಲಾಗಿದೆ. ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಸ್ಯಾಂಕಿ ರಸ್ತೆಯಲ್ಲಿ ಬೈಕೊಂದು ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಸವಾರ ರಾಜೇಶ್ ಆಚಾರ್ಯ (28) ಮೃತಪಟ್ಟಿದ್ದಾರೆ.


‘ಯಶವಂತಪುರದ ನಿವಾಸಿ ರಾಜೇಶ್, ಮಣಿಪಾಲ್ ಆಸ್ಪತ್ರೆಯಲ್ಲಿ ಎ.ಸಿ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತ ಪರುಶುರಾಮ್ ಹಟ್ಟಿ ಜೊತೆ ಭಾನುವಾರ ರಾತ್ರಿ ವಿಧಾನಸೌಧ ವೀಕ್ಷಿಸಲು ಬೈಕ್‌ನಲ್ಲಿ ಹೊರಟಿದ್ದ ವೇಳೆ ಅವಘಡ ಸಂಭವಿಸಿದೆ’ ಎಂದು ಹೈಗ್ರೌಂಡ್ಸ್ ಸಂಚಾರ ಪೊಲೀಸರು ಹೇಳಿದರು.

‘ರಾಜೇಶ್ ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಪರುಶುರಾಮ್ ಕುಳಿತಿದ್ದರು. ಬೈಕ್ ಉರುಳಿದ್ದರಿಂದ ತೀವ್ರ ಗಾಯಗೊಂಡಿದ್ದ ಇಬ್ಬರನ್ನೂ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ರಾಜೇಶ್ ಮಾರ್ಗಮಧ್ಯೆಯೇ ಮೃತಪಟ್ಟಿದ್ದರು. ಪರಶುರಾಮ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ ಆರೋಪದಡಿ ರಾಜೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ.

‘ಸರ್ವೋದಯ ದಿನಾಚರಣೆ’: ನಿವೃತ್ತ ನ್ಯಾ. ನಾಗಮೋಹನ್ ದಾಸ್ ಅಭಿಮತ

‘ಯುವಜನರಿಗೆ ಗಾಂಧಿ ಪ್ರೇರಕ ಶಕ್ತಿ ಆಗಲಿ’

ಪ್ರಜಾವಾಣಿ ವಾರ್ತೆ



ನಗರದಲ್ಲಿ ಸೋಮವಾರ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ (ಎಡದಿಂದ) ಪಿಜಿಆರ್ ಸಿಂಧ್ಯ, ಎನ್.ಆರ್. ವಿಶುಕುಮಾರ್, ಎಚ್.ಎನ್ ನಾಗಮೋಹನ್ ದಾಸ್ ಮತ್ತು ವೊಡೇ. ಪಿ. ಕೃಷ್ಣ ಗಾಂಧೀಜಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕೋಮುವಾದ, ಭ್ರಷ್ಟಾಚಾರ, ಸರ್ವಾಧಿಕಾರ, ಅಪರಾಧೀಕರಣದ ವಿರುದ್ಧ ಜನರನ್ನು ಎತ್ತಿಕಟ್ಟುವ ಗಾಂಧೀಜಿ ಎಂಬ ಪ್ರೇರಕ ಶಕ್ತಿ ಯುವಸಮೂಹಕ್ಕೆ ಬೇಕಾಗಿದೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಹಯೋಗದಲ್ಲಿ ಸೋಮವಾರ ನಡೆದ ‘75ನೇ ವರ್ಷದ ಸರ್ವೋದಯ ದಿನಾಚರಣೆ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ‘ಗಾಂಧೀಜಿ ಅವರ ಸತ್ಯನುಡಿ, ಸತ್ಯದ ದಾರಿ, ಮತ್ತು ಅವರ ಮಾರ್ಗವನ್ನು ಅನುಸರಿಸಿಕೊಂಡು ದೇಶ ಮುನ್ನಡೆಸುವುದನ್ನು ಈ ಸಂದರ್ಭದಲ್ಲಿ ಯುವ ಸಮೂಹ ಕಲಿಯಬೇಕಾಗಿದೆ’ ಎಂದರು.

‘ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜನರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟಿದ್ದಕ್ಕೆ, ಕಾನೂನು ಉಲ್ಲಂಘನೆ ಎಂಬ ಹಲವು ಪ್ರಕರಣಗಳಲ್ಲಿ ಗಾಂಧೀಜಿ ಅವರನ್ನು ಬಂಧಿಸಲಾಗಿತ್ತು. ಆದರೆ, ಅವರು ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳ ಮುಂದೆ ಆ ಎಲ್ಲಾ ತಪ್ಪುಗಳನ್ನು ತಾವೇ ಮಾಡಿರುವುದಾಗಿ ಒಪ್ಪಿಕೊಂಡರು. ಹೀಗಾಗಿ 2,332 ದಿನಗಳ ಜೈಲು ಶಿಕ್ಷೆ ಅನುಭವಿಸಿದರು. ಆದರೆ ಇವತ್ತು ಕೋರ್ಟ್‌ನ ಹೊರಗಡೆ ಬಾಬರಿ ಮಸೀದಿಯ ಧ್ವಂಸ, ಗೋದ್ರಾ ಹತ್ಯಾಕಾಂಡವನ್ನು ತಾನೇ ಮಾಡಿದ್ದು ಎಂದು ಮೀಸೆ ತಿರುಗಿಸಿ ಹೇಳುತ್ತಾರೆ’ ಎಂದು ವಿಷಾದ ವ್ಯಕ್ತಪಡಿಸಿದರು.

‘ಪ್ರತಿಯೊಬ್ಬರೂ ಸರ್ವೋದಯ ಪಾತ್ರೆ ಎಂಬ ಒಂದು ಹುಂಡಿಯನ್ನು ಪ್ರಾರಂಭಿಸಿ, ಅದರಲ್ಲಿ ನಿತ್ಯ ಹಣ ಸಂಗ್ರಹಿಸಬೇಕು. ಸರ್ವೋದಯ ದಿನದಂದು ಬಡವರಿಗೆ ದೀನದಲಿತರ ಶ್ರೇಯೋಭಿವೃದ್ಧಿಗೆ ಆ ಹಣವನ್ನು ವಿನಿಯೋಗಿಸಬೇಕು. ನಾನು 2006ರಿಂದ ಇದುವರೆಗೂ ಆ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದೇನೆ’ ಎಂದು ಅವರು ಹೇಳಿದರು.

ಗಾಂಧಿ ಸ್ಮಾರಕದ ಉಪಾಧ್ಯಕ್ಷ ಎನ್. ಆರ್. ವಿಶುಕುಮಾರ್, ವೂಡೇ.ಪಿ. ಕೃಷ್ಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಎಂ.ಎಸ್. ಆಶಾದೇವಿ, ನಟರಾಜ್ ಹುಳಿಯಾರ್ ಇದ್ದರು.

ಪಾಪು-ಬಾಪುವನ್ನು ನಾಟಕವನ್ನು ಪ್ರದರ್ಶನ ಮಾಡಲಾಯಿತು.

ನಗರದಲ್ಲಿ ಫೆ.5ರಿಂದ 7ರವರೆಗೆ ಆಯೋಜನೆ

ಜಿ–20 ಇಂಧನ ಪರಿವರ್ತನಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿ-20 ರಾಷ್ಟ್ರಗಳ ಇಂಧನ ಪರಿವರ್ತನಾ ಕಾರ್ಯಕಾರಿ ಗುಂಪಿನ ಸಭೆಯು ಫೆಬ್ರುವರಿ 5ರಿಂದ 7ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಅಲೋಕ್ ಕುಮಾರ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತಕ್ಕೆ ಜಿ-20 ಗುಂಪಿನ ಅಧ್ಯಕ್ಷತೆ ದೊರಕಿರುವುದರಿಂದ ದೇಶದಾದ್ಯಂತ ಹಲವು ಸಭೆಗಳನ್ನು ಆಯೋಜಿಸಲಾಗುತ್ತಿದೆ. ಅದರ ಭಾಗವಾಗಿ ಇಂಧನ ಪರಿವರ್ತನೆಗೆ ಸಂಬಂಧಿಸಿದ ಸಭೆಯು ಬೆಂಗಳೂರಿನಲ್ಲಿ ನಿಗದಿಯಾಗಿದೆ. ಜಿ-20 ರಾಷ್ಟ್ರಗಳು ಹಾಗೂ ವಿಶ್ವಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್, ವಿಶ್ವ ಸಂಸ್ಥೆಯ ಅಭಿವೃದ್ಧಿ ಯೋಜನೆ ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದ ಮುಂಚೂಣಿ ಸಂಸ್ಥೆಗಳು ಸಭೆಯಲ್ಲಿ ಪಾಲ್ಗೊಳ್ಳುತ್ತಿವೆ' ಎಂದರು.

ಇದು ಇಂಧನ ಪರಿವರ್ತನಾ ಕಾರ್ಯಕಾರಿ ಗುಂಪಿನ ಮೊದಲ ಸಭೆ. ತಾಂತ್ರಿಕ ಅಡತಡೆಗಳನ್ನು ನಿವಾರಿಸುವ ಮೂಲಕ ಇಂಧನ ಪರಿವರ್ತನೆ, ಇಂಧನ ಪರಿವರ್ತನೆಗೆ ಕಡಿಮೆ ಬಡ್ಡಿದರದ ಹಣಕಾಸು, ಇಂಧನ ಸುರಕ್ಷತೆ ಮತ್ತು ಬಹುವಿಧದ ಪೂರೈಕೆ ಜಾಲ, ಇಂಧನ ಸಾಮರ್ಥ್ಯ, ಕೈಗಾರಿಕೆಗಳಲ್ಲಿ ಕಡಿಮೆ ಇಂಗಾಲ ಹೊರಸೂಸುವಿಕೆಯ ಪರಿವರ್ತನೆ ಮತ್ತು ಜವಾಬ್ದಾರಿಯುತ ಬಳಕೆ, ಭವಿಷ್ಯದ ಇಂಧನಗಳು ಹಾಗೂ ಸಾರ್ವತ್ರಿಕವಾಗಿ ಸ್ವಚ್ಛ ಇಂಧನದ ಲಭ್ಯತೆ ಮತ್ತು ಎಲ್ಲರನ್ನೂ ಒಳಗೊಳ್ಳುವಂತಹ ಇಂಧನ ಪರಿವರ್ತನೆಯ ಮಾರ್ಗ ಎಂಬ ವಿಚಾರಗಳನ್ನು ಕೇಂದ್ರೀಕರಿಸಿ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದರು.

ಭವಿಷ್ಯದ ಇಂಧನಗಳಾಗಿ ಜೈವಿಕ ಇಂಧನ ಮತ್ತು ಹಸಿರು ಜಲಜನಕದ ಬಳಕೆ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಯಲಿದೆ. ಇಂಧನ ಕ್ಷೇತ್ರದಲ್ಲಿನ ಮಾಲಿನ್ಯ ತಗ್ಗಿಸುವ ಸಾಧ್ಯತೆ, ಅವಕಾಶಗಳು ಮತ್ತು ಅನುಷ್ಠಾನದ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಲಾಗುವುದು. ಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳು ಫೆ. 7ರಂದು ಪಾವಗಡ ಸೌರಶಕ್ತಿ ಪಾರ್ಕ್‌ಗೆ ಭೇಟಿ ನೀಡಲಿದ್ದಾರೆ ಎಂದರು.

2030ರ ವೇಳೆಗೆ ದೇಶವು ಶೇಕಡ 40ರಷ್ಟು ಇಂಧನವನ್ನು ಪಳೆಯುಳಿಕೆಯೇತರ ಮೂಲಗಳಿಂದ ಪಡೆಯುವ ಗುರಿ ಹೊಂದಿತ್ತು. 2022ರಲ್ಲೇ ಅದನ್ನು ಸಾಧಿಸಲಾಗಿದೆ. ಇಂಧನ ಕ್ಷೇತ್ರದಲ್ಲಿನ ಮಾಲಿನ್ಯವನ್ನು 2030ರ ವೇಳೆಗೆ ಶೇ 4.5ಕ್ಕೆ ತಗ್ಗಿಸುವ ಗುರಿ ಇದೆ. ಜಗತ್ತಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಇಂಧನ ಕ್ಷೇತ್ರದಲ್ಲಿ ಅತಿಕಡಿಮೆ ಮಾಲಿನ್ಯ ಹೊಂದಿದೆ ಎಂದರು.

'ಉಚಿತ ವಿದ್ಯುತ್: ವಿರೋಧ'

ಬೆಂಗಳೂರು: ಉಚಿತವಾಗಿ ವಿದ್ಯುತ್ ಒದಗಿಸುವ ಯೋಜನೆ ಇಂಧನ ಉಳಿತಾಯ ನೀತಿಗೆ ವಿರುದ್ಧವಾದುದು. ಉಚಿತವಾಗಿ ವಿದ್ಯುತ್ ಒದಗಿಸಿದರೆ ಇಂಧನ ಉಳಿತಾಯದ ಕಾರ್ಯಕ್ರಮಗಳು ವಿಫಲವಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಅಲೋಕ್ ಕುಮಾರ್ ಹೇಳಿದರು.

ಜಿ–20 ರಾಷ್ಟ್ರಗಳ ಇಂಧನ ಪರಿವರ್ತನಾ ಕಾರ್ಯಕಾರಿ ಗುಂಪಿನ ಸಭೆಗೆ ಸಂಬಂಧಿಸಿದಂತೆ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಉಚಿತ ವಿದ್ಯುತ್ ಪೂರೈಸುವ ಯೋಜನೆಗಳ ಬಗ್ಗೆ ಪ್ರಶ್ನಿಸಿದಾಗ, 'ಇಂಧನ ಉಳಿತಾಯಕ್ಕಾಗಿ ಸರ್ಕಾರಗಳು ದೊಡ್ಡ ಮೊತ್ತದ ವೆಚ್ಚ ಮಾಡುತ್ತವೆ. ಉಚಿತವಾಗಿ ವಿದ್ಯುತ್ ಪೂರೈಸಿದರೆ ಮಿತ ಬಳಕೆಯ ಕುರಿತು ಜನರು ಯೋಚಿಸುವುದಿಲ್ಲ. ಆಗ ಇಂಧನ ಉಳಿತಾಯದ ಕಾರ್ಯಕ್ರಮಗಳು ಫಲ ನೀಡುವುದಿಲ್ಲ' ಎಂದರು.

2023ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ಪೂರೈಸಲಾಗುವುದು ಎಂದು ಆ ಪಕ್ಷದ ನಾಯಕರು ಇತ್ತೀಚೆಗೆ ಭರವಸೆ ನೀಡಿದ್ದರು.



ಕಾರ್ಮಿಕರ ಪ್ರತಿಭಟನೆ

'ಕಟ್ಟಡ ನಿರ್ಮಾಣ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹಾಗೂ ಕೃಷಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಒತ್ತಾಯಿಸಿ ಹಮ್ಮಿಕೊಂಡಿರುವ ಕಾರ್ಮಿಕರ ಕಲ್ಯಾಣ ರಥಯಾತ್ರೆ ಅಂಗವಾಗಿ ನಗರದ ಕಾರ್ಮಿಕರ ಭವನದ ಎದುರು ರಾಜ್ಯ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟದ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಹೊರಗುತ್ತಿಗೆ ನೌಕರರ ಕಾಯಂಗೆ ಆಗ್ರಹ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಹೊರಗುತ್ತಿಗೆ ನೌಕರರನ್ನು ನೇರ ಪಾವತಿಗೊಳಪಡಿಸಿ, ಕಾಯಂಗೊಳಿಸಬೇಕು ಎಂದು ಆಗ್ರಹಿಸಿ ಫೆ. 1ರಿಂದ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹೊರಗುತ್ತಿಗೆ ನೌಕರರ ಸಂಘ ಆಗ್ರಹಿಸಿದೆ.

ಕುಡಿಯುವ ನೀರು ಮತ್ತು ಸ್ವಚ್ಛತಾ ಕೆಲಸವನ್ನು ಸ್ಥಗಿತಗೊಳಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ. ನಾಗಣ್ಣಗೌಡ ಅವರು ಎಚ್ಚರಿಕೆ ನೀಡಿದ್ದಾರೆ.

'ಸ್ಯಾಂಕಿ ಮೇಲ್ಸೇತುವೆ ನಿರ್ಮಾಣಕ್ಕೆ ಬದ್ಧ'

ಬೆಂಗಳೂರು: ವಾಹನ ದಟ್ಟಣೆ ನಿವಾರಣೆಗೆ ಸ್ಯಾಂಕಿ ರಸ್ತೆ ವಿಸ್ತರಣೆ ಜೊತೆಗೆ ಮೇಲ್ಸೇತುವೆ ನಿರ್ಮಿಸುವುದು ಅನಿವಾರ್ಯ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಸ್ಯಾಂಕಿ ರಸ್ತೆ ವಿಸ್ತರಣೆ ಬಗ್ಗೆ ನಾವು ನ್ಯಾಯಾಲಯದಲ್ಲೇ ಸ್ಪಷ್ಟಪಡಿಸಿದ್ದೇವೆ. ಇದೀಗ ಮೇಲ್ಸೇತುವೆ ಹಾಗೂ ಅಂಡರ್‌ಪಾಸ್ ನಿರ್ಮಿಸಲು ತಾಂತ್ರಿಕವಾಗಿ ಯೋಜನೆ ಮಾಡಿದ್ದೇವೆ. ಇದು ಅತ್ಯಗತ್ಯವಾಗಿ ಬೇಕಿದೆ' ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

'ಹಲವರು ಮೇಲ್ಸೇತುವೆ ಮಾಡಿ ಎನ್ನುತ್ತಿದ್ದಾರೆ. ಕೆಲವರು ಬೇಡ ಎನ್ನುತ್ತಿದ್ದಾರೆ. ತಾಂತ್ರಿಕವಾಗಿ ನಾವು ಮುಂದಡಿ ಇಟ್ಟಿದ್ದೇವೆ. ಕಾವೇರಿ ಜಂಕ್ಷನ್ ಅಂಡರ್‌ಪಾಸ್ ಮಾರ್ಪಡಿಸಲಾಗುತ್ತದೆ. ಅದರಂತೆ ನಾವು ಎರಡನ್ನೂ ಮಾಡಬೇಕಿದೆ. ಅದರಂತೆಯೇ ಕಾಮಗಾರಿ ಕೈಗೊಳ್ಳುತ್ತೇವೆ' ಎಂದರು.

'ಪ್ರಜಾಪ್ರಭುತ್ವದಲ್ಲಿ ಬೇರೆ ಬೇರೆ ಅಭಿಪ್ರಾಯ ಇದ್ದೇ ಇರುತ್ತದೆ. ಬೆಂಗಳೂರು ಮೆಟ್ರೊಪಾಲಿಟನ್ ಭೂಸಾರಿಗೆ ಪ್ರಾಧಿಕಾರದವರೂ (ಬಿಎಂಎಲ್‌ಟಿಎ) ಈ ಮೇಲ್ಸೇತುವೆ ಬಗ್ಗೆ ಮಾಹಿತಿ ಕೇಳಿದ್ದಾರೆ. ಅವರಿಗೆ ಎಲ್ಲ ರೀತಿಯ ಮಾಹಿತಿ ಒದಗಿಸಲಾಗುವುದು. ರಸ್ತೆ ವಿಸ್ತರಣೆ ಮಾತ್ರ ಮಾಡಿದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಹೀಗಾಗಿ ತಾಂತ್ರಿಕವಾಗಿ ನಾವು ಮೇಲ್ಸೇತುವೆ, ಅಂಡರ್‌ಪಾಸ್ ನಿರ್ಮಾಣಕ್ಕೆ ಬದ್ಧವಾಗಿದ್ದೇವೆ' ಎಂದರು.

ಬಿಲ್ ಪಾವತಿ ಸಮಸ್ಯೆ: ಇಂದಿರಾ ಕ್ಯಾಂಟೀನ್ ಗುತ್ತಿಗೆದಾರರು ಜಲಮಂಡಳಿಗೆ ನೀರಿನ ಬಿಲ್ ಪಾವತಿಸದ್ದರಿಂದ ಸಂಪರ್ಕ ಕಡಿತಗೊಳಿಸಿದ್ದಾರೆ. ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಲಾಗಿದೆ. ಗುತ್ತಿಗೆದಾರರೇ ಇದೆಲ್ಲವನ್ನೂ ನಿರ್ವಹಿಸಬೇಕು ಎಂದು ತುಷಾರ್ ಗಿರಿನಾಥ್ ಹೇಳಿದರು.



ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಸೋಮವಾರ ಬಂದಿದ್ದ ಜನರು –ಪ್ರಜಾವಾಣಿ ಚಿತ್ರ

ಫಲಪುಷ್ಪ ಪ್ರದರ್ಶನ: ₹1.97 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ 'ಬೆಂಗಳೂರು ನಗರದ ಇತಿಹಾಸ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ'ಕ್ಕೆ ಸೋಮವಾರ ತೆರೆ ಬಿದ್ದಿತು.

'ಸೋಮವಾರ 4,285 ವಯಸ್ಕರು, 500 ಮಕ್ಕಳು ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದರು. ₹2,99,950 ಪ್ರವೇಶ ಶುಲ್ಕ ಸಂಗ್ರಹವಾಗಿದೆ' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ತಿಳಿಸಿದರು.

ತೋಟಗಾರಿಕೆ ಇಲಾಖೆ ಏರ್ಪಡಿಸಿದ್ದ ಈ ಪ್ರದರ್ಶನದಲ್ಲಿ ಬೆಂಗಳೂರಿನ 1500 ವರ್ಷಗಳ ಇತಿಹಾಸ ಅನಾವರಣಗೊಳಿಸಲಾಗಿತ್ತು. ಈ ಬಾರಿಯ ಪ್ರದರ್ಶನಕ್ಕೆ 2.50 ಕೋಟಿ ಖರ್ಚು ಮಾಡಲಾಗಿತ್ತು. '3,30,257 ಜನ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದ್ದು, ₹1,97,55,674 ಸಂಗ್ರಹವಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ ಅವರು ಮಾಹಿತಿ ನೀಡಿದರು.

ಲೋಕಾಯುಕ್ತದಿಂದ ಎಫ್‌ಐಆರ್

ಬೆಂಗಳೂರು: ಸಾರಿಗೆ ಇಲಾಖೆ ರಾಜ್ಯದ ಗಡಿ ಜಿಲ್ಲೆಗಳಲ್ಲಿರುವ ಏಳು ತನಿಖಾ ಠಾಣೆಗಳಲ್ಲಿ ಭ್ರಷ್ಟಾಚಾರದ ಕುರಿತು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಲೋಕಾಯುಕ್ತರು ಆದೇಶಿಸಿದ್ದು, ಈವರೆಗೆ ಐದು ಪ್ರಕರಣ ದಾಖಲಿಸಲಾಗಿದೆ.

ಭ್ರಷ್ಟಾಚಾರದ ಕುರಿತ ದೂರು ಆಧರಿಸಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. 2022ರ ಸೆ. 28ರಂದು ಕಾರ್ಯಾಚರಣೆ ನಡೆಸಿದ್ದು, ಲೋಕಾಯುಕ್ತ ಪೊಲೀಸರು ಬೆಂಗಳೂರಿನ ಅತ್ತಿಬೆಲೆ ತನಿಖಾ ಠಾಣೆಯಲ್ಲಿ ₹ 62,227 ಸೇರಿ ಅಕ್ರಮವಾಗಿ ಸಂಗ್ರಹಿಸಿದ್ದ ₹ 11.03 ಲಕ್ಷ ವಶಪಡಿಸಿಕೊಂಡಿದ್ದರು.

ಅತ್ತಿಬೆಲೆಯ ಮೋಟಾರು ವಾಹನ ನಿರೀಕ್ಷಕರಾದ ರಂಜಿತ್, ಲಕ್ಷ್ಮಿ ಮತ್ತು ಇತರ ನಾಲ್ವರ ವಿರುದ್ಧ ಬೆಂಗಳೂರು ಗ್ರಾಮಾಂತರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆಗೆ ಆದೇಶಿಸಲಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಜ್ಯಮಟ್ಟದ ವಿಚಾರಸಂಕಿರಣ, ಮಣ್ಣೆ ಮೋಹನ್ ಅವರು ಬರೆದ 'ಸಂಕಷ್ಟಹರ ಕ್ಯಾಮ್ಸ್' ಪುಸ್ತಕ ಬಿಡುಗಡೆ ಸಮಾರಂಭ: ಉದ್ಘಾಟನೆ: ಮುನಿಸ್ವಾಮಿ, ಅಧ್ಯಕ್ಷತೆ: ಪುಟ್ಟಣ್ಣ, ಉಪನ್ಯಾಸ: ವೀರೇಶಾನಂದ ಸರಸ್ವತಿ ಸ್ವಾಮೀಜಿ, ರೆಹಮಾನ್ ಖಾನ್, ಆಯೋಜನೆ: ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ (ಕ್ಯಾಮ್ಸ್), ಸ್ಥಳ: ಶೀಶ್ ಮಹಲ್ ಅರಮನೆ ಮೈದಾನ, ದ್ವಾರ ಸಂಖ್ಯೆ 7, ಬೆಳಿಗ್ಗೆ 9

ಸ್ವಯಂಪ್ರೇರಿತ ಬೃಹತ್ ರಕ್ತದಾನ ಮೇಳ: ಅತಿಥಿ: ವಿಶ್ವೇಶ್ವರ ಹೆಗಡೆ ಕಾಗೇರಿ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಅತಿಥಿಗಳು: ವೂಡೇ.ಪಿ. ಕೃಷ್ಣ, ರಾಜು ಚಂದ್ರಶೇಖರ, ಆಯೋಜನೆ: ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳು, ಸ್ಥಳ: ಶೇಷಾದ್ರಿಪುರ ಕಾಲೇಜು, ನಾಗಪ್ಪ ಬೀದಿ, ಶೇಷಾದ್ರಿಪುರ, ಬೆಳಿಗ್ಗೆ 10

ಪೌರ ಪ್ರಜೆಗಾಗಿ ಮಕ್ಕಳ ಚಳವಳಿ: ಉಪಸ್ಥಿತಿ: ಎಂ.ಎ. ಸಲೀಂ, ಸ್ಥಳ: ಸಂಚಾರಿ ಪೊಲೀಸ್ ಪಾರ್ಕ್, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 10

ಸವಿತಾ ಮಹರ್ಷಿ ಜಯಂತಿ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ: ಸವಿತಾನಂದ ಸ್ವಾಮೀಜಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಎಂ. ವೀರಪ್ಪ ಮೊಯ್ಲಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ವರಕವಿ ಬೇಂದ್ರೆ ಜಯಂತಿ: ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಪ್ರಾಸ್ತಾವಿಕ ನುಡಿ: ಶಿವಪ್ರಸಾದ್ ಪಿ., ಉಪನ್ಯಾಸ: ಕುಸುಮ ಬಿ.ಎಂ., ವಿಷಯ: ಬೇಂದ್ರೆ ಅವರ ಕಾವ್ಯದಲ್ಲಿ ಐದೆಯರು, ನಿರೂಪಣೆ: ತೇಜಸ್ವಿನಿ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್. ಅಂಬೇಡ್ಕರ್ ವೀಧಿ, ಮಧ್ಯಾಹ್ನ 12.30


'ಕೃಷ್ಣ ಸಂಧಾನ' ನಾಟಕ ಪ್ರದರ್ಶನ: ಉದ್ಘಾಟನೆ: ಡಿ. ರಾಜು, ಅಧ್ಯಕ್ಷತೆ: ಸಿದ್ರಾಮಸಿಂಧೆ, ಅತಿಥಿ: ಕೆ. ಮಹಾಲಿಂಗಯ್ಯ, ಆಯೋಜನೆ: ಅಖಿಲ ಕರ್ನಾಟಕ ರಂಗಭೂಮಿ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಬೇಂದ್ರೆ ನಮನ: ಅಧ್ಯಕ್ಷತೆ: ಮಹೇಶ ಜೋಶಿ, 'ಬೇಂದ್ರೆಯವರ ಸೃಜನಶೀಲತೆಯ ವಿಶಿಷ್ಟತೆ' ಕುರಿತು ಉಪನ್ಯಾಸ: ಬಸವರಾಜ ಕಲ್ಗುಡಿ, 'ಬೇಂದ್ರೆ ಕಾವ್ಯದಲ್ಲಿ ಒಲವು, ಅಂತಃಕರಣ' ಕುರಿತು: ಉಪನ್ಯಾಸ: ಎಂ.ಆರ್. ಕಮಲ, 'ಬೇಂದ್ರೆ ಕಾವ್ಯದಲ್ಲಿ ಗಾಯನ': ಸ್ಮಿತಾ ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಕವಿದಿನ ಪುಸ್ತಕ ಬಿಡುಗಡೆ ಸಮಾರಂಭ: ಎಚ್. ದಂಡಪ್ಪ ಅವರ 'ಬಿತ್ತಕ್ಕೆ ಬೇರಿನ ಚಿಂತೆ' ಪುಸ್ತಕ ಬಿಡುಗಡೆ: ಕೆ.ಎಂ. ಮರುಳಸಿದ್ಧಪ್ಪ, ಅತಿಥಿ: ನಟರಾಜ್ ಹುಳಿಯಾರ್, ಅಧ್ಯಕ್ಷತೆ: ಅನಿಲ್ ಜೋಸಫ್ ಪಿಂಟೊ, ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು ರಸ್ತೆ, ಸಂಜೆ 4.30

ದ.ರಾ. ಬೇಂದ್ರೆ ಜಯಂತಿ ಮತ್ತು ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ವೂಡೇ. ಪಿ. ಕೃಷ್ಣ, ಉದ್ಘಾಟನೆ: ವಿ. ಚಂದ್ರಶೇಖರ ನಂಗಲಿ, ಪ್ರಶಸ್ತಿ ಪುರಸ್ಕೃತರು: ಎಂ. ನರಸಿಂಹ, ಕೃತಿಗಳ ಬಿಡುಗಡೆ: ಬೈರಮಂಗಲ ರಾಮೇಗೌಡ, ಬಹುಮಾನ ವಿತರಣೆ: ಜಿ. ಕೃಷ್ಣಪ್ಪ, ಆಯೋಜನೆ: ದ.ರಾ. ಬೇಂದ್ರೆ ಕಾವ್ಯಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

'ಅಮ್ಮಾ ಮತ್ತು ಸುಹೇಲ್' ನಾಟಕ ಪ್ರದರ್ಶನ: ನಿರ್ದೇಶನ: ಕಾರ್ತಿಕ್ ಹೆಬ್ಬಾರ್, ಆಯೋಜನೆ: ಧೀಮಹಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30



'ಅಮ್ಮಾ ಮತ್ತು ಸುಹೇಲ್' ನಾಟಕದ ದೃಶ್ಯ


‘ಅಭಿಮಾನಿಗಳ ಮನೆಗಳಿಗೆ ಅಂಟಿಸಿಕೊಳ್ಳಲಿ’

ಒಮ್ಮೆ ಅಂಟಿಸಿದರೆ ಸುಲಭದಲ್ಲಿ ಕಿತ್ತು ಹಾಕುವುದು ಸಾಧ್ಯವಿಲ್ಲ. ಉಜ್ಜಿ ತೆಗೆಯಲು ಹೋದರೆ ಗೋಡೆ ಬಣ್ಣ ಕೂಡ ಕಿತ್ತುಹೋಗುತ್ತದೆ: ಸಾರ್ವಜನಿಕರ ಆಕ್ರೋಶ

ವಿವಿಧ ಪಕ್ಷಗಳ ಡಿಜಿಟಲ್ ಪೋಸ್ಟರ್ ತಂದ ಸಮಸ್ಯೆ

ಬೆಂಗಳೂರು: ವಿವಿಧ ರಾಜಕೀಯ ಪಕ್ಷಗಳು ಈ ಬಾರಿ ಚುನಾವಣಾ ಪ್ರಚಾರಕ್ಕಾಗಿ ಡಿಜಿಟಲ್ ಪೋಸ್ಟರ್‌ಗಳನ್ನು ಅಂಟಿಸುತ್ತಿದ್ದು, ಇದು ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ ಎಂದು ಜನರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಾರಿ ಮಾಮೂಲಿ ಕಾಗದದ ಪೋಸ್ಟರ್‌ಗಳ ಬದಲಿಗೆ ಡಿಜಿಟಲ್ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿದೆ. ಪಕ್ಷದ ಕಾರ್ಯಕರ್ತರ ಮತ್ತು ಪಕ್ಷದ ಅಭಿಮಾನಿಗಳ ಮನೆಗಳಿಗೆ ಅಂಟಿಸುವುದರ ಜತೆಗೆ ಇತರರ ಮನೆಗಳಿಗೂ ಅನುಮತಿ ಇಲ್ಲದೆ ಅಂಟಿಸುತ್ತಿರುವ ಬಗ್ಗೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಬಿಜೆಪಿಯ ಡಿಜಿಟಲ್ ಪೋಸ್ಟರ್

ವಿಜಯಸಂಕಲ್ಪ ಅಭಿಯಾನದ ಅಂಗವಾಗಿ ಬಿಜೆಪಿಯು ಮನೆ-ಮನೆಗಳಿಗೆ ಡಿಜಿಟಲ್ ಪೋಸ್ಟರ್‌ಗಳನ್ನು ಅಂಟಿಸಲಾರಂಭಿಸಿದೆ.

ಈ ಸಮಸ್ಯೆಯ ಕುರಿತು ಸಂಜಯನಗರದ ಬಡಾವಣೆಯ ನಿವಾಸಿಯೊಬ್ಬರು ‘ಪ್ರಜಾವಾಣಿ’ ಜತೆ ಮಾತನಾಡಿ, ‘ಅನುಮತಿ ಇಲ್ಲದೇ ನಮ್ಮ ಮನೆಯ ಮೇಲೆ ಪೋಸ್ಟರ್ ಅಂಟಿಸಿ ಹೋಗಿದ್ದಾರೆ. ಇತ್ತೀಚೆಗಷ್ಟೇ ಮನೆಯ ಗೋಡೆಗೆ ಬಣ್ಣ ಬಳಿಯಲಾಗಿತ್ತು. ಅದರ ಮೇಲೆಯೇ ಅಂಟಿಸಿದ್ದಾರೆ. ಪೋಸ್ಟರ್ ತೆಗೆಯಲು ಹೋಗಿ ಬಣ್ಣ ಕಿತ್ತು ಬರುತ್ತಿದೆ’ ಎಂದು ದೂರಿದರು.

‘ನಾವು ಯಾವುದೇ ಪಕ್ಷದ ವಿರುದ್ಧವಿಲ್ಲ. ಪ್ರಚಾರ ಕಾರ್ಯ ಮಾಡಿಕೊಳ್ಳಲಿ. ಅವರ ಪಕ್ಷಗಳ ಕಾರ್ಯಕರ್ತರು, ಅಭಿಮಾನಿಗಳ ಮನೆಗೆ ಅಂಟಿಸಲಿ. ಉಳಿದವರ ಮನೆಗೆ ಅಂಟಿಸುವುದು ಸರಿಯಲ್ಲ. ಗೇಟ್‌ಗಳಿಗೆ ನೋ ಪಾರ್ಕಿಂಗ್ ಮಾದರಿಯ ಪುಟ್ಟ ಬೋರ್ಡ್ ಹಾಕಿದರೆ, ಇಷ್ಟ ಇದ್ದವರು ಇಟ್ಟುಕೊಳ್ಳುತ್ತಾರೆ. ಇಲ್ಲದವರು ತೆಗೆಯುತ್ತಾರೆ’ ಎಂದು ವಿವರಿಸಿದರು.

ಕೃಷ್ಣಪ್ಪ ಹಿಡಿತ ಸಡಿಲಗೊಳಿಸಲು ಕಾಂಗ್ರೆಸ್ ಯತ್ನ

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

• ಎಸ್‌.ಕೆ. ವಿಜಯಕುಮಾರ್

ಬೆಂಗಳೂರು: ಬೆಂಗಳೂರು ದಕ್ಷಿಣ ಕ್ಷೇತ್ರ ಅಸ್ತಿತ್ವಕ್ಕೆ ಬಂದಾಗಿನಿಂದ ಮೂರು ಬಾರಿ ಶಾಸಕರಾಗಿರುವ ಎಂ.ಕೃಷ್ಣಪ್ಪ ಅವರ ಬಿಗಿ ಹಿಡಿತದಿಂದ ಕ್ಷೇತ್ರವನ್ನು ಬಿಡಿಸಲು ಕಾಂಗ್ರೆಸ್ ಸಿದ್ಧತೆ ನಡೆಸುತ್ತಿದೆ. ಜೆಡಿಎಸ್ ಕೂಡ ತನ್ನದೇ ಮತ ಬ್ಯಾಂಕ್ ಸೃಷ್ಟಿಸಿಕೊಳ್ಳುವ ತಯಾರಿ ಮಾಡುತ್ತಿದೆ.

ಬೆಂಗಳೂರು ದಕ್ಷಿಣದ ತುದಿಗೆ ಚಾಚಿಕೊಂಡಿರುವ ಕ್ಷೇತ್ರ ಉತ್ತರಹಳ್ಳಿಯಿಂದ ಆರಂಭವಾಗಿ, ಸುಬ್ರಹ್ಮಣ್ಯಪುರ, ವಸಂತಪುರ, ಯಲಚೇನಹಳ್ಳಿ, ಚುಂಚಘಟ್ಟ, ಬೇಗೂರು, ಕಾಳೇನ ಅಗ್ರಹಾರ, ಗೊಟ್ಟಿಗೆರೆ ಸುತ್ತಮುತ್ತಲ ಪ್ರದೇಶವನ್ನು ಒಳಗೊಂಡಿದೆ. ನಗರ ಮತ್ತು ನಗರವಾಗಿ ಹೊರಳುತ್ತಿರುವ ಹಳ್ಳಿಗಳು, ನೈಸ್ ರಸ್ತೆಯಿಂದ ಆಚೆಗಿನ ಹಳ್ಳಿಗಳೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಎಲೆಕ್ಟ್ರಾನಿಕ್ ಸಿಟಿಯಿಂದ ಬನ್ನೇರುಘಟ್ಟದ ತುದಿಗೆ ಮತ್ತು ಜಿಗಣಿ ತನಕ ವ್ಯಾಪಿಸಿಕೊಂಡಿದೆ.

ಕ್ಷೇತ್ರ ಸ್ಥಿತಿ ಗತಿ

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದಾಗ ಉತ್ತರಹಳ್ಳಿ ಕ್ಷೇತ್ರದಲ್ಲಿದ್ದ ಪ್ರದೇಶಗಳು ಬೆಂಗಳೂರು ದಕ್ಷಿಣ ಕ್ಷೇತ್ರವಾಗಿ ಪ್ರತ್ಯೇಕಗೊಂಡಿತು. ನಗರ ಮತ್ತು ಗ್ರಾಮೀಣ ಜನರು, ವಲಸೆ ಕಾರ್ಮಿಕರು ಈ ಕ್ಷೇತ್ರದ ಮತದಾರರು. ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರನ್ನು ಹೊಂದಿರುವ ವಿಧಾನಸಭಾ ಕ್ಷೇತ್ರ ಎಂಬುದೂ ಮತ್ತೊಂದು ವಿಶೇಷ. ಈ ಕ್ಷೇತ್ರದಲ್ಲಿ 6.50 ಲಕ್ಷ ಮತದಾರರಿದ್ದಾರೆ. 2018ರ ಚುನಾವಣೆಯಲ್ಲಿ 6.03 ಲಕ್ಷ ಜನ ಮತ ಚಲಾಯಿಸಿದ್ದರು.

ಕ್ಷೇತ್ರ ವಿಂಗಡಣೆಯಾದ ನಂತರದ ಎಲ್ಲ ಚುನಾವಣೆಗಳಲ್ಲಿ ಬಿಜೆಪಿ ತನ್ನ ಹಿಡಿತ ಸಾಧಿಸಿಕೊಂಡೇ ಬಂದಿದೆ. ಸತತ ಮೂರು ಬಾರಿ ಎಂ. ಕೃಷ್ಣಪ್ಪ ಅವರೇ ಶಾಸಕರಾಗಿ ಆಯ್ಕೆಯಾಗಿದ್ದಾರೆ. ನಾಲ್ಕನೇ ಬಾರಿ ಚುನಾವಣೆಗೆ ಸ್ಪರ್ಧಿಸುವ ಉಮೇದಿನಲ್ಲಿದ್ದಾರೆ. ಬಿಜೆಪಿಯಿಂದ ತುಳಸಿ ಮುನಿರಾಜಗೌಡ ಕೂಡ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ರಾಜರಾಜೇಶ್ವರಿನಗರ ಅಥವಾ ಬೆಂಗಳೂರು ದಕ್ಷಿಣ ಕ್ಷೇತ್ರ ಎರಡರಲ್ಲಿ ಒಂದು ಕಡೆ ಟಿಕೆಟ್ ಬಯಸುತ್ತಿದ್ದಾರೆ. ಅದರಲ್ಲೂ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲು ಹೆಚ್ಚು ಉತ್ಸಾಹ ತೋರುತ್ತಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

ಇನ್ನು ಕಾಂಗ್ರೆಸ್‌ನಿಂದ ಆರ್‌.ಕೆ. ರಮೇಶ್, ರಾಜಗೋಪಾಲರೆಡ್ಡಿ, ಅವರ ಪತ್ನಿ ಸುಷ್ಮಾ ರಾಜಗೋಪಾಲರೆಡ್ಡಿ, ಕಿಶೋರ್ ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದಾರೆ. 2018ರ ಚುನಾವಣೆಯಲ್ಲಿ ಆರ್‌. ಕೆ. ರಮೇಶ್ ಸ್ಪರ್ಧಿಸಿ 1.22 ಲಕ್ಷ ಮತಗಳನ್ನು ಪಡೆದು ಎರಡನೇ ಸ್ಥಾನದಲ್ಲಿದ್ದರು. ಈ ಬಾರಿಯೂ ಟಿಕೆಟ್ ಬಯಸಿದ್ದಾರೆ. 2008ರ ಚುನಾವಣೆಯಲ್ಲಿ ರಾಜಗೋಪಾಲರೆಡ್ಡಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ 17 ಸಾವಿರ ಮತಗಳನ್ನು ಪಡೆದಿದ್ದರು. ಈ ಬಾರಿಯೂ ಅವರು ಟಿಕೆಟ್ ಆಕಾಂಕ್ಷಿ ಆಗಿದ್ದಾರೆ.

ಆರ್‌. ಪ್ರಭಾಕರ ರೆಡ್ಡಿ ಅವರಿಗೆ ಜೆಡಿಎಸ್ ಟಿಕೆಟ್ ಘೋಷಿಸಿದೆ. ಪ್ರಭಾಕರ ರೆಡ್ಡಿ 2013ರಲ್ಲಿ ಸ್ಪರ್ಧೆ ಮಾಡಿ 71 ಸಾವಿರ ಮತಗಳನ್ನು ಪಡೆಯುವ ಮೂಲಕ ಎರಡನೇ ಸ್ಥಾನಕ್ಕೆ ಬಂದಿದ್ದರು. ಆದರೆ, 2018ರ ಚುನಾವಣೆಯಲ್ಲಿ 36 ಸಾವಿರ ಮತಗಳನ್ನು ಪಡೆದು ಮೂರನೇ ಸ್ಥಾನಕ್ಕೆ ಇಳಿದಿದ್ದರು. ಚುನಾವಣೆ ಸಮೀಪಿಸುತ್ತಿರುವಂತೆಯೇ ಮೂರೂ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳು ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದಾರೆ.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ


ಎಂ.ಕೃಷ್ಣಪ್ಪ
ಹಾಲಿ ಶಾಸಕ (ಬಿಜೆಪಿ)



ಹಾಲಿ ಮತದಾರರ ವಿವರ

3,44,268 ಪುರುಷರು
3,06,165 ಮಹಿಳೆಯರು
99 ತೃತೀಯ ಲಿಂಗಿಗಳು
6,50,532 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,22,068	63,849	36,979
ಬಿಜೆಪಿ	1,52,427	1,02,207	71,114
ಜೆಡಿಎಸ್	36,138	72,045	33,529

ಸುದ್ದಿ 2 ನಿಮಿಷ

ಮುಸ್ಲಿಂ, ಕ್ರೈಸ್ತ ಮತದಾರರ ಹೆಸರಿಗೆ ಕೋಕ್ : ರಿಜ್ವಾನ್ ದೂರು

ಬೆಂಗಳೂರು: ‘ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದ ಸುಮಾರು 8 ಸಾವಿರ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

‘ಕ್ಷೇತ್ರದಲ್ಲಿ 193 ಮತಗಟ್ಟೆಗಳನ್ನು ಅಂತಿಮಗೊಳಿಸಲಾಗಿದೆ. ಈ ಮತಗಟ್ಟೆಗಳಲ್ಲಿ 17 ಸಾವಿರ ಮತದಾರರ ಹೆಸರನ್ನು ಜ. 15 ರಂದು ಪ್ರಕಟಿಸಿದ ಅಂತಿಮ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಹೀಗೆ ಪಟ್ಟಿ ಪ್ರಕಟಿಸಿದ ನಂತರವೂ 91 ಮತಗಟ್ಟೆಗಳಲ್ಲಿ ಮತ್ತೆ 9,195 ಮತದಾರರ ಹೆಸರನ್ನು ತೆಗೆದುಹಾಕಲು ನೋಟಿಸ್ ನೀಡಲಾಗಿದೆ ಎಂದು ಗೊತ್ತಾಗಿದೆ. ಈ ಪೈಕಿ, 8 ಸಾವಿರ ಮತದಾರರರು ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯವರು’ ಎಂದು ದೂರಿನಲ್ಲಿ ಅವರು ತಿಳಿಸಿದ್ದಾರೆ.

‘102 ಮತಗಟ್ಟೆಗಳನ್ನು ಹೊರತುಪಡಿಸಿ, ಕೇವಲ 91 ಮತಗಟ್ಟೆಗಳಲ್ಲಿ ಮುಸ್ಲಿಂ, ಕ್ರೈಸ್ತ ಸಮುದಾಯದ ಮತದಾರರನ್ನು ಗುರುತಿಸಿ, ಅವರನ್ನು ಗುರಿಯಾಗಿಸಿ ಹೆಸರು ತೆಗೆದುಹಾಕಲಾಗುತ್ತಿದೆ. ನೋಟಿಸ್ ಪಡೆದಿರುವ ಮತದಾರರು ಅನಕ್ಷರಸ್ಥರು. ನೋಟಿಸ್‌ಗೆ ಹೇಗೆ ಉತ್ತರಿಸಬೇಕೆಂದು ಗೊತ್ತಿಲ್ಲ. ಹೀಗೆ ಮಾಡುವ ಮೂಲಕ ಅವರ ಮೂಲಭೂತ ಹಕ್ಕು ಕಸಿಯಲಾಗುತ್ತಿದೆ’ ಎಂದಿದ್ದಾರೆ.

ಎಎಪಿ ಸೇರಿದ ಡಿಕೆಶಿ ಸೋದರಿ ಪತಿ



ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸೋದರಿಯ ಪತಿ ಹಾಗೂ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ಸಿ.ಪಿ. ಶರತ್ ಚಂದ್ರ ಆಮ್ ಆದ್ಮಿ ಪಾರ್ಟಿಗೆ ಸೋಮವಾರ ಸೇರ್ಪಡೆಯಾದರು.

ಪಕ್ಷದ ಪ್ರಚಾರ ಹಾಗೂ ಜನಸಂಪರ್ಕ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹಾಗೂ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಭಾಸ್ಕರ್ ರಾವ್ ಸಮ್ಮುಖದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಿತು.

‘ಮುಖ್ಯಮಂತ್ರಿ’ ಚಂದ್ರು ಮಾತನಾಡಿ, ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ನಾಯಕ ಸಿ.ಪಿ.ಶರತ್ ಚಂದ್ರ ಆಪ್‌ಗೆ ಸೇರ್ಪಡೆಯಾಗಿರುವುದರಿಂದ ಪಕ್ಷ ಸಂಘಟನೆಗೆ ಆನೆಬಲ ಬರಲಿದೆ’ ಎಂದರು.

ಭಾಸ್ಕರ್ ರಾವ್ ಮಾತನಾಡಿ, ‘2013, 2014, 2019ರ ಚುನಾವಣೆಗಳಲ್ಲಿ ಬೆಂಗಳೂರು ಗ್ರಾಮಾಂತರದಲ್ಲಿ ಕಾರ್ಯನಿರ್ವಹಿಸಿದ ಅನುಭವ ಶರತ್‌ಚಂದ್ರ ಅವರಿಗಿದೆ’ ಎಂದರು.

ಸಿ.ಪಿ.ಶರತ್ ಚಂದ್ರ ಮಾತನಾಡಿ, ‘ಕರ್ನಾಟಕದಲ್ಲಿ ಪ್ರಾಮಾಣಿಕ, ದಕ್ಷ ಹಾಗೂ ಜನಪರ ಆಡಳಿತ ಬರಬೇಕೆಂಬ ಸದುದ್ದೇಶದಿಂದ ಆಮ್ ಆದ್ಮಿ ಪಾರ್ಟಿಗೆ ಸೇರ್ಪಡೆಯಾಗುತ್ತಿದ್ದೇನೆ’ ಎಂದರು.

‘10 ಪ್ರಶ್ನೆಗೆ ಸಿಎಂ ಉತ್ತರಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಂಗಳೂರು ಉಸ್ತುವಾರಿಯನ್ನೂ ಹೊಂದಿರುವ ಮುಖ್ಯಮಂತ್ರಿಗೆ 10 ಪ್ರಶ್ನೆಗಳನ್ನು ಕೇಳುತ್ತೇನೆ. ಅದಕ್ಕೆ ಸೂಕ್ತ ಉತ್ತರ ನೀಡಲಿ. ಅಗತ್ಯ ಇದ್ದರೆ ಅವರು ಕರೆಯುವ ವೇದಿಕೆಯಲ್ಲಿ ಬಹಿರಂಗ ಚರ್ಚೆಗೂ ಸಿದ್ಧ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಬೆಂಗಳೂರು ಅಭಿವೃದ್ಧಿ ವಿಚಾರವಾಗಿ ವಿರೋಧ ಪಕ್ಷಗಳು ಚರ್ಚೆಗೆ ಬರಲಿ ಎಂದು ಮುಖ್ಯಮಂತ್ರಿ ಪಂಥಾಹ್ವಾನ ನೀಡಿದ್ದಾರೆ. ಆ ಸವಾಲು ಸ್ವೀಕರಿಸಲು ನಾನು ಸಿದ್ಧನಿದ್ದೇನೆ. ಆದರೆ, ಅದಕ್ಕೂ ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರಿಸಲಿ’ ಎಂದರು.

‘ಸಿಲಿಕಾನ್ ಸಿಟಿ ಎನಿಸಿಕೊಂಡಿದ್ದ ಬೆಂಗಳೂರು ಈಗ ರಸ್ತೆ ಗುಂಡಿ ಸಿಟಿ ಆಗಿದೆ. ಇದೇನಾ ನಿಮ್ಮ ಅಭಿವೃದ್ಧಿ. ರಸ್ತೆ ಗುಂಡಿಗಳಿಗೆ 20ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ನೂರಾರು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಸಾವಿರಾರು ಅಪಘಾತಗಳಾಗಿವೆ. ಇದೇನಾ ನೀವು ಹೇಳುವ ಅಭಿವೃದ್ಧಿ. ಪ್ರಧಾನಿ ಭೇಟಿ ಸಮಯದಲ್ಲಿ ಹಾಕಿದ್ದ ಡಾಂಬರ್ ರಸ್ತೆ ಎರಡೇ ದಿನದಲ್ಲಿ ಮಾಯವಾಯಿತು. ಬೆಂಗಳೂರು ಅಭಿವೃದ್ಧಿಗೆ ಇದೇನಾ ಕೊಡುಗೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ರೆಡ್ಡಿ ಪ್ರಶ್ನಿಸಿದರು.


ರಾಮಲಿಂಗಾರೆಡ್ಡಿ

‘ಬಿಬಿಎಂಪಿ ವ್ಯಾಪ್ತಿಯ ಕಾಮಗಾರಿಗಳಲ್ಲಿ ಶೇ 40 ಕಮಿಷನ್ ಪಡೆದಿರುವುದು ನಿಮ್ಮ ಅಭಿವೃದ್ಧಿಯೇ? ಹಿಂದೆಂದೂ ಕಂಡುಕೇಳದ ಪ್ರವಾಹ ಬರುವಂತೆ ನಗರದ ಮೂಲಸೌಕರ್ಯ ಹಾಳು ಮಾಡಿರುವುದೇ ಅಭಿವೃದ್ಧಿಯೇ? ಮತ ಕಳವು ಮಾಡಿ ಐಎಎಸ್ ಅಧಿಕಾರಿಗಳ ತಲೆದಂಡ ಆಗಿರುವುದು ನಿಮ್ಮ ಅಭಿವೃದ್ಧಿಯೇ?’ ಎಂದೂ ಕೇಳಿದರು.

‘ರಾತ್ರೋರಾತ್ರಿ ₹ 10 ಸಾವಿರ ಕೋಟಿ ಬಿಬಿಎಂಪಿ ಬಜೆಟ್ ಘೋಷಣೆ ಮಾಡಿ, ಯಾವ ಕಾರ್ಯಕ್ರಮವನ್ನೂ ಜಾರಿ ಮಾಡದೇ ಇರುವುದು ನಿಮ್ಮ ಅಭಿವೃದ್ಧಿಯೇ? ನಿಮ್ಮ ಸರ್ಕಾರದ ಪ್ರಚಾರದ ಗಿಮಿಕ್ ‘ನಮ್ಮ ಕ್ಲಿನಿಕ್’ ಯೋಜನೆ ವಿಫಲವಾಗಿರುವುದು ಸಾಧನೆಯೇ? ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಿ, ಬೇರೆ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅನುದಾನ ತಾರತಮ್ಯ ನಿಮ್ಮ ಅಭಿವೃದ್ಧಿಯೇ? ಉಪನಗರ ರೈಲು ಯೋಜನೆ, ಫೆರಿಫೆರಲ್ ರಿಂಗ್ ರಸ್ತೆ ಯೋಜನೆ ಕುಂಠಿತವಾಗಿರುವುದು ನೀವು ಹೇಳುವ ಸಾಧನೆ ಅಲ್ಲವೇ? ನೀವು ಹೇಳುವ ಅಭಿವೃದ್ಧಿಯಲ್ಲಿ ಒಂದು ರಸ್ತೆ, ಫ್ಲೈ ಓವರ್ ನಿರ್ಮಾಣ ಮಾಡಿರುವುದನ್ನು ಹೇಳಬಲ್ಲಿರಾ’ ಎಂದು ಪ್ರಶ್ನಿಸಿದ ರಾಮಲಿಂಗಾರೆಡ್ಡಿ, ಉತ್ತರಿಸುವಂತೆ ಆಗ್ರಹಿಸಿದರು.

‘ಸಿದ್ದರಾಮಯ್ಯ ಮಗ, ಡಿಕೆಶಿ ಕುಟುಂಬದವರೂ ಬಿಜೆಪಿ ಸೇರ್ತಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇವತ್ತು ಕಾಂಗ್ರೆಸ್‌ನ ಒಬ್ಬ ಮಾಜಿ ಶಾಸಕರ ಮಗ ನಮ್ಮ ಪಕ್ಷ ಸೇರಿದ್ದಾರೆ. ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರ ಮಗ, ಡಿ.ಕೆ. ಶಿವಕುಮಾರ್ ಕುಟುಂಬದವರು ಬಿಜೆಪಿ ಸೇರಲಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದ್ದಾರೆ.


ನಳಿನ್‌ಕುಮಾರ್ ಕಟೀಲ್

ಪಕ್ಷದ ಕಚೇರಿಯಲ್ಲಿ ಸೋಮವಾರ ಮೈಸೂರಿನ ಮಾಜಿ ಶಾಸಕ ವಾಸು ಅವರ ಪುತ್ರ ಕಾಂಗ್ರೆಸ್‌ನ ಕವೀಶ್‌ಗೌಡ ವಾಸು ಮತ್ತು ಇತರ ಮುಖಂಡರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ವಾಸು ಅವರ ಮನೆಯಿಂದಲೇ ಪರಿವರ್ತನೆ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಸಿದ್ರಾಮಣ್ಣನವರ ಮಗನೂ ಬಿಜೆಪಿ ಸೇರುತ್ತಾರೆ’ ಎಂದರು.

> **ನಳಿನ್ ಕುಮಾರ್ ಕಟೀಲ್ ಒಬ್ಬ ವಿದೂಷಕ. ಅವನಿಗೆ ರಾಜಕೀಯ ಜ್ಞಾನ ಇಲ್ಲ. ಅವನು ಏನೇನೋ ಮಾತನಾಡುತ್ತಾನೆ. ಅವನ ಹೇಳಿಕೆಗಳಿಗೆ ಪ್ರತಿಕ್ರಿಯಿಸಲ್ಲ**
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಬಿಜೆಪಿ ಕೆಲಸವನ್ನು ನೋಡುತ್ತದೆ. ಮನೆತನ, ಕುಟುಂಬದ ಹಿನ್ನೆಲೆಯನ್ನು ನೋಡುವುದಿಲ್ಲ. ಸಮಾಜದ ಜೊತೆಗಿನ ಒಡನಾಟ, ಸಿದ್ಧಾಂತದ ಮೇಲಿನ ನಂಬಿಕೆ, ಕೆಲಸಗಳನ್ನು ಗುರುತಿಸಿ ಅವಕಾಶ ಕೊಡುತ್ತದೆ. ಇಂದು ಹಳೆ ಮೈಸೂರು ಭಾಗದ ಇತರ ಪಕ್ಷಗಳ ಹಲವು ಪ್ರಮುಖರು ಪಕ್ಷವನ್ನು ಸೇರಿದ್ದಾರೆ. ಕುಟುಂಬವಾದದಿಂದ ರಾಷ್ಟ್ರೀಯವಾದಕ್ಕೆ ಬರುವ ಎಲ್ಲರನ್ನೂ ನಾವು ಸ್ವಾಗತಿಸುತ್ತೇವೆ’ ಎಂದರು.

ಬಿಜೆಪಿ ಪರ ಅಲೆ- ಬೊಮ್ಮಾಯಿ: ‘ಕರ್ನಾಟಕದಲ್ಲಿ ಬಿಜೆಪಿ ಪರ ಅಲೆ ಇದ್ದು, ಕಾಂಗ್ರೆಸ್‌ನವರು ಹತಾಶರಾಗಿ ಅವರ ವೈಫಲ್ಯ ಮುಚ್ಚಿಕೊಳ್ಳಲು ಸುಳ್ಳು ಭರವಸೆಗಳನ್ನು ನೀಡುವುದರ ಜತೆಗೆ, ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಬೊಮ್ಮಾಯಿ, ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಸೋಲು ಕಟ್ಟಿಟ್ಟ ಬುತ್ತಿ ಎಂದು ಹೇಳಿದರು.

‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಬಳಿಕ ದೇವನಹಳ್ಳಿಗೆ ಪ್ರಾಮುಖ್ಯ ಬಂದಿದೆ. ಇಲ್ಲಿ ಬಿಜೆಪಿ ಗೆಲ್ಲುವುದರಲ್ಲಿ ಎರಡು ಮಾತಿಲ್ಲ. ನಾನೇ ದೇವನಹಳ್ಳಿಗೆ ಭೇಟಿ ಕೊಡಲಿದ್ದೇನೆ. ಅಲ್ಲೊಂದು ಬೃಹತ್ ರ್‍ಯಾಲಿ ಮಾಡೋಣ’ ಎಂದರು.

ಕೆಆರ್‌ಎಸ್‌ನಿಂದ ಅಭಿಯಾನ

ಬೆಂಗಳೂರು: ರಾಜಕಾರಣಿಗಳು ವೋಟಿಗಾಗಿ ಮತದಾರರಿಗೆ ಆಮಿಷ ಒಡ್ಡುವ ಚುನಾವಣಾ ಅಕ್ರಮಗಳನ್ನು ತಡೆಯಲು, ರಾಜ್ಯದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯನ್ನು ಖಾತ್ರಿ ಪಡಿಸಲು ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಜಿಲ್ಲಾಧಿಕಾರಿ ಭೇಟಿ ಅಭಿಯಾನ ಹಮ್ಮಿಕೊಂಡಿದೆ.

‘ಪಕ್ಷದ ಮುಖಂಡರು ಕಾರ್ಯಕರ್ತರ ಜತೆಗೆ ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಈ ಬಗ್ಗೆ ಒತ್ತಾಯ ಮಾಡಲಿದ್ದಾರೆ’ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾಹಿತಿ ನೀಡಿದ್ದಾರೆ.

ರಾಜಕಾರಣಿಗಳನ್ನು ಪ್ರಶ್ನಿಸಿ, ಭ್ರಷ್ಟರನ್ನು ತರಾಟೆಗೆ ತೆಗೆದುಕೊಳ್ಳುವ ವಿಡಿಯೊಗಳನ್ನು ನಾಗರಿಕರು 88617 75862 ಗೆ ಕಳುಹಿಸಬೇಕು. ಹೀಗೆ ಕಳುಹಿಸಿದವರಿಗೆ ₹ 5 ಸಾವಿರ ಬಹುಮಾನ ನೀಡಲಾಗುವುದು ಎಂದಿದ್ದಾರೆ.

ಮತದಾರರಿಗೆ ₹ 6 ಸಾವಿರ ಆಮಿಷ ಆಯೋಗಕ್ಕೆ ಕಾಂಗ್ರೆಸ್ ದೂರು

ಬೆಂಗಳೂರು: ಮತದಾರರಿಗೆ ತಲಾ ₹ 6 ಸಾವಿರ ನೀಡುವುದಾಗಿ ಹೇಳಿಕೆ ನೀಡಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ನಿಯೋಗ ದೂರು ಸಲ್ಲಿಸಿದೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಶಾಸಕ ರಿಜ್ವಾನ್ ಅರ್ಷದ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರನ್ನು ಒಳಗೊಂಡ ನಿಯೋಗ ರಾಜ್ಯ ಚುನಾವಣಾ ಆಯೋಗದ ಕಚೇರಿಗೆ ಸೋಮವಾರ ಭೇಟಿ ನೀಡಿ ದೂರು ಸಲ್ಲಿಸಿದೆ.

‘ರಾಜ್ಯದ ಐದು ಕೋಟಿ ಮತದಾರರನ್ನು ₹ 30 ಸಾವಿರ ಕೋಟಿಗೆ ಖರೀದಿಸಲು ಬಿಜೆಪಿ ಸಂಚು ರೂಪಿಸಿದೆ. ಈ ಸಂಚಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರೇರಣೆ ನೀಡಿದ್ದಾರೆ. ಹೀಗಾಗಿ, ಈ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು’ ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.



ದೂರು ಸಲ್ಲಿಸಿದ ಬಳಿಕ ಮಾತನಾಡಿದ ಉಗ್ರಪ್ಪ, ‘ಪ್ರತಿ ಮತದಾರರಿಗೆ ತಲಾ ₹ 6 ಸಾವಿರ ಕೊಡುತ್ತೇವೆ ಎಂದು ರಮೇಶ ಜಾರಕಿಹೊಳಿ ಹೇಳಿದ್ದಾರೆ. ನಾವು ಈಗಾಗಲೇ ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೇವೆ. ಆದರೆ, ಪೊಲೀಸರು ಈಗಲೂ ಕಾನೂನು ಸಲಹೆ ಪಡೆಯುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ವಿಷಯ ಎಂದಿದ್ದಾರೆ. ಹೀಗಾಗಿ ದೂರು ನೀಡಿದ್ದೇವೆ’ ಎಂದರು.


‘ರಮೇಶ ಜಾರಕಿಹೊಳಿ, ನಡ್ಡಾ, ಕಟೀಲ್, ಬೊಮ್ಮಾಯಿ ಮೇಲೆ ಎಫ್‌ಐಆರ್ ದಾಖಲಿಸಲು ಆಯೋಗ ಸೂಚನೆ ಕೊಡಬೇಕು. ರಮೇಶ ಜಾರಕಿಹೊಳಿ ಹಾಗೂ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಶಾಸಕ ಸ್ಥಾನದಿಂದ ವಜಾ ಮಾಡಲು ನೋಟಿಸ್ ಕೊಡಬೇಕು. ನಡ್ಡಾ ಮತ್ತು ಕಟೀಲ್ ಅವರಿಗೂ ನೋಟಿಸ್ ನೀಡಿ, ಸಂಸದ ಸ್ಥಾನದಿಂದ ವಜಾ ಮಾಡಬೇಕು. ₹ 30 ಸಾವಿರ ಕೋಟಿ ಹಣದ ಹಿನ್ನೆಲೆ ಬಗ್ಗೆ ತನಿಖೆಗೆ ಆದಾಯ ತೆರಿಗೆ ಇಲಾಖೆಗೆ ಸೂಚಿಸಬೇಕು. ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂದು ಆಯೋಗಕ್ಕೆ ಮನವಿ ಸಲ್ಲಿಸಿದ್ದೇವೆ’ ಎಂದೂ ಹೇಳಿದರು.

ಮಠಕ್ಕೆ ಅನುದಾನ: ಮಾಹಿತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ (ಎಸ್‌ಜೆಎಂ) ವತಿಯಿಂದ ನಿರ್ಮಿಸಲಾಗುತ್ತಿರುವ ಅತಿ ಎತ್ತರದ ಬಸವೇಶ್ವರ ಪ್ರತಿಮೆ ಹಾಗೂ ಅಲ್ಲಮಪ್ರಭು ಸಂಶೋಧನಾ ಕೇಂದ್ರಕ್ಕೆ ನೀಡಿರುವ ಕೋಟ್ಯಂತರ ರೂಪಾಯಿ ಅನುದಾನದ ಮಾಹಿತಿ ಒದಗಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದ ಆದೇಶವನ್ನು ಪ್ರಶ್ನಿಸಿ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.



ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಅವರು, ‘ಮುರುಘಾಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಆದರೆ, ದುರದೃಷ್ಟವಶಾತ್ ಈಗಿನ ಪೀಠಾಧಿಪತಿ ಮುರುಘಾ ಶರಣರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಅಡಿಯಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಮಠಕ್ಕೆ ಸೇರಿದ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಸ್ಥಿರ ಮತ್ತು ಚರಾಸ್ತಿ ಹಾಗೂ ವಿದ್ಯಾಸಂಸ್ಥೆಗಳ ದೈನಂದಿನ ಆಡಳಿತಕ್ಕೆ ವ್ಯತ್ಯಯ ಉಂಟಾಗಬಾರದು ಎಂಬ ಏಕೈಕ ಕಾರಣಕ್ಕೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ’ ಎಂದರು.

‘ಮಠದ ವತಿಯಿಂದ ನಿರ್ಮಿಸಲಾಗುತ್ತಿರುವ ಅತಿ ಎತ್ತರದ ಬಸವ ಪ್ರತಿಮೆ ಹಾಗೂ ಅಲ್ಲಮಪ್ರಭು ಸಂಶೋಧನಾ ಕೇಂದ್ರಕ್ಕೆ ಸರ್ಕಾರವು ಕಾಲಕಾಲಕ್ಕೆ ಕೋಟ್ಯಂತರ ರೂಪಾಯಿಗಳ ಅನುದಾನ ನೀಡುತ್ತಾ ಬಂದಿದೆ. ಇದಕ್ಕೆ ತಾಜಾ ಉದಾಹರಣೆಯಾಗಿ 2022ರ ಸೆ.15ರಂದು ಸರ್ಕಾರ ₹ 10 ಕೋಟಿ ನೀಡಿದೆ. ಇದಕ್ಕೂ ಮುನ್ನ ಸಾಕಷ್ಟು ಆರ್ಥಿಕ ನೆರವು ಒದಗಿಸಲಾಗಿದೆ. ಈ ಕುರಿತ ಎಲ್ಲ ದಾಖಲೆಗಳನ್ನು ಕೋರ್ಟ್‌ಗೆ ಒದಗಿಸಲಾಗುವುದು’ ಎಂದರು.

‘ಮಠಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ ವಿಚಾರದಲ್ಲಿ ಸರ್ಕಾರ ನೀಡಿರುವ ಆರ್ಥಿಕ ನೆರವಿನ ಅಂಶಗಳೂ ಅಡಗಿವೆ. ಆಡಳಿತಾಧಿಕಾರಿ ನೇಮಕಕ್ಕೂ ಮುನ್ನ ಮುಖ್ಯಮಂತ್ರಿಗಳು ಸ್ವತಃ ನೂರು ಬಾರಿ ಯೋಚಿಸಿ ಈ ನಿರ್ಧಾರ ಕೈಗೊಂಡಿದ್ದಾರೆ. ಮಠದ ಜೊತೆ ಸಂಘರ್ಷ ಅಥವಾ ವ್ಯಾಜ್ಯ ಮಾಡುವ ಧೋರಣೆಯಿಲ್ಲ’ ಎಂದು ಸ್ಪಷ್ಟಪಡಿಸಿದರು.

ಆಡಳಿತಾಧಿಕಾರಿ ಪರ ಹಿರಿಯ ವಕೀಲ ಗಂಗಾಧರ ಗುರುಮಠ ಅವರಿಗೆ ಫೆಬ್ರುವರಿ 2ರಂದು ವಾದ ಮಂಡಿಸಲು ಅವಕಾಶ ನೀಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ರಿಟ್ ಅರ್ಜಿ: ‘ಮುರುಘಾ ಶರಣರ ವಿರುದ್ಧ ತನಿಖಾಧಿಕಾರಿಗಳು, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988ರ ಕಲಂ 8 (2) ರ ಅನ್ವಯ ವಿಚಾರಣೆ ಮುಗಿಯುವತನಕ ಶರಣರು ಅಧಿಕಾರ ಚಲಾಯಿಸುವಂತಿಲ್ಲ’ ಎಂದು ಸೆಷನ್ಸ್ ಕೋರ್ಟ್ ನೀಡಿರುವ ದಾಖಲೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಲಾಗಿದೆ’ ಎಂದು ಅರ್ಜಿದಾರರ ಪರ ವಕೀಲ ಸಂದೀಪ್ ಎಸ್.ಪಾಟೀಲ್ ಇದೇ ವೇಳೆ ನ್ಯಾಯಪೀಠಕ್ಕೆ ವಿವರಿಸಿದರು.

ನಕಲಿ ದಾಖಲೆ ನೀಡಿ ಸಾಲ: ಇಬ್ಬರ ಬಂಧನ

ಬೆಂಗಳೂರು: ಆಸ್ತಿಯ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚಿಸಿದ್ದ ಇಬ್ಬರನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದಾರೆ.

‘ತಿಪಟೂರಿನ ಲೋಕೇಶ್ ಹಾಗೂ ಅಯೂಬ್ ಬಂಧಿತರು. ಇವರಿಬ್ಬರು ಐದು ವರ್ಷಗಳಿಂದ ತಲೆಮರೆಸಿಕೊಂಡಿದ್ದರು. ಇತ್ತೀಚೆಗೆ ಲಭ್ಯವಾದ ಸುಳಿವು ಆಧರಿಸಿ ಇವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಖಾಲಿ ನಿವೇಶನಗಳ ಮಾಲೀಕರನ್ನು ಸಂಪರ್ಕಿಸುತ್ತಿದ್ದರು. ನಿವೇಶನ ಖರೀದಿಸುವುದಾಗಿ ಹೇಳಿ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು ನಾಪತ್ತೆಯಾಗುತ್ತಿದ್ದರು. ಅದೇ ಜೆರಾಕ್ಸ್ ಪ್ರತಿಗಳನ್ನು ಬಳಸಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು.’

‘ಆರೋಪಿಗಳು ಈ ವರೆಗೂ ₹ 2 ಕೋಟಿ ಸಾಲ ಪಡೆದು ವಂಚಿಸಿರುವ ಮಾಹಿತಿ ಇದೆ’ ಎಂದು ಮೂಲಗಳು ತಿಳಿಸಿವೆ.

‘ವಿಶೇಷ ತಂಡದ ಪೊಲೀಸರು, ಆರೋಪಿಗಳನ್ನು ಬಂಧಿಸಲು ಹೋಗಿದ್ದರು. ಅವರ ಜೊತೆ ವಾಗ್ವಾದ ನಡೆಸಿದ್ದ ಆರೋಪಿ ಲೋಕೇಶ್, ‘ನೂರಾರು ಕೋಟಿ ರೂಪಾಯಿ ಸಾಲ ಮಾಡಿರುವ ವಿಜಯ್ ಮಲ್ಯ ಅವರಿಗೆ ನೀವು ಏನು ಮಾಡುವುದಿಲ್ಲ. ₹ 2 ಕೋಟಿ ಪಡೆದಿರುವ ನನ್ನನ್ನು ಬಂಧಿಸಲು ಬಂದಿದ್ದಿರಾ. ಅವರನ್ನು ಹಿಡಿದುಕೊಂಡು ಬನ್ನಿ ನೋಡೋಣ’ ಎಂಬುದಾಗಿ ಪ್ರಶ್ನಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕುಟುಂಬದ ನಾಲ್ವರ ಆತ್ಮಹತ್ಯೆ ಪ್ರಕರಣ ಜಾಮೀನು ಅರ್ಜಿ: ಸರ್ಕಾರಕ್ಕೆ ನೋಟಿಸ್

ನವದೆಹಲಿ: ಬೆಂಗಳೂರಿನ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ನಾಲ್ವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ಎದುರಿಸುತ್ತಿರುವ ಪತ್ರಕರ್ತ ಹಲ್ಲೇಗೆರೆ ಶಂಕರ್ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ತಿಗಳರಪಾಳ್ಯದಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಿಂಧೂರಾಣಿ ಅವರ ಒಂಬತ್ತು ತಿಂಗಳ ಮಗು ಸಹ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ‘ಮಗುವಿನದ್ದು ಕೊಲೆ’ ಎಂಬುದು ಮರಣೋತ್ತರ ಪರೀಕ್ಷೆಯಿಂದ ದೃಢಪಟ್ಟಿತ್ತು.

ನಾಲ್ವರ ಆತ್ಮಹತ್ಯೆ ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಬ್ಯಾಡರಹಳ್ಳಿ ಪೊಲೀಸರು, ಭಾರತಿ ಅವರ ಪತಿಯಾದ ಪತ್ರಕರ್ತ ಹಲ್ಲೇಗೆರೆ ಶಂಕರ್ ಹಾಗೂ ಇಬ್ಬರು ಅಳಿಯಂದಿರ ವಿರುದ್ಧ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಅಳಿಯ ಇ.ಎಸ್.ಪ್ರವೀಣ್ ಕುಮಾರ್ ಅವರನ್ನು 2021ರ ಅಕ್ಟೋಬರ್ 1ರಂದು ಬಂಧಿಸಿದ್ದರು. ಶಂಕರ್ ಜಾಮೀನು ಅರ್ಜಿಯನ್ನು ಹೈಕೋರ್ಟ್ 2022ರ ಮೇ 19ರಂದು ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ ಶಂಕರ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸೋಮವಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಹಾಗೂ ಹೃಷಿಕೇಶ ರಾಯ್ ಅವರನ್ನು ಒಳಗೊಂಡ ಪೀಠ, ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತು.

ಉರುಸ್‌ನಲ್ಲಿ ಅಶ್ವತ್ಥನಾರಾಯಣ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಬಾಂಧವ್ಯ ನಗರದ ಪಾರ್ಸಿ ಗಾರ್ಡನ್‌ನಲ್ಲಿ ಮುಸ್ಲಿಮರು ಸೋಮವಾರ ಆಯೋಜಿಸಿದ್ದ ಸಂದಲ್ ಉರುಸ್‌ನಲ್ಲಿ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಪಾಲ್ಗೊಂಡಿದ್ದರು.

‘ಭಾರತದಲ್ಲಿ ನೂರಾರು ಸಮುದಾಯಗಳು, ಹತ್ತಾರು ಧರ್ಮಗಳು ಸಾವಿರಾರು ವರ್ಷಗಳಿಂದಲೂ ಸೌಹಾರ್ದದಿಂದ ಬದುಕುತ್ತಿವೆ. ಈ ವಾತಾವರಣವು ಸಮಾಜದಲ್ಲಿ ಶಾಂತಿಗೆ ಕಾರಣವಾಗಿದ್ದು, ಸಮೃದ್ಧಿ ತಂದಿದೆ’ ಎಂದು ಸಚಿವರು ಹೇಳಿದರು.

‘ಸಂಸ್ಕೃತಿ, ಸಂಪ್ರದಾಯಗಳನ್ನು ಸಮುದಾಯಗಳು ಪರಸ್ಪರ ಗೌರವಿಸಬೇಕು. ಎಲ್ಲರೂ ಕೊಡುಕೊಳ್ಳುವಿಕೆಯ ತತ್ವ ಆಧರಿಸಿ ಬದುಕಬೇಕು’ ಎಂದು ಆಶಿಸಿದರು.

‘ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟ. ನಮ್ಮಲ್ಲಿ ಎಂದೂ ಆಕ್ರಮಣಶೀಲತೆ ಕಂಡುಬಂದಿಲ್ಲ. ಇಲ್ಲಿ ಯಾರೂ ಪ್ರತ್ಯೇಕತೆಯ ಭಾವನೆಯನ್ನು ಎಂದಿಗೂ ಬೆಳೆಸಿಕೊಂಡಿಲ್ಲ. ನಮ್ಮಲ್ಲಿನ ಧರ್ಮ, ಭಕ್ತಿ ಚಳವಳಿಗಳ ಪ್ರಭಾವವೂ ಈ ನೆಲದಲ್ಲಿದೆ. ಸಹಿಷ್ಣುತೆಯಿಂದಾಗಿ ರಾಜ್ಯವು ಇಂದು ಮೇಲ್ಪಂಕ್ತಿಯಲ್ಲಿದೆ’ ಎಂದರು.


ಸಂದಲ್ ಉರುಸ್‌ನಲ್ಲಿ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಪಾಲ್ಗೊಂಡಿದ್ದರು

ಬಿಬಿಎಂಪಿ ಮಾಜಿ ಸದಸ್ಯೆ ಹೇಮಲತಾ ಕೇಶವ, ಬಿಜೆಪಿ ಮುಖಂಡರಾದ ಶಕೀಲ್ ಅಹಮದ್, ಕೇಶವಮೂರ್ತಿ, ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಉಪಸ್ಥಿತರಿದ್ದರು.



ಕುಂಬಾರ ಸಮುದಾಯದವರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಕುಂಬಾರರ ಅಭಿವೃದ್ಧಿ ನಿಗಮ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುಂಬಾರ ಅಭಿವೃದ್ಧಿ ನಿಗಮ ರಚಿಸಬೇಕು ಹಾಗೂ ವಿಶೇಷ ಮೀಸಲಾತಿ ಕಲ್ಪಿಸಬೇಕು’ ಎಂದು ಅಗ್ರಹಿಸಿ ಕುಂಬಾರ ಸಮುದಾಯದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ.

ಕರ್ನಾಟಕ ಕುಂಬಾರರ ಯುವಸೈನ್ಯ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಸಮುದಾಯದವರು, ತೆಲಂಗ ಕುಂಬಾರ ಗುರು ಪೀಠದ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಚಿತ್ರದುರ್ಗದ ಬಸವ ಮೂರ್ತಿಕುಂಬಾರಗುಂಡಯ್ಯಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ.

‘ಕುಂಬಾರ ಸಮುದಾಯದವರು ಸಮಾಜಕ್ಕೆ ಹಲವು ಕೊಡುಗೆ ನೀಡಿದ್ದಾರೆ. ರಾಜ್ಯದಲ್ಲಿ 25 ಲಕ್ಷ ಜನಸಂಖ್ಯೆ ಇರುವ ಸಮುದಾಯವು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದಾರೆ. ಸಮುದಾಯದ ಅಭಿವೃದ್ಧಿಗಾಗಿ ಹಲವು ಬಾರಿ ಪ್ರತಿಭಟನೆ ನಡೆಸಲಾಗಿದೆ. ನಮ್ಮ ಮನವಿಗಳಿಗೆ ಸರ್ಕಾರ ಸ್ಪಂದಿಸಿಲ್ಲ’ ಎಂದು ಪ್ರತಿಭಟನಕಾರರು ದೂರಿದರು.

‘ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜ. 22ರಿಂದ ರಥಯಾತ್ರೆ ಆರಂಭಿಸಿ, ಸ್ವಾತಂತ್ರ್ಯ ಉದ್ಯಾನಕ್ಕೆ ಬಂದಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರಿಸಲಿದ್ದೇವೆ’ ಎಂದು ಹೇಳಿದರು.

‘ಈಗಾಗಲೇ ರಚನೆಯಾಗಿರುವ ಕುಂಭ ಕಲಾಭಿವೃದ್ಧಿ ಮಂಡಳಿಯನ್ನು ಪ್ರತ್ಯೇಕಿಸಿ, ಕುಂಬಾರರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಸಮುದಾಯದವರಿಗೆ ವಿಶೇಷ ಮೀಸಲಾತಿ ನೀಡಬೇಕು’ ಎಂದು ಒತ್ತಾಯಿಸಿದರು.

ಸಚಿವ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಸಚಿವ ಕೋಟ ಶ್ರೀನಿವಾಸ್ ಪೂಜಾರಿ ಭೇಟಿ ನೀಡಿ ಮನವಿ ಸ್ವೀಕರಿಸಿದರು. ‘ಪ್ರತ್ಯೇಕ ಕುಂಬಾರರ ಅಭಿವೃದ್ಧಿ ನಿಗಮ ಸ್ಥಾಪನೆ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಲಾಗುವುದು’ ಎಂದರು.

ಲಿಖಿತ ಭರವಸೆ ಸಿಗುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲವೆಂದು ಸಮುದಾಯದವರು, ಧರಣಿ ಮುಂದುವರಿಸಿದ್ದಾರೆ.

ರೇಣುಕಾ ಎಲ್ಲಮ್ಮ ಮುತ್ತಿನ ಪಲ್ಲಕ್ಕಿ ಉತ್ಸವ ಫೆ.5ರಂದು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಚಿಕ್ಕರಸದತ್ತಿ ಎಂದೇ ಪ್ರಸಿದ್ಧಿ ಪಡೆದಿರುವ ಪಟ್ಟಣದ ಹೊಳೆಬೀದಿ ರೇಣುಕಾ ಎಲ್ಲಮ್ಮ ದೇವಿಯ 24ನೇ ಮಹಾ ಚಂಡಿಕಾಹೋಮ ಹಾಗೂ 51ನೇ ಜಾತ್ರಾ ಮಹೋತ್ಸವ ಫೆ.4ರಿಂದ ಆರಂಭಗೊಳ್ಳಲಿದ್ದು, ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ಫೆ.5ರಂದು ನಡೆಯಲಿದೆ.

4ರಂದು ಸಂಜೆ 6ಕ್ಕೆ ಮೂಲದೇವರ ಅನುಜ್ಞೆ, ಭೂಶಾಂತಿ, ಗಣಪತಿ ಪೂಜೆ, ಗಂಗಾಪೂಜೆ, ಸ್ವಸ್ತಿವಾಚನ, ಪಂಚಗವ್ಯಾರಾಧನೆ, ದೇವನಾಂದಿ, ಋತ್ವಿಕ್ ವರಣೆ, ಕ್ಷೇತ್ರಪಾಲ ವಾಸ್ತೋಷ್ಪತಿ, ಕಳಶ ಸ್ಥಾಪನೆ ಹಾಗೂ ಮಹಾ ಮಂಗಳಾರತಿ ನಡೆಯಲಿದೆ.

5ರಂದು ಬೆಳಿಗ್ಗೆ 7.05ಕ್ಕೆ ಮಹಾ ಚಂಡಿಕಾ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ ನಡೆಯಲಿದೆ. 12.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ತಂಬಿಟ್ಟಿನ ಆರತಿ ನಡೆಯಲಿದೆ. ಮಧ್ಯಾಹ್ನ 1ರಿಂದ ಅನ್ನಸಂತರ್ಪಣೆ ಆರಂಭಗೊಳ್ಳಲಿದೆ.

ಮಧ್ಯಾಹ್ನ 2.30ರಿಂದ ಸಂಜೆ 5ರವರೆಗೆ ನೀಲಿ ನಿಂಬೆಹಣ್ಣಿನ ದೀಪದ ಆರತಿ ಮತ್ತು ಅಮ್ಮನವರ ಉಯ್ಯಾಲೆ ಉತ್ಸವ ಏರ್ಪಡಿಸಲಾಗಿದೆ. ರಾತ್ರಿ 8.30ಕ್ಕೆ ಸಿಂಹ ಲಗ್ನದಲ್ಲಿ ವಿವಿಧ ಪುಷ್ಪಗಳ ಅಲಂಕಾರದೊಂದಿಗೆ ಎಲ್ಲಮ್ಮ ದೇವಿಯ ವಿಗ್ರಹವನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಗುವುದು.



ರೇಣುಕಾ ಎಲ್ಲಮ್ಮ ದೇವಿ ವಿಗ್ರಹ

ಪಲ್ಲಕ್ಕಿ ಮೆರವಣಿಗೆಯಲ್ಲಿ ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಬಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್ ಸೆಟ್ ಪ್ರಮುಖ ಆಕರ್ಷಣೆಯಾಗಲಿದೆ. ಜೊತೆಗೆ ಮದ್ದೂರಮ್ಮ ಪೂಜಾ ಕುಣಿತ, ಸ್ಥಳೀಯ ಕಲಾವಿದರ ತಮಟೆ, ನಗಾರಿ ಹಾಗೂ ಜಾನಪದ ಮೇಳ ನಡೆಯಲಿದೆ.

6ರಂದು ಬೆಳಿಗ್ಗೆ 6ಕ್ಕೆ ದೇವಿಯನ್ನು ದೇವಾಲಯದ ಮೂಲಸ್ಥಾನಕ್ಕೆ ಆಹ್ವಾನಿಸಲಾಗುವುದು. ನಂತರ ಪಂಚಗವ್ಯಾರಾಧನೆ, ಪುಣ್ಯಾಹವಾಚನ, ಕ್ಷೀರಾಭಿಷೇಕದ ಮೂಲಕ ಜಾತ್ರೆ ಸಂಪನ್ನಗೊಳ್ಳಲಿದೆ ಎಂದು ರೇಣುಕಾ ಎಲ್ಲಮ್ಮ ದೇವಿ ಸೇವಾ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕರ ನೇಮಕ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ರಾಜ್ಯದ ವಿವಿಧ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಹುದ್ದೆಗೆ ಕಳೆದ ಮಾರ್ಚ್‌ನಲ್ಲಿ (2022) ಪರೀಕ್ಷೆ ನಡೆಸಲಾಗಿತ್ತು. 33,379 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಸಂದರ್ಶನ ಇಲ್ಲದೇ ಅಂಕಗಳ ಆಧಾರದಲ್ಲೇ ನೇಮಕ ಪ್ರಕ್ರಿಯೆ ನಡೆಸಲಾಗಿತ್ತು. 26 ವಿಷಯಗಳ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಮೀಸಲಾತಿ ಅನುಗುಣವಾಗಿ ಪ್ರಕಟಿಸಲಾಗಿದೆ.

ಶಿಕ್ಷಕರ ನೇಮಕ: ಆಯ್ಕೆ ಪಟ್ಟಿ ರದ್ದು

ಒಂದನೇ ಪುಟದಿಂದ...

ಪ್ರಕರಣವೇನು?: ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6ರಿಂದ 8ನೇ ತರಗತಿ) ನೇಮಕಕ್ಕೆ ಶಿಕ್ಷಣ ಇಲಾಖೆ 2022ರ ಫೆಬ್ರುವರಿ 22ರಂದು ಅಧಿಸೂಚನೆ ಹೊರಡಿಸಿತ್ತು. ಇದರ ಅನುಸಾರ ಪ್ರಕರಣದ ಅರ್ಜಿದಾರ ಅಭ್ಯರ್ಥಿಗಳು, ಲಿಖಿತ ಪರೀಕ್ಷೆಗೆ ಹಾಜರಾಗಿ ಉತ್ತಮ ಅಂಕಗಳೊಂದಿಗೆ ರ‍್ಯಾಂಕ್ ಗಳಿಸಿದ್ದರು. 1:2ರ ಅನುಪಾತದ ಅನುಸಾರ ತಾತ್ಕಾಲಿಕ ಪಟ್ಟಿಯಲ್ಲಿ ದಾಖಲೆಗಳ ಪರಿಶೀಲನೆಗೆ ಅರ್ಹತೆ ಪಡೆದಿದ್ದರು.

ದಾಖಲೆಗಳನ್ನು ಪರಿಶೀಲಿಸಿದ್ದ ಇಲಾಖೆ ಯಾವುದೇ ಪ್ರಕ್ರಿಯೆ ನೀಡಿರಲಿಲ್ಲ. ಆದರೆ, 2022ರ ನವೆಂಬರ್ 18 ರಂದು ಪ್ರಕಟವಾದ 1:1ರ ತಾತ್ಕಾಲಿಕ ಪಟ್ಟಿಯಲ್ಲಿ ಅರ್ಜಿದಾರರು ಸ್ಥಾನ ಪಡೆದಿರಲಿಲ್ಲ. ಈ ಪಟ್ಟಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ನೇಮಕಾತಿ ಕುರಿತ ತಕರಾರು ಏನು?

ಒಂದನೇ ಪುಟದಿಂದ...

‘ಜಾತಿ ಮೀಸಲಾತಿ ಅನ್ವಯ ಹುದ್ದೆಗಳಿಗೆ ಆಯ್ಕೆ ಬಯಸುವವರು ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಬೇಕು. ಅವಿವಾಹಿತರು ತಂದೆಯ ಆದಾಯ, ವಿವಾಹಿತರು ಗಂಡನ ಆದಾಯ ವಿವರ ಸಲ್ಲಿಸಬೇಕು. ಹಲವು ವಿವಾಹಿತ ಮಹಿಳೆಯರು ತಮ್ಮ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಇದರಿಂದ ಅವರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ’ ಎಂದು ಇಲಾಖೆ ಆಯುಕ್ತ ಆರ್.ವಿಶಾಲ್ ಅವರು ವಿವರಣೆ ನೀಡಿದ್ದರು.

‘ಮದುವೆಯಾದ ಮಹಿಳೆಯರು ಪತಿಯ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ನೇಮಕಾತಿ ಅಧಿಸೂಚನೆಯಲ್ಲಿ ಯಾವುದೇ ಸ್ಪಷ್ಟ ನಿರ್ದೇಶನ ಇರಲಿಲ್ಲ. ಮೆರಿಟ್ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಅವಕಾಶವಂಚಿತರು ಆಕ್ಷೇಪಿಸಿದ್ದರು.

ಕ್ಷೇಮ ಕುಶಲ





ಶರೀರದ ಭಂಗಿ ಸರಿ ಇರಲಿ

ಪ್ರಸ್ತುತ ಜೀವನಶೈಲಿ ನಮ್ಮ ದೇಹದ ಭಂಗಿಯನ್ನು ಇನ್ನಷ್ಟು ಗಾಸಿಗೆ ಒಳಪಡಿಸಿದೆ. ದೇಹದ ಸಹಜ ಭಂಗಿ ಏನು? ಅದನ್ನು ಸರಿಯಾಗಿ ಅನುಸರಿಸುವುದು ಹೇಗೆ?

ಡಾ. ಕಿರಣ್ ವಿ. ಎಸ್.


ಪ್ರತಿಯೊಂದು ಪ್ರಾಣಿಗೂ ಅದರ ಸಹಜ ಭಂಗಿಗಳಿವೆ. ವಿಶ್ರಾಂತಿಯ ಮತ್ತು ಚಲನೆಯ ಸ್ಥಿತಿಗಳಲ್ಲಿ ಶರೀರ ನಿರ್ದಿಷ್ಟ ಭಂಗಿಗೆ ಹೊಂದಿಕೊಂಡಿರುತ್ತದೆ. ಭಂಗಿಯ ಸಮಸ್ಯೆ ಮಾನವರಲ್ಲಿ ವಿಶಿಷ್ಟ. ಜೀವವಿಕಾಸದಲ್ಲಿ ಮನುಷ್ಯಪ್ರಾಣಿ ಮೂಲತಃ ಚತುಷ್ಪಾದಿ. ಇದು ಕಾಲಾಂತರದಲ್ಲಿ ದ್ವಿಪಾದಿಯಾಗಿ ಬದಲಾಯಿತು. ಎರಡು ಕಾಲಿನ ಮೇಲೆ ನಿಲ್ಲಬಲ್ಲ, ನಡೆಯಬಲ್ಲ. ಓಡಬಲ್ಲ ಭಂಗಿ ಮಾನವಜೀವಿಯ ಅಸಾಧಾರಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರೂ, ವೈಯಕ್ತಿಕವಾಗಿ ಶರೀರದ ಮೇಲೆ ಹಲವಾರು ಕೆಟ್ಟ ಪರಿಣಾಮಗಳಿಗೂ ಕಾರಣವಾಯಿತು. ನಾಲ್ಕು ಕಾಲುಗಳ ಮೇಲೆ ಹರಡುತ್ತಿದ್ದ ತೂಕ ಎರಡು ಕಾಲುಗಳ ಮೇಲೆ ಅವಲಂಬಿತವಾಯಿತು. ಭೂಮಿಗೆ ಸಮಾನಾಂತರವಾಗಿ ಇರಬೇಕಾದ ಬೆನ್ನುಮೂಳೆ ನೆಲಕ್ಕೆ ಲಂಬವಾಗಿ ಇರುವಂತಾಗಿ, ಶರೀರದ ಮೇಲ್ಭಾಗದ ತೂಕ ಬೆನ್ನಿನ ಆಧಾರದ ಮೇಲೆ ಬೀಳುವಂತಾಯಿತು. ಸೊಂಟದ ಕೆಳಭಾಗದ ಮೂಳೆಗಳು, ಕೀಲುಗಳು, ಮತ್ತು ಮಾಂಸಖಂಡಗಳ ಮೇಲಿನ ಒತ್ತಡ ಮತ್ತಷ್ಟು ಹೆಚ್ಚಿ, ಹಲವಾರು ಕಾಯಿಲೆಗಳಿಗೆ ದಾರಿಯಾಯಿತು. ಪ್ರಸ್ತುತ ಜೀವನಶೈಲಿ ನಮ್ಮ ದೇಹದ ಭಂಗಿಯನ್ನು ಇನ್ನಷ್ಟು ಗಾಸಿಗೆ ಒಳಪಡಿಸಿದೆ. ದೇಹದ ಸಹಜ ಭಂಗಿ ಏನು? ಅದನ್ನು ಸರಿಯಾಗಿ ಅನುಸರಿಸುವುದು ಹೇಗೆ? ಈ ಪ್ರಕ್ರಿಯೆಯಿಂದ ಶರೀರಕ್ಕೆ ಆಗುವ ಲಾಭಗಳು ಏನೆಂಬುದನ್ನು ಎಲ್ಲರೂ ಅರಿತಿರಬೇಕು.

ದೇಹದ ಭಂಗಿ ವಿಶ್ರಾಮದ ಸ್ಥಿತಿಯಲ್ಲಿ ಮತ್ತು ಚಲನೆಯಲ್ಲಿ ಭಿನ್ನವಾಗಿರುತ್ತದೆ. ವಿಶ್ರಾಂತಿಯ ಸ್ಥಿತಿ ಎಂದರೆ ಬೇರೇನೂ ಮಾಡದೆ ಕುಳಿತಾಗ, ನಿಂತಾಗ, ಮತ್ತು ಮಲಗಿರುವಾಗ ಶರೀರ ಇರುವ ರೀತಿ. ಚಲನೆ ಎಂಬುದು ಓಡುವುದು, ನಡೆಯುವುದು, ಬಗ್ಗುವುದು ಮೊದಲಾದ ಯಾಂತ್ರಿಕ ಕೆಲಸಗಳನ್ನು ಒಳಗೊಂಡಿದೆ. ಇವೆರಡೂ ಸ್ಥಿತಿಗಳಲ್ಲಿ ನಮ್ಮ ಶರೀರ ಸರಿಯಾದ ಭಂಗಿಗಳನ್ನು ಅನುಸರಿಸಬೇಕು. ಈ ಪ್ರಕ್ರಿಯೆಯ ಅತಿ ಮುಖ್ಯ ಅಂಗ ಬೆನ್ನುಮೂಳೆ. ತಲೆಯ ಭಾಗವನ್ನು ಕಾಲುಗಳಿಗೆ ಸಂಪರ್ಕಿಸುವ ಬೆನ್ನುಮೂಳೆಯ ಕತ್ತಿನ ಮತ್ತು ಕೆಳ-ಬೆನ್ನಿನ ಭಾಗಗಳು ಹಿಂಬದಿಗೆ ಹಾಗೂ ಮಧ್ಯ-ಬೆನ್ನಿನ ಭಾಗ ಮುಂಬದಿಗೆ ನಯವಾಗಿ ಬಾಗಿದೆ. ಈ ಬಾಗುಗಳನ್ನು ಸಹಜ ಸ್ಥಿತಿಯಲ್ಲಿ ಇರಿಸಿಕೊಳ್ಳುವುದು ಆಯಾ ಭಂಗಿಯ ಮೂಲ ಉದ್ದೇಶ. ಆದರೆ ಪ್ರಸ್ತುತ ಜೀವನಶೈಲಿಯ ಬಹುತೇಕ ಕೆಲಸಗಳ ವೇಳೆ ಸಹಜ ಭಂಗಿಗಳ ಸ್ವರೂಪ ಬದಲಾಗುತ್ತದೆ. ಉದಾಹರಣೆಗೆ, ಬಹಳಷ್ಟು ಮಂದಿ ದಿನದ ಹಲವಾರು ಗಂಟೆಗಳ ಕಾಲ ಕತ್ತು ಬಗ್ಗಿಸಿ ತಮ್ಮ ಮೊಬೈಲ್ ಫೋನಿನ ಪರದೆಯ ಮೇಲೆ ಗಮನ ಹರಿಸುತ್ತಾರೆ. ಅಂದರೆ, ನೇರವಾಗಿ ಕತ್ತಿನ ಮೇಲೆ ಇರಬೇಕಾದ ತಲೆಯ ಭಾಗ ಹಲವಾರು ಗಂಟೆಗಳ ಕಾಲ ಕೆಳಗೆ ಬಾಗಿದ ಕೋನದಲ್ಲಿ ಇರುತ್ತದೆ. ಇತರ ಚತುಷ್ಪಾದಿ ಪ್ರಾಣಿಗಳಿಗೆ ಹೋಲಿಸಿದರೆ ಮನುಷ್ಯರ ಮೆದುಳಿನ ತೂಕ ಹೆಚ್ಚು. ಹೀಗಾಗಿ, ನಮ್ಮ ತಲೆಯ ತೂಕವೂ ಹೆಚ್ಚು. ಆದರೆ ಭಾರವಾದ ತಲೆಯನ್ನು ಹೊತ್ತಿರುವ ಕತ್ತಿನ ಭಾಗದ ಬೆನ್ನುಮೂಳೆ ವಿಕಾಸದ ಹಾದಿಯಲ್ಲಿ ಇನ್ನೂ ನಾಜೂಕಾಗಿಯೇ ಮುಂದುವರೆದಿದೆ. ದಶಕಗಳ ಕಾಲ ಭಾರವಾದ ತಲೆಯನ್ನು ನೇರವಾಗಿ ಹೊರುವುದೇ ಈ ನಾಜೂಕು ಮೂಳೆಗೆ ಕಷ್ಟದ ಸಂಗತಿ. ಪರದೆಯುಕ್ತ ಮೊಬೈಲ್ ಫೋನುಗಳ ಕಾರಣದಿಂದ ಕಳೆದ ಒಂದು ದಶಕದಲ್ಲಿ ಗಂಟೆಗಟ್ಟಲೆ ಬಗ್ಗಿರುವ ಕತ್ತಿನ ಕಾರಣದಿಂದ ಇದರ ಮೇಲೆ ಅಗಾಧ ಒತ್ತಡ ಬೀಳುತ್ತಿದೆ. ಕತ್ತುನೋವು, ತಲೆಸುತ್ತುವಿಕೆ, ಕೈಗಳ ನೋವು, ಬೆನ್ನಿನ ಮೇಲ್ಭಾಗದ ನೋವು ಮೊದಲಾದ ಸಮಸ್ಯೆಗಳು ಮೊಬೈಲ್ ಫೋನುಗಳ ಬಳಕೆದಾರರಲ್ಲಿ ಹೆಚ್ಚುತ್ತಿವೆ.

ಅಂತೆಯೇ, ಕಂಪ್ಯೂಟರ್ ಮತ್ತು ದೂರದರ್ಶನ ಪರದೆಗಳೂ ಬೆನ್ನಿನ ಮೇಲೆ ಒತ್ತಡಕ್ಕೆ ಕಾರಣವಾಗಿವೆ. ಬಹಳ ಕಾಲ ಕುಳಿತಾಗ ನಮಗೆ ಅರಿವಿಲ್ಲದಂತೆ ಬೆನ್ನು ಬಾಗುತ್ತದೆ. ಭುಜಗಳು ಸಡಿಲವಾಗಿ, ಕೆಳಗೆ ಜೋತು ಬೀಳುತ್ತವೆ. ಆಗ ಬೆನ್ನುಮೂಳೆಯ ಮಧ್ಯಭಾಗ ಮತ್ತಷ್ಟು ಹಿಂದಕ್ಕೆ ಓರೆಯಾಗುತ್ತದೆ. ಕೆಲವೊಮ್ಮೆ ದೇಹದ ತೂಕವನ್ನು ನಾವು ಎಡಗಡೆಗೋ ಇಲ್ಲವೇ ಬಲಗಡೆಗೋ ಹೆಚ್ಚು ವರ್ಗಾಯಿಸುತ್ತೇವೆ. ನೋಡುವ ನೋಟದಲ್ಲಿ ಮತ್ತು ಮಾಡುವ ಕೆಲಸದಲ್ಲಿ ನಮ್ಮ ನಿಗಾ ಇರುವುದರಿಂದ ಶರೀರದ ಆಯಾ ಭಾಗ ನೀಡುವ ನೋವಿನ ಸೂಚನೆಗಳು ನಮ್ಮ ಗಮನಕ್ಕೆ ಬಾರದೆ ಹೋಗುತ್ತವೆ. ಇದರಿಂದ ನೋವು ಒಂದು ನಿರ್ದಿಷ್ಟ ಹಂತವನ್ನು ದಾಟುವವರೆಗೆ ನಾವು ಅದನ್ನು ಲಕ್ಷಿಸುವುದೇ ಇಲ್ಲ. ನೋವು ನಮ್ಮ ಅರಿವಿಗೆ ಬರುವಷ್ಟರಲ್ಲಿ ಮೂಳೆಗಳು ಮತ್ತು ಸ್ನಾಯುಗಳು ಸಾಕಷ್ಟು ಗಾಸಿಗೊಂಡಿರುತ್ತವೆ. ಇದು ಬಹುತೇಕ ಪ್ರತಿದಿನವೂ ನಡೆಯುತ್ತಲೇ ಹೋಗುವ ಪ್ರಕ್ರಿಯೆ. ಸಮಸ್ಯೆ ಹೆಚ್ಚಾದಾಗ ಶರೀರ ಅದನ್ನು ಮತ್ತಷ್ಟು ಸಹಿಸಲು ಸಾಧ್ಯವಿಲ್ಲದೆ ವೈದ್ಯರ ಮೊರೆ ಹೋಗಬೇಕಾಗುತ್ತದೆ. ಹಲವಾರು ಪುಸ್ತಕಗಳನ್ನು ಒಟ್ಟಿರುವ ಭಾರವಾದ ಬೆನ್ನಿನ ಚೀಲ ಹೊತ್ತು ನಡೆಯುವ ಶಾಲಾಮಕ್ಕಳಿಗೂ ಈ ಸಮಸ್ಯೆ ಹೊರತಲ್ಲ.

ನಮ್ಮ ಭಂಗಿಯನ್ನು ಸುಧಾರಿಸಿಕೊಳ್ಳುವ ಮೂಲಕ ಹಲವಾರು ಸಮಸ್ಯೆಗಳನ್ನು ತಡೆಯಬಹುದು. ಕತ್ತು ಮತ್ತು ಬೆನ್ನಿನ ಸ್ನಾಯುಗಳನ್ನು ಬಲಗೊಳಿಸುವ ಸರಳ ವ್ಯಾಯಾಮಗಳನ್ನು ಪ್ರತಿಯೊಬ್ಬರೂ ಮಾಡಬೇಕು. ಹೆಚ್ಚಿನ ಕಾಲ ಮೊಬೈಲ್ ಫೋನ್ ಬಳಸಬೇಕಾದವರು ಮೇಜಿನ ಮೇಲೆ ಮೊಬೈಲ್ ಫೋನನ್ನು ಲಂಬವಾದ ಆಸರೆಯಲ್ಲಿ ಇರಿಸಿ, ಬೆನ್ನನ್ನು ಒರಗಿಸಬಲ್ಲ ಹಿಂಬದಿಯಿರುವ ಅನುಕೂಲಕರ ಎತ್ತರದ ಕುರ್ಚಿಯಲ್ಲಿ ಕೂತು ಕತ್ತನ್ನು ಹೆಚ್ಚು ಬಗ್ಗಿಸದೆ ನೋಡುವುದು ಸೂಕ್ತ. ಮೊಬೈಲ್ ಫೋನಿನಲ್ಲಿ ಅಕ್ಷರಗಳನ್ನು ಟೈಪು ಮಾಡುವ ಬದಲಿಗೆ ಸಾಧ್ಯವಾದಷ್ಟೂ ಧ್ವನಿಯ ಮೂಲಕ ಪದಗಳನ್ನು ಮೂಡಿಸಬಲ್ಲ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದು.

ಹೆಚ್ಚುಕಾಲ ಕುಳಿತುಕೊಳ್ಳಬೇಕಾದಾಗ ಬೆನ್ನಿಗೆ ದೃಢವಾದ ಮತ್ತು ಹಿತವಾದ ಆಸರೆಯಿರುವ ಕುರ್ಚಿಯನ್ನು ಬಳಸಬೇಕು. ಕುಳಿತಾಗ ತೊಡೆಗಳು ಭೂಮಿಗೆ ಸಮಾನಾಂತರವಾಗಿರಬೇಕು. ಆಗ ಸೊಂಟ ಮತ್ತು ಮಂಡಿಗಳು ಒಂದೇ ಸರಳರೇಖೆಯಲ್ಲಿ ಇರುತ್ತವೆ. ಕಂಪ್ಯೂಟರಿನಲ್ಲಿ ಟೈಪು ಮಾಡುವಾಗ ಕೀಬೋರ್ಡ್ ಮೊಣಕೈ ಮಟ್ಟದಲ್ಲಿ, ಪರದೆ ಕಣ್ಣುಗಳ ಮಟ್ಟದಲ್ಲಿ, ಮತ್ತು ಭುಜಗಳು ಮುಂದಕ್ಕೆ ಬಾಗದೆ ನೇರವಾಗಿ ಇರಬೇಕು. ದೇಹದ ಭಂಗಿಯ ಬಗ್ಗೆ ಪ್ರಜ್ಞಾಪೂರ್ವಕವಾಗಿ ಆಗಾಗ ಆಲೋಚಿಸಿ, ಸರಿಪಡಿಸಿಕೊಳ್ಳಬೇಕು. ಕನಿಷ್ಠ ಅರ್ಧಗಂಟೆಗೆ ಒಮ್ಮೆ ಕುರ್ಚಿಯಿಂದ ಎದ್ದು ಸುಮಾರು ನೂರಿನ್ನೂರು ಹೆಜ್ಜೆ ನಡೆದು ಬರಬೇಕು. ಸರಿಯಾದ ಭಂಗಿ ಜೀವನದ ಅಗತ್ಯ. ಅದು ಹಲವಾರು ಸಮಸ್ಯೆಗಳನ್ನು ಬಾರದಂತೆ ತಡೆಯಬಲ್ಲದು. ಧಾವಂತದ ಆಧುನಿಕ ಬದುಕಿನಲ್ಲಿ ಸಮಸ್ಯೆಗಳನ್ನು ಸರಿಪಡಿಸುವುದಕ್ಕಿಂತ ಅವು ಬಾರದಂತೆ ತಡೆಯುವುದರಲ್ಲಿ ನಮ್ಮ ವಿವೇಕವಿದೆ. ❖



‘ಮಗು ಅಳ್ತಾ ಇದೆ!’

ಡಾ. ಕುಶ್ವಂತ್ ಕೋಳಿಬೈಲು

ತಾಯಿಯ ಗರ್ಭದಿಂದ ಹೊರಬಂದ ಶಿಶುವಿನ ಮೊದಲ ಅಳುವನ್ನು ಕೇಳಲು ಉಸಿರು ಬಿಗಿ ಹಿಡಿದು ವೈದ್ಯರು ಕಾಯುತ್ತಿರುತ್ತಾರೆ. ನವಜಾತ ಶಿಶುವು ತಾಯಿಯ ಗರ್ಭದಿಂದ ಹೊರಬಂದ ನಂತರ ಅದರ ಉಸಿರಾಟವು ಪ್ರಾರಂಭವಾಗಲು ಮಗು ಅಳುವುದು ಅಗತ್ಯ. ಒಂದು ವೇಳೆ ಮಗುವು ಅಳದೆ ಹೋದರೆ ವೈದ್ಯರು ಅಳಬೇಕಾಗಿ ಬರಬಹುದು! ಮಗುವಿನ ಮೊದಲ ಅಳು ಮಗುವಿನ ಶ್ವಾಸಕೋಶದ ಒತ್ತಡವನ್ನು ಕಡಿಮೆ ಮಾಡಿ ಮಗುವಿನ ಶ್ವಾಸಕೋಶದೊಳಗೆ ಗಾಳಿಯು ಸಂಚರಿಸುವಂತೆ ಮಾಡುತ್ತದೆ. ಮಗುವು ಜೀವಂತವಿರಲು ಶ್ವಾಸಕೋಶದೊಳಗಿನ ಗಾಳಿಯಲ್ಲಿರುವ ಆಮ್ಲಜನಕವು ಮಗುವಿನ ರಕ್ತದೊಳಗೆ ಸೇರಿಕೊಳ್ಳುವ ಅತ್ಯಗತ್ಯವಾದ ಪ್ರಕ್ರಿಯೆಗೆ ನಾಂದಿ ಹಾಡುವ ಕೆಲಸವನ್ನೂ ಮಗುವಿನ ಮೊದಲ ಅಳು ಮಾಡುತ್ತದೆ. ಮಗುವು ನಗುವುದನ್ನು ಕಲಿಯಲು ಹಲವು ವಾರಗಳು ಮತ್ತು ಮಗುವು ಶಬ್ದಗಳನ್ನು ಉಚ್ಚರಿಸಲು ಕೆಲವು ವರ್ಷಗಳು ಬೇಕಾಗುವ ಕಾರಣದಿಂದ ಮಗುವು ಸುತ್ತಮುತ್ತಲಿನ ಪರಿಸರದೊಂದಿಗೆ ಮತ್ತು ಜನರೊಂದಿಗೆ ತನ್ನ ಅಳುವಿನ ಮೂಲಕ ಸಂವಾದವನ್ನು ಮಾಡುತ್ತದೆ.

ತಾಯಿ ಮತ್ತು ಮಗುವಿನ ಒಡನಾಟವು ಹೆಚ್ಚಾದಂತೆ ತಾಯಿಯು ಮಗುವಿನ ವಿವಿಧ ಮಾದರಿಯ ಅಳುವನ್ನು ಗುರುತಿಸುವ ಸೂಕ್ಷ್ಮತೆ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾಳೆ. ಹಸಿವಿನ ಅಳು, ನಿದ್ರೆ ಬಂದಾಗಿನ ಅಳು, ಒದ್ದೆ ಡಯಪರ್‌ನಿಂದ ತೊಂದರೆ ಅನುಭವಿಸುವಾಗಿನ ಅಳು – ಹೀಗೆ ಈ ಸಾಮಾನ್ಯ ಕಾರಣಗಳಿಂದಾಗಿ ಆರೋಗ್ಯವಂತ ಮಗುವು ವಿವಿಧ ಮಾದರಿಗಳಲ್ಲಿ ಅಳುತ್ತದೆ. ಮಗುವಿನ ಅಳುವಿನ ಶೈಲಿಯನ್ನು ಗಮನಿಸುತ್ತಾ ಹೆಚ್ಚಿನ ತಾಯಂದಿರು ಮಗುವಿನ ಅಳುವಿನ ಹಿಂದಿರುವ ಕಾರಣವನ್ನು ಗುರುತಿಸಬಲ್ಲವರಾಗಿರುತ್ತಾರೆ. ಅನಾರೋಗ್ಯ ಪೀಡಿತವಾದಾಗಲೂ ಮಗುವು ಅಳುವು ಶೈಲಿಯು ವಿಭಿನ್ನವಾಗಿರುವುದನ್ನು ತಜ್ಞ ವೈದ್ಯರು ಗುರುತಿಸಬಲ್ಲರು. ಥೈರಾಯ್ಡ್ ಸಮಸ್ಯೆಯಿರುವ ಮಗುವಿನ ಗೊಗ್ಗರು ಮಾದರಿಯ ಆಳು ಮತ್ತು ಮಗುವಿಗೆ ಮೆದುಳಿನ ಸೋಂಕು ಅಥವಾ ಜಾಂಡೀಸ್ ಇದ್ದಾಗ ಎತ್ತರದ ಸ್ವರದಲ್ಲಿ ಮೂಡುವ ಹರಿತವಾದ ಅಳುವಿನ ಬಗ್ಗೆಯೂ ವೈದ್ಯಕೀಯ ರಂಗದಲ್ಲಿ ಉಲ್ಲೇಖವಿದೆ. ವಿಜ್ಞಾನಿಗಳು ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಗುವಿನ ಅಳುವಿನ ಮಾದರಿಯನ್ನು ಗಮನಿಸಿ ಮಗುವಿನಲ್ಲಿ ಮುಂದೆ ಬರಬಹುದಾದ ಮಾನಸಿಕ ಕಾಯಿಲೆಗಳನ್ನೂ ಪಟ್ಟಿಮಾಡಬಲ್ಲರು.

ಮಗುವು ಅಳುವುದಕ್ಕೆ ಕಾರಣವು ಏನೇ ಇರಬಹುದು. ಆದರೆ ಮಗುವಿನ ಅಳು ಕಡಿಮೆಯಾಗದಿದ್ದರೆ ಅದು ಹೆತ್ತವರಲ್ಲಿ ಆತಂಕವನ್ನು ಸೃಷ್ಟಿ ಮಾಡುತ್ತದೆ. ತಾಯಿಯ ಗ್ರಹಿಕೆಯು ಸೂಕ್ಷ್ಮವಾಗಿರದಿದ್ದರೆ ಮಗುವಿನ ಅಳು ಅನೇಕ ತಪ್ಪು ಕಲ್ಪನೆಗಳಿಗೆ ಮತ್ತು ಅವಾಂತರಕ್ಕೂ ದಾರಿಯಾಗಬಹುದು. ಮಗುವಿಗೆ ಅತಿ ಬಿಗಿಯಾದ ಬಟ್ಟೆ ತೊಡಿಸಿದಲ್ಲಿ ಅಥವಾ ಮಗುವಿನ ಮೃದುವಾದ ತ್ವಚೆಯ ಮೇಲೆ ಅಲರ್ಜಿಯನ್ನು ಉಂಟು ಮಾಡುವ ಉತ್ಪನ್ನಗಳನ್ನು ಬಳಸಿದಲ್ಲಿಯೂ ಮಗುವು ಅಳಬಹುದು. ಮಗುವು ಭಿನ್ನ ಕಾರಣಕ್ಕೆ ಅಳುತ್ತಿದ್ದಾಗಲೂ ಮಗು ಹಸಿವಿನಿಂದ ಅಳುತ್ತಿದೆ ಎಂಬ ತಪ್ಪು ಕಲ್ಪನೆಯಲ್ಲಿ ಕೆಲವು ತಾಯಂದಿರು ಮಗುವಿಗೆ ತಮ್ಮ ಹಾಲು ಸಾಕಾಗುತ್ತಿಲ್ಲವೆಂದು ಆತಂಕಕ್ಕೆ ಒಳಗಾಗುತ್ತಾರೆ. ಇದೇ ಆತಂಕ ಮತ್ತು ತಪ್ಪು ಕಲ್ಪನೆಯು ಅವರನ್ನು ಮಗುವಿಗೆ ಲ್ಯಾಕ್ಟೋಜನ್ ನೀಡಲು ಪ್ರೇರೇಪಿಸುತ್ತದೆ. ಮಗುವಿನ ತೂಕ ನಿರಂತರವಾಗಿ ಹೆಚ್ಚಾಗುತ್ತಿದ್ದರೂ, ಮಗುವು ಅಳುತ್ತಿದ್ದರೆ ಅದಕ್ಕೆ ಕಾರಣ ತಾಯಿಯಲ್ಲಿ ಎದೆಹಾಲಿನ ಕೊರತೆ ಆಗಿರುವುದಿಲ್ಲ. ತಾಯಿಯಲ್ಲಿ ಎದೆಹಾಲಿನ ಉತ್ಪಾದನೆಯು ಹಾರ್ಮೋನ್ ಮೇಲೆ ಅವಲಂಬಿತವಾಗಿರುವುದರಿಂದ ಒತ್ತಡ ಮತ್ತು ಆತಂಕಗಳು ಎದೆಹಾಲಿನ ಉತ್ಪಾದನೆಯನ್ನು ಕಡಿಮೆ ಮಾಡಿ ಹೊಸ ಸಮಸ್ಯೆಯನ್ನು ಸೃಷ್ಟಿಸಬಹುದು. ಹಾಗಾಗಿ ಮಗುವು ಯಾವುದೋ ಕಾರಣದಿಂದ ಅಳುತ್ತಿದ್ದಾಗ ಮನೆಯವರು ಮಗುವು ಹಸಿವಿನಿಂದ ಅಳುತ್ತಿದೆ ಎಂಬ ಭ್ರಮೆಗೆ ಬೀಳಬಾರದು; ಹಸಿವಿಲ್ಲದಿರುವ ಮಗುವಿಗೂ ಹಾಲುಣಿಸುವಂತೆ ತಾಯಿಯ ಮೇಲೆ ಒತ್ತಡ ಹೇರಬಾರದು.

ಒಂದರಿಂದ ಮೂರು ತಿಂಗಳು ಪ್ರಾಯದ ಶಿಶುಗಳು ಸಂಜೆಯ ವೇಳೆ ಹೊಟ್ಟೆಯನ್ನು ಬಿಗಿಯಾಗಿಸಿಕೊಂಡು ತಮ್ಮ ಕೈ ಕಾಲುಗಳನ್ನು ಮಡಚಿಕೊಂಡು ಅಳುವುದು ಸಾಮಾನ್ಯ. ಹೊಟ್ಟೆಯ ಕೋಲಿಕ್ ಕಾರಣದಿಂದ ಹುಟ್ಟುವ ಈ ಮಾದರಿಯ ಅಳು ಮಗುವಿನ ವಿಕಾಸನದ ಒಂದು ಭಾಗ. ಕೆಲವೊಮ್ಮೆ ಗಂಟೆಗಳ ಕಾಲ ಮಗುವು ಅತ್ತಾಗ ಹೆತ್ತವರು ಆತಂಕಕ್ಕೆ ಒಳಗಾಗುತ್ತಾರೆ. ಮಗುವಿನ ಕರುಳಿನೊಳಗಿರುವ ಸೂಕ್ಷ್ಮಾಣುಜೀವಿಗಳನ್ನು ಮತ್ತು ಮಗುವಿನ ಬೆಳೆಯುತ್ತಿರುವ ಮೆದುಳು ಹೊರಸೂಸುವ ರಾಸಾಯನಿಕಗಳು ಈ ಕೋಲಿಕ್ ಮಾದರಿಯ ಹೊಟ್ಟೆಯ ನೋವಿಗೆ ಕಾರಣವಾಗಿರಬಹುದೆಂದು ಅಂದಾಜಿಸಿದರೂ ಇದರ ಬಗ್ಗೆ ಸ್ಪಷ್ಟವಾದ ಅರಿವು ಸಿಕ್ಕಿಲ್ಲ. ಮೂರು ತಿಂಗಳ ನಂತರದ ದಿನಗಳಲ್ಲಿ ಈ ನೋವು ಮಾಯವಾಗುವುದರಿಂದ ಈ ಹೊಟ್ಟೆಯ ನೋವನ್ನು ಮಗುವಿನ ವಿಕಸನದ ಭಾಗವಾಗಿಯೂ ವಿಜ್ಞಾನ ಗುರುತಿಸುತ್ತದೆ. ಹೆತ್ತವರು ತಮ್ಮ ಆತಂಕದಿಂದ ಮಗುವಿಗೆ ಗ್ರೈಪ್ ವೈನ್, ಪ್ರೊಭಯೋಟಿಕ್ ಮುಂತಾದ ವಸ್ತುಗಳನ್ನು ಕೊಟ್ಟರೂ ಅದು ನೋವನ್ನು ಶಮನ ಮಾಡುವಲ್ಲಿ ಹೆಚ್ಚು ಉಪಯೋಗವಾದ ನಿದರ್ಶನಗಳಿಲ್ಲ! ಮಗುವಿನ ಅಳುವಿಗೆ ಗಂಭೀರ ಸೋಂಕುಗಳೂ ಕಾರಣವಾಗಿರಬಹುದು. ಆಗ ಮಗುವಿನ ಅಳು ನಿರಂತರವಾಗಿರುತ್ತದೆ. ಅದನ್ನು ನಿರ್ಲಕ್ಷ್ಯಮಾಡದೆ ತಜ್ಞವೈದ್ಯರಿಂದ ಪರೀಕ್ಷೆ ಮಾಡಿಸಬೇಕು.

ನಮ್ಮ ಮೌನಕ್ಕೆ ಸಾವಿರ ಅರ್ಥಗಳಿರುವಂತೆ, ಮಗುವಿನ ಅಳುವಿಗೂ ಹಲವು ಕಾರಣಗಳಿರುತ್ತವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಮಾದರಿ ಪ್ರಶ್ನೋತ್ತರ

ಗಣಿತ

ಎಸ್ಸೆಸ್ಸೆಲ್ಸಿ

21) ಕೊಟ್ಟಿರುವ ಚಿತ್ರದಲ್ಲಿ $\cos\theta$ ಮತ್ತು $\tan\theta$ ಬೆಲೆಗಳನ್ನು ಕಂಡುಹಿಡಿಯಿರಿ.

ಉತ್ತರ:



$$BC^2 = AC^2 - AB^2$$

$$= 13^2 - 5^2 = 169 - 25 = 144$$

$$\boxed{BC = 12}$$

$$\cos\theta = \frac{\text{ಪಾರ್ಶ್ವಬಾಹು}}{\text{ವಿಕರ್ಣ}} = \frac{BC}{AC} = \frac{12}{13}$$

$$\tan\theta = \frac{\text{ಅಭಿಮುಖ ಬಾಹು}}{\text{ಪಾರ್ಶ್ವಬಾಹು}} = \frac{AB}{BC} = \frac{5}{12}$$

22) ಎರಡು ದಾಳಗಳನ್ನು ಜೊತೆಯಾಗಿ ಎಸೆಯಲಾಗಿದೆ. ಈ ಕೆಳಗಿನ ಘಟನೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(A) ಎರಡೂ ಮುಖಗಳಲ್ಲಿ ಒಂದೇ ಸಂಖ್ಯೆ

(B) ಎರಡೂ ಮುಖಗಳಲ್ಲಿ 5 ರ ಗುಣಕಗಳು

ಉತ್ತರ:

$S = \{(1,1), (1,2), \ldots\ldots(1,6)\ (6,1)\ (6,2) \ldots\ldots\ldots\ldots(6,6)\}$

$n(S) = 36.$

(A) $A = \{(1,1), (2,2), (3,3), (4,4)\ (5,5), (6,6)\}$

$n(A) = 6$

$$\therefore P(A) = \frac{n(A)}{n(S)} = \frac{6}{36}$$

(B) $B = (5, 5)$

$n(B) = 1$

$$P(B) = \frac{n(B)}{n(S)} = \frac{1}{36}$$

23) $x^2 - 4x + 2 = 0$ನ್ನು ಸೂತ್ರದ ಸಹಾಯದಿಂದ ಬಿಡಿಸಿ.

ಉತ್ತರ: $ax^2 + bx + c = 0$

ಇಲ್ಲಿ, $a = 1, b = -4, c = 2$

$$x = \frac{-b \pm \sqrt{b^2 - 4ac}}{2a}$$

$$x = \frac{-(-4) \pm \sqrt{(-4)^2 - 4\times1\times2}}{2\times1}$$

$$= \frac{4 \pm \sqrt{16-8}}{2} = \frac{2(2 \pm \sqrt{2})}{2}$$


$$= 2 \pm \sqrt{2}$$

If $x = 2 + \sqrt{2}, x = 2 - \sqrt{2}$

$\therefore$ ಮೂಲಗಳು $(2+\sqrt{2})$ ಅಥವಾ $(2-\sqrt{2})$

24) 3 ಸೆಂ.ಮೀ. ತ್ರಿಜ್ಯವುಳ್ಳ ವೃತ್ತಕ್ಕೆ, ವೃತ್ತ ಕೇಂದ್ರದಿಂದ 8 ಸೆಂ.ಮೀ. ದೂರದಲ್ಲಿನ ಬಾಹ್ಯ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿರಿ.

ಉತ್ತರ: $r = 3$ ಸೆಂ.ಮೀ., $d = 8$ ಸೆಂ.ಮೀ.



25) ಸಮಾಂತರ ಶ್ರೇಢಿಯ ಮೊದಲ ಮೂರು ಪದಗಳ ಮೊತ್ತವು 6 ಮತ್ತು ಅವುಗಳ ಗುಣಲಬ್ಧವು 120 ಆದರೆ ಆ ಮೂರು ಪದಗಳನ್ನು ಕಂಡುಹಿಡಿಯಿರಿ.

ಉತ್ತರ: ಸಮಾಂತರ ಶ್ರೇಢಿಯ ಮೂರು ಅನುಕ್ರಮ ಪದಗಳು $(a-d), (a), (a+d)$ ಆಗಿರಲಿ.

ಪದಗಳ ಮೊತ್ತ = 6

$$a - \cancel{d} + a + a + \cancel{d} = 6$$

$$3a = 6 \qquad a = \frac{6}{3} = 2 \qquad \boxed{\therefore a = 2}$$

$$(a-d)\,(a)\,(a+d) = -120$$

$$(a-d)\,(a+d) = \frac{-120}{a}$$

$$a^2 - d^2 = \frac{-120}{a}$$

$$2^2 - d^2 = \frac{-120}{2}$$

$$4 - d^2 = -60$$

$$4 + 60 = d^2$$

$$64 = d^2$$

$$d = \sqrt{64}$$

$$d = \pm 8$$

if $d = +8$ then

$a - d = 2 - 8 = -6$

$a = 2$

$a + d = 2 + 8 = 10$

If $d = -8$

$a - d = 2 - (-8) = 10$

$a = 2$

$a + d = 2 + (-8) = -6$

$a = 2, d = 8$ ಆದಾಗ, ಮೂರು ಸಂಖ್ಯೆಗಳು –6, 2, 10

$a = 2, d = -8$ ಆದಾಗ, ಮೂರು ಸಂಖ್ಯೆಗಳು 10, 2, –6.

26) $3 + \sqrt{5}$ ಒಂದು ಅಭಾಗಲಬ್ಧ ಎಂದು ಸಾಧಿಸಿ.

ಸಾಧನೆ:– $3+\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ.

$\Rightarrow 3 + \sqrt{5} = a$ ಆಗಿರಲಿ,

ಇಲ್ಲಿ ‘a’ ಯು ಭಾಗಲಬ್ಧ ಸಂಖ್ಯೆ

$3 = a - \sqrt{5}$ ಎರಡೂ ಕಡೆಯೂ ವರ್ಗ ಮಾಡಿದಾಗ

$$(3)^2 = (a - \sqrt{5})^2$$

$$9 = a^2 + (\sqrt{5})^2 - 2\,(a)\,(\sqrt{5})$$

$$9 = a^2 + 5 - 2a\sqrt{5}$$

$$2a\sqrt{5} = a^2 + 5 - 9$$

$$\sqrt{5} = \frac{a^2 - 4}{2a}$$

ಇಲ್ಲಿ $\frac{a^2-4}{2a}$ ಎಂಬುದು ಭಾಗಲಬ್ಧ ಸಂಖ್ಯೆ ಎಂಬುದು ಅಸತ್ಯ

ಆದ್ದರಿಂದ $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ.

$\therefore 3 + \sqrt{5}$ ಒಂದು ಭಾಗಲಬ್ಧ ಸಂಖ್ಯೆಯಲ್ಲ. ಅಂದರೆ $3 + \sqrt{5}$ ಒಂದು ಅಭಾಗಲಬ್ಧ ಸಂಖ್ಯೆ.

ಮಾದರಿ ಪ್ರಶ್ನೋತ್ತರ

ಭೌತವಿಜ್ಞಾನ


ಪಿಯುಸಿ

52) ಅಲ್ಫಾ-ಕಣದ ಚದರುವಿಕೆ ಮತ್ತು ರುದರ್‌ಫೋರ್ಡ್ ಪರಮಾಣುವಿನ ನ್ಯೂಕ್ಲಿಯಸ್ ಮಾದರಿ ಬಗ್ಗೆ ಬರೆಯಿರಿ

ಉತ್ತರ:- (ಹಿಂದಿನ ಸಂಚಿಕೆಯಿಂದ)

ದತ್ತ ಅವಧಿಯಲ್ಲಿ, ಬೇರೆ ಬೇರೆ ಕೋನಗಳಿಂದ ಚದರಲ್ಪಟ್ಟ ಒಟ್ಟು α ಕಣಗಳ ಸಂಖ್ಯೆಯ (ಮಾದರಿ ನಕ್ಷೆಯನ್ನು ಚಿತ್ರ.3ರಲ್ಲಿ ನೋಡಬಹುದು). ಈ ಚಿತ್ರದಲ್ಲಿ ತೋರಿಸಿದ ಬಿಂದುಗಳು, ಪ್ರಯೋಗದಿಂದ ದೊರಕಿದ ಮಾಹಿತಿಯನ್ನು ಪ್ರತಿನಿಧಿಸಿದರೆ, ಅಖಂಡ ವಕ್ರರೇಖೆಯು, ಗುರಿಯಾಗಿಸಲ್ಪಟ್ಟ ಪರಮಾಣು - ಸಣ್ಣದಾದ, ಸಾಂದ್ರವಾದ, ಧನ ವಿದ್ಯುದಾವೇಶವುಳ್ಳ ನ್ಯೂಕ್ಲಿಯಸ್‌ನ್ನು ಹೊಂದಿದೆಯೆಂಬ ಸೈದ್ಧಾಂತಿಕ ಊಹೆಯನ್ನು ಪ್ರತಿನಿಧಿಸುತ್ತದೆ. ಬಹಳಷ್ಟು αಕಣಗಳು ಬಂಗಾರದ ಹಾಳೆಯ ಮುಖಾಂತರ ನೇರವಾಗಿ ಹಾದು ಹೋಗುತ್ತವೆ. ಇದರರ್ಥ ಅವು ಯಾವುದೇ ಸಂಘಟ್ಟನೆಗೆ ಒಳಗಾಗುವುದಿಲ್ಲವೆಂದಂತಾಯಿತು. ಒಟ್ಟು ಆಪಾತ αಕಣಗಳಲ್ಲಿ ಕೇವಲ ಸುಮಾರು 0.14 %ದಷ್ಟು, ಕಣಗಳು 1^0ಗಿಂತ ಹೆಚ್ಚು ಚದರಲ್ಪಡುತ್ತವೆ; ಮತ್ತು 8000ದಲ್ಲಿ ಅಂದಾಜು ಒಂದು 90^0ಕ್ಕಿಂತಲೂ ಹೆಚ್ಚಿಗೆ ಬಾಗುತ್ತದೆ. ಈ ಕಣವನ್ನು ಹಿಂದಕ್ಕೆ ತಿರುಗಿಸಲು, ಅದು ಹೆಚ್ಚು ವಿಕರ್ಷಣೀಯ ಬಲವನ್ನು ಅನುಭವಿಸಿರಲೇಬೇಕೆಂದು ರುದರ್‌ಫೋರ್ಡ್ ಅವರು ವಾದಿಸಿದರು. ಒಂದು ವೇಳೆ ಪರಮಾಣುವಿನ ರಾಶಿಯ ಅಧಿಕಾಂಶವು ಮತ್ತು ಅದರ ಧನ ವಿದ್ಯುದಾವೇಶವು ಪರಮಾಣುವಿನ ಮಧ್ಯದಲ್ಲಿ ಒತ್ತೊತ್ತಾಗಿ ಕೇಂದ್ರೀಕೃತವಾಗಿದ್ದಲ್ಲಿ ಮಾತ್ರ ಇಂತಹ ಬಲವು ದೊರಕಲ್ಪಡುತ್ತದೆ. ಆಗ ಒಳಬರುವ ಕಣವು ಧನ ಆವೇಶವನ್ನು ತೂರಿಕೊಂಡು ಹೋಗಲಾರದೆ, ಅತೀ ಸಮೀಪಕ್ಕೆ ಬರಬಹುದು ಮತ್ತು ಇಂತಹ ಸಮೀಪದ ಮುಖಾಮುಖಿಯಿಂದಾಗಿ ಅದು ದೊಡ್ಡ ವಿಚಲನಕ್ಕೆ ಕಾರಣವಾಗುತ್ತದೆ. ಈ ಅನಿಸಿಕೆಯು ಪರಮಾಣುವಿನಲ್ಲಿರುವ ನ್ಯೂಕ್ಲಿಯಸ್‌ನ ಆಧಾರ ಕಲ್ಪನೆಯನ್ನು ಬೆಂಬಲಿಸಿತು. ಈ ಕಾರಣಕ್ಕಾಗಿ ರುದರ್‌ಫೋರ್ಡ್ ಅವರು ನ್ಯೂಕ್ಲಿಯಸ್ಸಿನ ಆವಿಷ್ಕಾರದ ಮನ್ನಣೆಗೆ ಪಾತ್ರರಾದರು.


ಚಿತ್ರ-3



ಚಿತ್ರ-3

ರುದರ್‌ಫೋರ್ಡ್ ಅವರ ಪರಮಾಣುವಿನ ನ್ಯೂಕ್ಲಿಯರ್ ಮಾದರಿಯಲ್ಲಿ ಸಂಪೂರ್ಣ ಧನ ವಿದ್ಯುದಾವೇಶವು ಮತ್ತು ಪರಮಾಣುವಿನ ಅಧಿಕಾಂಶ ರಾಶಿಯು ನ್ಯೂಕ್ಲಿಯಸ್ಸಿನಲ್ಲಿ ಕೇಂದ್ರೀಕೃತಗೊಂಡಿದ್ದು, ಅದರಿಂದ ಇಲೆಕ್ಟ್ರಾನ್‌ಗಳು ಸ್ವಲ್ಪ ದೂರದಲ್ಲಿರುತ್ತವೆ.ಇಲೆಕ್ಟ್ರಾನ್‌ಗಳು ನ್ಯೂಕ್ಲಿಯಸ್ಸಿನ ಸುತ್ತ ಕಕ್ಷೆಗಳಲ್ಲಿ, ಸೂರ್ಯನ ಸುತ್ತ ಗ್ರಹಗಳು ಸುತ್ತುವಂತೆ ಸುತ್ತುತ್ತಿರುತ್ತವೆ. ರುದರ್‌ಫೋರ್ಡ್‌ರ ಪ್ರಯೋಗವು ನ್ಯೂಕ್ಲಿಯಸ್ಸಿನ ಅಳತೆಯನ್ನು ಅಂದಾಜು 10^{-15} ರಿಂದ 10^{-14} ಮೀಟರ್‌ವರೆಗೆ ಇರಬಹುದೆಂದು ಸೂಚಿಸಿತು. ಅನಿಲಗಳ ಚಲನ ಸಿದ್ಧಾಂತದಿಂದ ಪರಮಾಣುವಿನ ಅಳತೆ 10^{-10} ಮೀಟರ್‌ನಷ್ಟು ಇರುವುದು ಗೊತ್ತಾಗಿತ್ತು. ಇದು ನ್ಯೂಕ್ಲಿಯಸ್‌ನ ಅಳತೆಗಿಂತ 10,000 ದಿಂದ 100,000 ಪಟ್ಟು ದೊಡ್ಡದಾಗಿತ್ತು ಹೀಗಾಗಿ ನ್ಯೂಕ್ಲಿಯಸ್‌ನಿಂದ ಇಲೆಕ್ಟ್ರಾನ್ ನ್ಯೂಕ್ಲಿಯಸ್ ಅಳತೆಯ ಸುಮಾರು 10,000 ದಿಂದ 100,000 ಪಟ್ಟು ದೂರದಲ್ಲಿರುವಂತೆ ಕಾಣುತ್ತವೆ. ಅಂದರೆ ಪರಮಾಣುವಿನ ಒಳಗೆ ಬಹುತೇಕ ಭಾಗವು ಖಾಲಿಯಾಗಿದೆ ಎಂದಂತಾಯಿತು. ಪರಮಾಣುವಿನ ಬಹುತೇಕ ಭಾಗವು ಖಾಲಿಯಾಗಿರುವುದರಿಂದ ಬಹಳಷ್ಟು α ಕಣಗಳು ತೆಳುವಾದ ಲೋಹದ ಹಾಳೆಯ ಮೂಲಕ ಸಾಗುವಾಗ ನೇರವಾಗಿ ತೂರಿಕೊಂಡು ಏಕೆ ಹೋಗುತ್ತವೆ ಎಂಬುದನ್ನು ನಾವೀಗ ಇಲ್ಲಿ ಸುಲಭವಾಗಿ ಅರ್ಥೈಸಬಹುದು. ಹೀಗಿದ್ದಾಗಲೂ, ಯಾವಾಗ ಕಣವು α ನ್ಯೂಕ್ಲಿಯಸ್ಸಿನ ಸನಿಹ ಬರುವುದೋ ಆಗ ಅಲ್ಲಿರುವ ತೀವ್ರವಾದ ವಿದ್ಯುತ್‌ಕ್ಷೇತ್ರವು, ಅದನ್ನು ದೊಡ್ಡ ಕೋನದಲ್ಲಿ ಚದರಿಸುತ್ತದೆ. ಪರಮಾಣುವಿನ ಇಲೆಕ್ಟ್ರಾನ್ ಎಷ್ಟೊಂದು ಹಗುರವಾಗಿವೆಯೆಂದರೆ αಕಣಗಳ ಮೇಲೆ ಅವು ಹೇಳಿಕೊಳ್ಳುವಂತಹ ಪರಿಣಾಮವನ್ನೇನು ಬೀರುವುದಿಲ್ಲ.

ಚಿತ್ರ.3ರಲ್ಲಿ ತೋರಿಸಿರುವ ಚದರುವಿಕೆಯ ಮಾಹಿತಿಯನ್ನು ಬಳಸಿ ರುದರ್‌ಫೋರ್ಡ್ ಪರಣುವಿನ ನ್ಯೂಕ್ಲಿಯರ್ ಮಾದರಿಯನ್ನು ವಿಶ್ಲೇಷಿಸಬಹುದು. ಬಂಗಾರದ ಹಾಳೆಯು ಅತಿ ತೆಳುವಾಗಿರುವುದರಿಂದ ಅದರ ಮುಖಾಂತರ ತೂರಿಕೊಂಡು ಹೋಗುವ α ಕಣಗಳು ಒಂದಕ್ಕಿಂತ ಹೆಚ್ಚಿನ ಚದರುವಿಕೆಗೆ ಒಳಗಾಗುವುದಿಲ್ಲವೆಂದು ಊಹಿಸಬಹುದು. ಆದ್ದರಿಂದ ಚದರಲ್ಪಟ್ಟ ಕಣದ ಪ್ರಕ್ಷೇಪ ಪಥವನ್ನು ಲೆಕ್ಕ ಹಾಕಲು ಒಂದೇ ನ್ಯೂಕ್ಲಿಯಸ್ ಸಾಕಾಗುತ್ತದೆ. ಕಣಗಳು ಹೀಲಿಯಮ್ ಪರಮಾಣುಗಳ ನ್ಯೂಕ್ಲಿಯಸ್‌ಗಳಾಗಿರುವದರಿಂದ 2e ಪ್ರಮಾಣದ ಧನ ವಿದ್ಯುದಾವೇಶವನ್ನು ಮತ್ತು ಹೀಲಿಯಮ್ ಪರಮಾಣುವಿನ ರಾಶಿಯನ್ನು ಹೊಂದಿವೆ. ಬಂಗಾರದ ನ್ಯೂಕ್ಲಿಯಸ್ಸಿನ ವಿದ್ಯುದಾವೇಶವು Ze ಇದ್ದು, ಇಲ್ಲಿ Z ಪರಮಾಣುವಿನ ಸಂಖ್ಯೆಯನ್ನು ಸೂಚಿಸುತ್ತಿದ್ದು, ಬಂಗಾರಕ್ಕೆ Z = 79ಆಗಿರುತ್ತದೆ. ಬಂಗಾರದ ನ್ಯೂಕ್ಲಿಯಸ್, αಕಣಕ್ಕಿಂತ ಅಂದಾಜು 50 ಪಟ್ಟು ಭಾರವಾಗಿರುವುದರಿಂದ, ಚದರುವಿಕೆಯ ಪ್ರಕ್ರಿಯೆಯಲ್ಲಿ ಅದು ಯಾವಾಗಲೂ ನಿಶ್ಚಲ ಸ್ಥಿತಿಯಲ್ಲಿಯೇ ಇರುತ್ತದೆ.



ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ತಮಿಳುನಾಡು: 80 ವರ್ಷಗಳ ಬಳಿಕ ಮಹತ್ವದ ಬೆಳವಣಿಗೆ

ದೇಗುಲ ಪ್ರವೇಶಿಸಿದ ದಲಿತರು

ಪ್ರಜಾವಾಣಿ ವಾರ್ತೆ

ತಿರುವಣ್ಣಾಮಲೈ, ತಮಿಳುನಾಡು: ಇಲ್ಲಿನ ತಂಡ್ರಾಮ್‌ಪಟ್ಟು ತಾಲ್ಲೂಕಿನ ತೇನ್ ಮುದಿಯನೂರ್ ಗ್ರಾಮದ ದಲಿತರು 80 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಊರಿನ ಮುತ್ತು ಮಾರಿಯಮ್ಮನ್ ದೇವಾಲಯದೊಳಗೆ ಪ್ರವೇಶಿಸಿ ಸಂಭ್ರಮಿಸಿದ್ದಾರೆ.

ಗ್ರಾಮದ ಪ್ರಬಲ ಸಮುದಾಯದ ಜನರ ಜೊತೆ ಜಿಲ್ಲಾಡಳಿತವು ಸೋಮವಾರ ನಡೆಸಿದ ಶಾಂತಿ ಮಾತುಕತೆ ಫಲಪ್ರದವಾಗಿದ್ದು, ಪೊಲೀಸರ ಬಿಗಿ ಭದ್ರತೆಯಲ್ಲಿ ದೇಗುಲ ಪ್ರವೇಶಿಸಿದ ದಲಿತರು ದೇವಿಗೆ ಹೂವು, ಹಣ್ಣುಗಳನ್ನು ಸಮರ್ಪಿಸಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ದೇವಸ್ಥಾನ ಪ್ರವೇಶದ ವಿಚಾರವಾಗಿ ದಲಿತರು ಹಾಗೂ ಪ್ರಬಲ ಸಮುದಾಯದವರ ನಡುವೆ ವಾಗ್ವಾದ ನಡೆದಿತ್ತು. ಪೊಂಗಲ್ ಸಮಯದಲ್ಲಿ 12 ದಿನಗಳ ಕಾಲ ನಡೆಯುವ ದೇವಸ್ಥಾನದ ಉತ್ಸವದಲ್ಲಿ ಪಾಲ್ಗೊಳ್ಳಲು ತಮಗೂ ಅವಕಾಶ ನೀಡಬೇಕು ಎಂದು ಕೋರಿ ದಲಿತರು ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಪತ್ರ ಬರೆದಿದ್ದರು. ಈ ಕುರಿತು ವಿಚಾರಣೆ ನಡೆಸಿದ್ದ ಇಲಾಖೆಯು ದೇವಾಲಯ ಪ್ರವೇಶಕ್ಕೆ ಅನುಮತಿ ಕಲ್ಪಿಸಿತ್ತು.

'ಧಾರ್ಮಿಕ ದತ್ತಿ ಇಲಾಖೆಯ ನಿರ್ಧಾರವನ್ನು ವಿರೋಧಿಸಿ ಪ್ರಬಲ ಸಮುದಾಯದವರು ಎರಡು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ಹೀಗಾಗಿ ಗ್ರಾಮದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಊರಿನ ಪ್ರಬಲ ಸಮುದಾಯದವರು, ದಲಿತರು ದೇಗುಲ ಪ್ರವೇಶಿಸುವುದನ್ನು ವಿರೋಧಿಸಿದ್ದರು. ಸಂವಿಧಾನದ ಅಡಿಯಲ್ಲಿ ಎಲ್ಲರೂ ಸಮಾನರು ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ಪ್ರತಿಭಟನೆ ಮುಂದುವರಿಸಿದರೆ ದೇಗುಲಕ್ಕೆ ಶಾಶ್ವತವಾಗಿ ಬೀಗ ಹಾಕುವುದಾಗಿ ಎಚ್ಚರಿಸಲಾಯಿತು' ಎಂದು ಜಿಲ್ಲಾಧಿಕಾರಿ ಬಿ.ಮುರುಗೇಶ್ ಹೇಳಿದ್ದಾರೆ.

'ಈವರೆಗೂ ಒಮ್ಮೆಯೂ ದೇವಸ್ಥಾನದ ಒಳಗೆ ಹೋಗಿರಲಿಲ್ಲ. ದೇವಿಗೆ ಪೂಜೆ ಸಲ್ಲಿಸಲು ಈಗ ಅವಕಾಶ ನೀಡಲಾಗಿದೆ. ನಮಗೆ ಆಗುತ್ತಿರುವ ಸಂತಸವು ಪದಗಳಿಗೆ ನಿಲುಕದ್ದು' ಎಂದು ಗ್ರಾಮದ ನಿವಾಸಿ ಶಾಲಿನಿ ಎಂಬುವರು ಖುಷಿ ವ್ಯಕ್ತಪಡಿಸಿದ್ದಾರೆ.

ಐಎಎಫ್ ಸಮರಾಭ್ಯಾಸ ಆರಂಭ

ನವದೆಹಲಿ (ಪಿಟಿಐ): ಅರುಣಾಚಲಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ನಡೆದಿದ್ದ ಚೀನಾದೊಂದಿಗಿನ ಸೇನಾ ಸಂಘರ್ಷದ ಬೆನ್ನಲ್ಲೇ ಭಾರತೀಯ ವಾಯುಪಡೆಯು (ಐಎಎಫ್) ತನ್ನ ಯುದ್ಧ ಸಾಮರ್ಥ್ಯ ಪರೀಕ್ಷಿಸಿಕೊಳ್ಳುವ ಸಲುವಾಗಿ ಈಶಾನ್ಯ ಗಡಿ ಪ್ರದೇಶದಲ್ಲಿ ಭಾರಿ ಸಮರಾಭ್ಯಾಸ ನಡೆಸಲು ಮುಂದಾಗಿದ್ದು, ಇದಕ್ಕೆ ಸೋಮವಾರ ಚಾಲನೆ ಲಭಿಸಿದೆ.

ಈ ಸಮರಾಭ್ಯಾಸದಲ್ಲಿ ಐಎಎಫ್‌ನ ಯುದ್ಧ ವಿಮಾನಗಳಾದ ರಫೇಲ್ ಮತ್ತು ಸುಖೋಯ್‌–30ಎಂಕೆಐ ಭಾಗವಹಿಸಲಿವೆ.

'ಪೂರ್ವಿ ಆಕಾಶ್ ಹೆಸರಿನಡಿ ಪ್ರತಿ ವರ್ಷ ನಡೆಸುವ ಕಮಾಂಡ್ ಹಂತದ ಸಮರಾಭ್ಯಾಸವು ಸೋಮವಾರ ಆರಂಭವಾಗಿದೆ. ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷ ಇದನ್ನು ಹಮ್ಮಿಕೊಳ್ಳಲು ಆಗಿರಲಿಲ್ಲ' ಎಂದು ಐಎಎಫ್‌ನ ಪೂರ್ವ ಏರ್ ಕಮಾಂಡ್ ಟ್ವೀಟ್ ಮಾಡಿದೆ.

ಸಿ.ಡಿ ಪ್ರಕರಣ ಸಿಬಿಐಗೆ ಒಪ್ಪಿಸಿ: ಜಾರಕಿಹೊಳಿ

ಒಂದನೇ ಪುಟದಿಂದ

110 ಸಿ.ಡಿ.ಗಳಿವೆ: 'ರಾಜ್ಯದ ಹಲವು ರಾಜಕಾರಣಿಗಳು, ಅಧಿಕಾರಿಗಳನ್ನು ಹತೋಟಿಯಲ್ಲಿಡಲು, ಬದುಕು ಹಾಳು ಮಾಡಲು ಡಿ.ಕೆ.ಶಿವಕುಮಾರ 110 ಸಿ.ಡಿ.ಗಳನ್ನು ಮಾಡಿಸಿದ್ದಾನೆ. ಎಲ್ಲವನ್ನೂ ಸಿಬಿಐ ಅಧಿಕಾರಿಗಳಿಗೆ ನೀಡುತ್ತೇನೆ. ಡಿಕೆಶಿ ಮತ್ತು ಅವನ ಗ್ಯಾಂಗ್ ಬಂಧನವಾಗಬೇಕು' ಎಂದು ಒತ್ತಾಯಿಸಿದರು.

'ರಾಜಕೀಯಕ್ಕೆ ಬರುವ ಮುನ್ನ ಡಿ.ಕೆ.ಶಿವಕುಮಾರ್ ನೀಲಿಚಿತ್ರಗಳನ್ನು ತೋರಿಸುತ್ತಿದ್ದ, ಅದೇ ಚಟ ಮುಂದುವರಿಸಿದ್ದರಿಂದ ಅವನ ಬಳಿ ಎಲ್ಲ ನಾಯಕರ ಸಿ.ಡಿ.ಗಳೂ ಇವೆ. ಹಾಗಾಗಿ, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನವರು ಯಾರೂ ಅವನ ವಿರುದ್ಧ ಮಾತಾಡುವುದಿಲ್ಲ' ಎಂದೂ ಆರೋಪಿಸಿದರು.

'ನನ್ನ ಹಾಗೂ ಯುವತಿಗೆ ಸಂಬಂಧಿಸಿದ ಸಿ.ಡಿ ಮಾಡಿಸಿದ್ದು ಇದೇ ಮಹಾನಾಯಕ. ರಮೇಶ ಜಾರಕಿಹೊಳಿಯನ್ನು ಜೈಲಿಗೆ ಕಳಿಸಲು ₹40 ಕೋಟಿ ಖರ್ಚು ಮಾಡುತ್ತೇನೆ ಎಂದು ಡಿಕೆಶಿ ಹೇಳಿದ ಆಡಿಯೊ ಕೂಡ ನನ್ನ ಬಳಿ ಇದೆ. ನನ್ನ ಪ್ರಕರಣದಲ್ಲಿರುವ ಆ ಹುಡುಗಿ, ಶ್ರವಣ್ ಮತ್ತು ನರೇಶ್, ಕನಕಪುರದ ಗ್ರಾನೈಟ್ ಉದ್ಯಮಿ, ಅವನ ಕಾರ್ ಚಾಲಕ ಪರಶಿವಮೂರ್ತಿ, ಮಂಡ್ಯದ ಇಬ್ಬರು ನಾಯಕರು ಆರೋಪಿಗಳು. ಈ ಪ್ರಕರಣ ಸಿಬಿಐಗೆ ಒಪ್ಪಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ' ಎಂದರು.

'ನಾನು– ಡಿಕೆಶಿ ಒಳ್ಳೆಯ ಸ್ನೇಹಿತರಾಗಿದ್ದೆವು. ಬೆಂಗಳೂರಿನ ಶಾಂತಿನಗರ ಸೊಸೈಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನಮ್ಮ ಮಧ್ಯೆ ಬಿರುಕು ಮೂಡಿತು. ಬೆಂಗಳೂರಿನಲ್ಲಿ 66 ಎಕರೆ ಜಾಗಕ್ಕೆ ಸಂಬಂಧಿಸಿದ ₹ 10 ಸಾವಿರ ಕೋಟಿಯ ವ್ಯವಹಾರ ಅದು. ನಾನು ಸಚಿವ ಇದ್ದಾಗ ಆ 'ಫೈಲ್ ಕ್ಲಿಯರ್' ಮಾಡಿಕೊಡು ಎಂದು ಡಿಕೆಶಿ ಗಂಟುಬಿದ್ದ. ನಾನು 'ಓಕೆ' ಮಾಡಲಿಲ್ಲ. ಅಂದಿನಿಂದ ಶುರುವಾದ ಜಗಳ ಇಲ್ಲಿಗೆ ಬಂದು ನಿಂತಿದೆ' ಎಂದು ವಿವರಿಸಿದರು.

ಗೋಧ್ರಾ ರೈಲು ಪ್ರಕರಣದ ದೋಷಿಗಳಿಗೆ ಜಾಮೀನು ಗುಜರಾತ್ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಜಾಮೀನು ಮಂಜೂರು ಮಾಡುವಂತೆ ಕೋರಿ 2002ರಲ್ಲಿ ನಡೆದಿದ್ದ ಗೋಧ್ರಾ ರೈಲು ಸ್ಫೋಟ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಅಪರಾಧಿಗಳು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡುವಂತೆ ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.


ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಗುಜರಾತ್ ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟ್‌ಗೆ ಹಾಜರಾಗಿದ್ದರು. 'ಇದು ಕೇವಲ ಕಲ್ಲು ಎಸೆತದ ಪ್ರಕರಣವಲ್ಲ. ಅಪರಾಧಿಗಳು ರೈಲಿನ ಬೋಗಿಯ ಚಿಲಕವನ್ನು ಹೊರಗಿನಿಂದ ಹಾಕಿ, ಬೋಗಿಗೆ ಬೆಂಕಿ ಹಚ್ಚಿ ಹಲವು ಪ್ರಯಾಣಿಕರ ಸಾವಿಗೆ ಕಾರಣರಾಗಿದ್ದಾರೆ' ಎಂದು ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠದ ಎದುರು ಹೇಳಿದರು.

ಅವರ ವಾದ ಆಲಿಸಿದ ಪೀಠ, 'ಈ ಕುರಿತು ನೀವು ಪರಿಶೀಲಿಸಿ. ಈ ಅರ್ಜಿ ವಿಚಾರಣೆಯನ್ನು ಎರಡು ವಾರಗಳ ಬಳಿಕ ನಿಗದಿಪಡಿಸುತ್ತೇವೆ' ಎಂದು ತುಷಾರ್ ಅವರಿಗೆ ತಿಳಿಸಿತು.

2002ರ ಅಕ್ಟೋಬರ್‌ನಲ್ಲಿ ಗುಜರಾತ್‌ನ ಗೋಧ್ರಾ ಬಳಿ ಸಾಬರ್‌ಮತಿ ಎಕ್ಸ್‌ಪ್ರೆಸ್ ರೈಲಿನ ಬೋಗಿಗೆ ಬೆಂಕಿ ಹಚ್ಚಿ ಹಲವರನ್ನು ಕೊಲ್ಲಲಾಗಿತ್ತು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಹಾಸನ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವುದಾಗಿ ಭವಾನಿ ರೇವಣ್ಣ ಹೇಳಿರುವುದು ಎಚ್.ಡಿ.ದೇವೇಗೌಡರ ಕುಟುಂಬದಲ್ಲಿ ಒಡಕು ಮೂಡಿಸುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಾಲೇಜುಗಳ ಸಂಖ್ಯೆ: 3ನೇ ಸ್ಥಾನದಲ್ಲಿ ಕರ್ನಾಟಕ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅಖಿಲ ಭಾರತ ಮಟ್ಟದ ಸಮೀಕ್ಷೆಯ (2020-21) ವರದಿ ಪ್ರಕಟವಾಗಿದ್ದು, ಉತ್ತರ ಪ್ರದೇಶವು ದೇಶದಲ್ಲಿಯೇ ಅತಿ ಹೆಚ್ಚು ಕಾಲೇಜುಗಳನ್ನು ಹೊಂದಿರುವ ರಾಜ್ಯವಾಗಿದೆ. ಇಲ್ಲಿ ಒಟ್ಟು 8,114 ಕಾಲೇಜುಗಳಿವೆ. ಎರಡನೇ ಸ್ಥಾನದಲ್ಲಿ ಮಹಾರಾಷ್ಟ್ರ (4,532), ಮೂರನೇ ಸ್ಥಾನದಲ್ಲಿ ಕರ್ನಾಟಕ (4,233) ಇದೆ.

ನಂತರದ ಸ್ಥಾನಗಳಲ್ಲಿ ರಾಜಸ್ಥಾನ, ತಮಿಳುನಾಡು, ಮಧ್ಯ ಪ್ರದೇಶ, ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ ಇದ್ದು, 10ನೇ ಸ್ಥಾನದಲ್ಲಿ ಕೇರಳ ಇದೆ ಎಂದು ವರದಿ ಹೇಳಿದೆ.

ಮೊದಲ ಸ್ಥಾನದಲ್ಲಿರುವ ಉತ್ತರ ಪ್ರದೇಶದಲ್ಲಿ ಲಕ್ಷ ಜನಸಂಖ್ಯೆಗೆ 32 ಕಾಲೇಜುಗಳಿದ್ದರೆ, ಮಹಾರಾಷ್ಟ್ರದಲ್ಲಿ 34 ಹಾಗೂ ಕರ್ನಾಟಕದಲ್ಲಿ 62 ಕಾಲೇಜುಗಳಿವೆ. ಶಿಕ್ಷಣ ಸಚಿವಾಲಯ ಈ ವರದಿಯನ್ನು ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲೇ ಹೆಚ್ಚು: ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಅತ್ಯಧಿಕ (1,058) ಕಾಲೇಜುಗಳು ನೋಂದಣಿಯಾಗಿವೆ. 2ನೇ ಸ್ಥಾನದಲ್ಲಿ ಜೈಪುರ (671), 3ನೇ ಸ್ಥಾನದಲ್ಲಿ ಹೈದರಾಬಾದ್ (488) ಇವೆ ಎಂದು ವರದಿ ಹೇಳಿದೆ.


ಬಿ.ಎ ಪದವಿಗೆ ಹೆಚ್ಚು ವಿದ್ಯಾರ್ಥಿಗಳು: ದೇಶದಲ್ಲಿ ಬಿ.ಎ ಪದವಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ ಹೆಚ್ಚಿದ್ದು, ನಂತರ ಸ್ಥಾನದಲ್ಲಿ ಬಿ.ಎಸ್ಸಿ ಇದೆ ಎಂದು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅಖಿಲ ಭಾರತ ಮಟ್ಟದ ಸಮೀಕ್ಷೆಯ (2020-21) ವರದಿ ಹೇಳಿದೆ.

ಬಿ.ಎ ಪದವಿ ಓದುತ್ತಿರುವ 1.04 ಕೋಟಿ ವಿದ್ಯಾರ್ಥಿಗಳ ಪೈಕಿ ಶೇ 52.7ರಷ್ಟು ವಿದ್ಯಾರ್ಥಿನಿಯರು. 49.12 ಲಕ್ಷ ವಿದ್ಯಾರ್ಥಿಗಳು ದಾಖಲಾಗಿರುವ ಬಿ.ಎಸ್ಸಿ ಪದವಿಯಲ್ಲಿ ಶೇ 52.2ರಷ್ಟು ವಿದ್ಯಾರ್ಥಿನಿಯರಿದ್ದಾರೆ. 43.22 ಲಕ್ಷ ವಿದ್ಯಾರ್ಥಿಗಳು ದಾಖಲಾಗಿರುವ ಬಿ.ಕಾಂ ಪದವಿಯಲ್ಲಿ ಶೇ 48.5ರಷ್ಟು ವಿದ್ಯಾರ್ಥಿನಿಯರು ಇದ್ದಾರೆ ಎಂದು ವರದಿ ತಿಳಿಸಿದೆ.

ದೇಶದ ಉನ್ನತ ಶಿಕ್ಷಣ ದಾಖಲಾತಿಯು ಕಳೆದ ಐದು ವರ್ಷಗಳಲ್ಲಿ ಶೇ 21ರಷ್ಟು ಏರಿಕೆಯಾಗಿದೆ ಎಂದು ವರದಿ ಹೇಳಿದೆ.

ವಾಯುಪಡೆ: ಎ.ಪಿ.ಸಿಂಗ್ ನೇಮಕ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ನೂತನ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ಎ.ಪಿ.ಸಿಂಗ್ ನೇಮಕವಾಗಿದ್ದಾರೆ.



❦ ಸುಭಾಷಿತ ❦

ತನಿಖೆ ನಡೆಸದೇ ಖಂಡಿಸುವುದು ಅಜ್ಞಾನದ ಪರಮಾವಧಿ.
–ಆಲ್ಬರ್ಟ್ ಐನ್‌ಸ್ಟೀನ್

ಟಿ20 ವಿಶ್ವಕಪ್ ಗೆಲುವು: ಮಹಿಳಾ ಕ್ರಿಕೆಟ್‌ನ ಹೊಸ ಶಕೆಗೆ ಮುನ್ನುಡಿ

ಹರಿಯಾಣ ಹುಡುಗಿ ಶಫಾಲಿ ವರ್ಮಾ ನಾಯಕತ್ವದ ಭಾರತ ತಂಡವು 19 ವರ್ಷದೊಳಗಿನ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸುವುದರೊಂದಿಗೆ ಐತಿಹಾಸಿಕ ಸಾಧನೆ ಮಾಡಿದೆ. ಇದರೊಂದಿಗೆ ಭಾರತದ ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಪರ್ವ ಆರಂಭವಾಗುವ ನಿರೀಕ್ಷೆ ಗರಿಗೆದರಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ಚೊಚ್ಚಲ ಟೂರ್ನಿಯಲ್ಲಿ ಭಾರತದ ಯುವಪಡೆ ಚಾಂಪಿಯನ್ ಪಟ್ಟಕ್ಕೆ ಏರಿತು. ಸೀನಿಯರ್ ವಿಭಾಗದ ಯಾವುದೇ ಮಾದರಿಯಲ್ಲಿ ಭಾರತದ ವನಿತೆಯರು ಇದುವರೆಗೂ ವಿಶ್ವಕಪ್ ಗೆದ್ದಿಲ್ಲ. ಅದರಿಂದಾಗಿ ದೇಶದ ಮಹಿಳಾ ಕ್ರಿಕೆಟ್‌ಗೆ ಸಂದ ಮೊದಲ ಐಸಿಸಿ ಟ್ರೋಫಿ ಕೂಡ ಇದಾಗಿದೆ. ಪುರುಷರ ಕ್ರಿಕೆಟ್‌ಗೆ ಇರುವ ಜನಪ್ರಿಯತೆಯ ಮಟ್ಟಕ್ಕೆ ಏರಲು ಮಹಿಳಾ ಕ್ರಿಕೆಟ್ ವಲಯವು ನಡೆಸಿರುವ ಪ್ರಯತ್ನಗಳಿಗೆ ಈ ವಿಜಯವು ಆನೆ ಬಲ ತುಂಬಲಿದೆ. 16 ತಂಡಗಳು ಸ್ಪರ್ಧಿಸಿದ್ದ ಈ ಟೂರ್ನಿಯಲ್ಲಿ ಆಡಿದ ಭಾರತದ ಬಹಳಷ್ಟು ಆಟಗಾರ್ತಿಯರಿಗೆ ವಿದೇಶದಲ್ಲಿ ಆಡಿದ ಅನುಭವವೇ ಇರಲಿಲ್ಲ. ಆದರೂ ತಂಡದಲ್ಲಿದ್ದ ಅನುಭವಿ ಆಟಗಾರ್ತಿಯರ ಸಾಂಗತ್ಯದೊಂದಿಗೆ ಕಲಿತು ಮಿಂಚಿದರು. ನಾಯಕಿ ಶಫಾಲಿ ಹಾಗೂ ವಿಕೆಟ್‌ಕೀಪರ್ ರಿಚಾ ಘೋಷ್ ಅವರಿಬ್ಬರಿಗೆ ಸೀನಿಯರ್ ತಂಡದಲ್ಲಿ ಆಡಿದ ಅನುಭವ ಇದೆ. ಅದರಲ್ಲೂ ಶಫಾಲಿ ಅವರು ಮೂರೂವರೆ ವರ್ಷಗಳ ಹಿಂದೆಯೇ ಭಾರತದ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 51 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಅವರು ಆಡಿದ್ದಾರೆ. ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಅವರಂತಹ ಆಟಗಾರ್ತಿಯರೊಂದಿಗೆ ಆಡಿದ್ದ ಶಫಾಲಿ ಅವರ ಅನುಭವದ ಫಲ ಇಲ್ಲಿ ದಕ್ಕಿತು. ಇತ್ತೀಚೆಗಷ್ಟೇ ಮಹಿಳಾ ಕ್ರಿಕೆಟಿಗರಿಗೂ ಕೇಂದ್ರ ಗುತ್ತಿಗೆ ಮತ್ತು ಸಮಾನ ವೇತನದಂತಹ ಸೌಲಭ್ಯಗಳನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಘೋಷಿಸಿದೆ. ಈ ನಡೆ, ಕ್ರಿಕೆಟ್ ಬಗೆಗೆ ಹೆಣ್ಣುಮಕ್ಕಳಲ್ಲಿ ಹೆಚ್ಚಿನ ಆಸಕ್ತಿ ಮೂಡಲು ಕಾರಣವಾಗಿದೆ.



ಶಫಾಲಿ ಬಳಗದ ವಿಜಯವು ಮತ್ತಷ್ಟು ಹೆಣ್ಣುಮಕ್ಕಳು ಕ್ರಿಕೆಟ್ ಆಯ್ಕೆ ಮಾಡಿಕೊಳ್ಳಲು ಪ್ರೇರಣೆಯಾಗಬಹುದು

ಬರುವ ಮಾರ್ಚ್‌ನಲ್ಲಿ ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿ ಆಯೋಜನೆಗೊಂಡಿದೆ. ಅದಕ್ಕಾಗಿ ಐದು ಫ್ರ್ಯಾಂಚೈಸಿಗಳ ಹರಾಜು ಪ್ರಕ್ರಿಯೆ ಈಚೆಗೆ ನಡೆಯಿತು. ಈ ತಂಡಗಳ ಬಿಡ್‌ನಿಂದ ಗಳಿಸಿರುವ ಬೃಹತ್ ಮೊತ್ತ ಮಂಡಳಿಯ ಬೊಕ್ಕಸ ಸೇರಿದೆ. ಮುಂದಿನ ತಿಂಗಳು ಈ ತಂಡಗಳಿಗೆ ಆಟಗಾರ್ತಿಯರ ಆಯ್ಕೆಗಾಗಿ ಹರಾಜು ಪ್ರಕ್ರಿಯೆ ನಡೆಯಲಿದೆ. ಇದೀಗ ವಿಶ್ವಕಪ್ ವಿಜೇತ ತಂಡದ ಆಟಗಾರ್ತಿಯರು ಫ್ರ್ಯಾಂಚೈಸಿಗಳ ಗಮನ ಸೆಳೆಯುವ ನಿರೀಕ್ಷೆ ಇದೆ. ಟೂರ್ನಿಯ ಏಳು ಪಂದ್ಯಗಳಲ್ಲಿ 297 ರನ್ ಗಳಿಸಿರುವ ಬ್ಯಾಟರ್ ಶ್ವೇತಾ ಶೆರಾವತ್, ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಸುಲಭ ಜಯ ಸಾಧಿಸಲು ಕಾರಣರಾದ ಮಧ್ಯಮವೇಗಿ ಟೈಟಸ್ ಸಾಧು, ಲೆಗ್‌ಸ್ಪಿನ್ನರ್ ಪಾರ್ಶ್ವಿ ಚೋಪ್ರಾ, ಆಫ್‌ಸ್ಪಿನ್ನರ್ ಅರ್ಚನಾ ದೇವಿ ಮತ್ತು ವಿಕೆಟ್‌ಕೀಪರ್ ರಿಚಾ ಘೋಷ್ ಅವರು ಐಪಿಎಲ್ ತಂಡಗಳಿಂದ ಉತ್ತಮ ಮೌಲ್ಯ ಪಡೆಯುವ ನಿರೀಕ್ಷೆ ಇದೆ. ಅಷ್ಟೇ ಅಲ್ಲ, ಇತ್ತೀಚೆಗಷ್ಟೇ ನಿವೃತ್ತರಾಗಿರುವ ಮಿಥಾಲಿ ಹಾಗೂ ಜೂಲನ್ ಅವರ ಸ್ಥಾನಗಳನ್ನು ತುಂಬುವ ಭರವಸೆಯನ್ನೂ ಈ ಯುವತಿಯರು ಮೂಡಿಸಿದ್ದಾರೆ. ಇದೇ ಮೊದಲ ಬಾರಿಗೆ ಆಯೋಜನೆಗೊಂಡ ಈ ಟೂರ್ನಿಯಿಂದಾಗಿ ಜಾಗತಿಕ ಮಟ್ಟದಲ್ಲಿಯೂ ಮಹಿಳೆಯರ ಕ್ರಿಕೆಟ್‌ಗೆ ದೊಡ್ಡ ಮಟ್ಟದಲ್ಲಿ ಉತ್ತೇಜನ ದೊರೆಯಬಹುದು. ಕ್ರಿಕೆಟ್ ಆಯ್ಕೆ ಮಾಡಿಕೊಳ್ಳುವ ಹೆಣ್ಣುಮಕ್ಕಳು ತಮ್ಮ ವೃತ್ತಿಭವಿಷ್ಯವನ್ನು ರೂಪಿಸಿಕೊಳ್ಳಲೂ ಇದು ನೆರವಾಗಲಿದೆ. ಅಂಪೈರಿಂಗ್, ವೀಕ್ಷಕ ವಿವರಣೆ, ತರಬೇತಿಯಂತಹ ವಿಭಾಗಗಳಲ್ಲಿ ಅವಕಾಶಗಳು ಮಹಿಳೆಯರಿಗೆ ಹೆಚ್ಚಲಿವೆ. ಯಾವುದೇ ಸಮೂಹ ಕ್ರೀಡೆಯಲ್ಲಿ ವಿಶ್ವಕಪ್ ಗೆಲುವು ಆ ಮಾದರಿಯ ಆಟಕ್ಕೆ ದೊಡ್ಡ ಶಕ್ತಿ ತುಂಬಬಲ್ಲದು. ಪುರುಷರ ವಿಭಾಗದ ಕ್ರಿಕೆಟ್ ಬೃಹದಾಕಾರವಾಗಿ ಬೆಳೆಯಲು 1983ರಲ್ಲಿ ಕಪಿಲ್ ದೇವ್ ನೇತೃತ್ವದ ತಂಡದ ವಿಜಯವು ಹೊಸ ಚೈತನ್ಯ ತುಂಬಿತು. 2007ರಲ್ಲಿ ಮಹೇಂದ್ರ ಸಿಂಗ್ ಧೋನಿ ಬಳಗದ ಟಿ20 ವಿಶ್ವಕಪ್ ವಿಜಯವು ಚುಟುಕು ಮಾದರಿಗೆ ಹೊಸಶಕ್ತಿ ತುಂಬಿದ್ದು ಇತಿಹಾಸ. ಅದೇ ರೀತಿ ಇದೀಗ ಶಫಾಲಿ ಬಳಗದ ವಿಜಯವು ಭಾರತದ ಮಹಿಳಾ ಕ್ರಿಕೆಟ್ ಹೊಸ ಎತ್ತರಕ್ಕೆ ಏರಲು ಚಿಮ್ಮುಹಲಗೆ ಆಗುವ ಸಾಧ್ಯತೆ ಇದೆ. ಮತ್ತಷ್ಟು ಹೆಣ್ಣುಮಕ್ಕಳು ಕ್ರಿಕೆಟ್ ಆಯ್ಕೆ ಮಾಡಿಕೊಳ್ಳಲು ಪ್ರೇರಣೆಯಾಗಬಹುದು.

ದಿನದ ಟ್ವೀಟ್

ಆದ್ಯತೆ ಬದಲಾಗದಿದ್ದರೆ...



2023ರ ಈ ಕಾಲಘಟ್ಟದಲ್ಲಿ ಬೇರೆ ದೇಶಗಳು ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನ, ಆರ್ಥಿಕ ಸುಸ್ಥಿರತೆ ಮತ್ತು ಎಲೆಕ್ಟ್ರಿಕ್ ಕಾರ್‌ನಂತಹ ವಿಷಯಗಳಿಗೆ ಸಂಬಂಧಿಸಿದಂತೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿವೆ... ಆದರೆ, 2023ರಲ್ಲಿ ನಾವಿಲ್ಲಿ ಈಗಲೂ, ಮೂಲಭೂತ ಮಾನವ ಹಕ್ಕಾದ 'ಸುರಕ್ಷತೆ ಮತ್ತು ಭದ್ರತೆ'ಯನ್ನೇ ಹೊಂದಿಲ್ಲ. ಹಾಗಿದ್ದರೆ ನಮ್ಮ ಬಳಿ ಏನಿದೆ? #Peshawarblast

ಇನಾಮ್ ಕಾಕರ್, ಅಥ್ಲೀಟ್, ಪಾಕಿಸ್ತಾನ

ಕಿಡಿನುಡಿ



ಗೌತಮ್ ಅದಾನಿ ಅವರಿಗೆ ನೆನಪಿಸಿಕೊಡುತ್ತಿದ್ದೇನೆ. ಅದಾನಿ ಅಂದರೆ ಭಾರತವಲ್ಲ, ಭಾರತವೆಂದರೆ ಅದಾನಿ ಅಲ್ಲ. ಹಿಂಡನ್‌ಬರ್ಗ್ ವರದಿಯು ಅದಾನಿ ಸಮೂಹದ ವಿರುದ್ಧ ಬೊಟ್ಟುಮಾಡಿದೆ, ಭಾರತದ ವಿರುದ್ಧ ಅಲ್ಲ. ಮಹಾನ್ ವ್ಯಕ್ತಿಯೊಬ್ಬ 'ದೇಶಪ್ರೇಮವು ಘಟಿಂಗರ ಪಾಲಿಗೆ ಕೊನೆಯ ಆಶ್ರಯವಿದ್ದಂತೆ' ಎಂದು ಒಮ್ಮೆ ಹೇಳಿದ್ದ. ಇಲ್ಲಿರುವ ದೊಡ್ಡ ಪ್ರಶ್ನೆ, 'ಅದಾನಿ' ಭಾರತ ಆಗಿದ್ದು ಯಾವಾಗ?

ಕೀರ್ತಿ ಆಜಾದ್, ಮಾಜಿ ಕ್ರಿಕೆಟಿಗ, ಟಿಎಂಸಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 31-1-1998

• **ಸಾಧನೆ ತೋರಲು ಸಮಯ ಬೇಕಿತ್ತು: ಗುಜ್ರಾಲ್**

ನವದೆಹಲಿ, ಜ. 30 (ಪಿಟಿಐ)– ಸಾರ್ವಜನಿಕ ಜೀವನದಲ್ಲಿ ನೂತನ ಸಂಹಿತೆ ಅಳವಡಿಸಿ ಹುದ್ದೆಗೆ ಗೌರವ ತರುವ ತಮ್ಮ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಇನ್ನೂ ಸ್ವಲ್ಪ ಸಮಯ ಬೇಕಿತ್ತು ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಹೇಳಿದ್ದಾರೆ.

ಮುಂಬೈನಲ್ಲಿ 1946ರ ಜುಲೈ 6ರಂದು ನಡೆದ ಕಾಂಗ್ರೆಸ್ ಅಧಿವೇಶನದ ವೇಳೆ ಅಸೋಸಿಯೇಟೆಡ್ ಪ್ರೆಸ್‌ನ (ಎಪಿ) ಛಾಯಾಗ್ರಾಹಕ ಮ್ಯಾಕ್ಸ್ ಡೆಸ್ಟರ್ ಅವರು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದ ಗಾಂಧಿ– ನೆಹರೂ ಅವರ ಭಾವಚಿತ್ರವನ್ನು ಇಂದು ಸ್ವೀಕರಿಸಿದ ಬಳಿಕ ಗುಜ್ರಾಲ್ ಅವರು ಪತ್ರಕರ್ತರ ಜೊತೆ ಮಾತನಾಡುತ್ತಿದ್ದರು.

ಸಂಯುಕ್ತ ರಂಗವು ಕೇಂದ್ರದಲ್ಲಿ ಯಶಸ್ವಿಯಾಗಿ ಸಮ್ಮಿಶ್ರ ಸರ್ಕಾರವನ್ನು ನಿರ್ವಹಿಸಿದೆ ಎಂದ ಅವರು, ಪಾಲುದಾರ ಪಕ್ಷಗಳ ಕಚ್ಚಾಟದಿಂದ ಈ ಸರ್ಕಾರ ಉರುಳಿದ್ದಲ್ಲ ಎಂದು ನೆನಪಿಸಿದರು.

• **ಭ್ರಷ್ಟಾಚಾರರಹಿತ ಸ್ವಚ್ಛ ಆಡಳಿತ, ಎಲ್ಲರಿಗೂ ಪಡಿತರ, ಶಾಲೆ ಸೌಲಭ್ಯ**

ನವದೆಹಲಿ, ಜ. 30– ಉತ್ತಮ ಆಡಳಿತ, ಸಾಮಾಜಿಕ– ಆರ್ಥಿಕ ರಂಗದ ಸರ್ವವ್ಯಾಪಿ ಅಭಿವೃದ್ಧಿ, ಪ್ರತೀ ಕುಟುಂಬಕ್ಕೂ ಆಹಾರ ಧಾನ್ಯ, ಪ್ರತಿಯೊಬ್ಬ ಭಾರತೀಯನೂ ಆರೋಗ್ಯವಂತ ಮತ್ತು ಅಕ್ಷರಸ್ಥನಾಗುವ ಮತ್ತು ಪ್ರತಿಯೊಂದು ಮಗುವೂ ಶಾಲೆಗೆ ಸೇರುವ ವ್ಯವಸ್ಥೆ.

–ಇದು ಸಂಯುಕ್ತ ರಂಗದ ಆಶಯ. ಲೋಕಸಭೆ ಚುನಾವಣೆಗಾಗಿ ಸಂಯುಕ್ತ ರಂಗವು ಈ ಕನಿಷ್ಠ ಕಾರ್ಯಕ್ರಮಗಳು ಮತ್ತು ಜಂಟಿ ನೀತಿ ಘೋಷಣೆಯನ್ನು ಇಂದು ಜನತೆಯ ಮುಂದಿಟ್ಟಿತು.

ಸಂಯುಕ್ತ ರಂಗದ ಅಧ್ಯಕ್ಷ ಮತ್ತು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ರಂಗದ ಜಂಟಿ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

50 ವರ್ಷಗಳ ಹಿಂದೆ

ಬುಧವಾರ, 31-1-1973

• **ಕಿಟ್ಟರಹಿತ ಕಲ್ಲಿದ್ದಲು ಗಣಿಗಳ ಆಡಳಿತ ಸರ್ಕಾರದ ವಶಕ್ಕೆ**

ನವದೆಹಲಿ, ಜ. 30– ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಕೇಂದ್ರ ಸರ್ಕಾರ ಇಂದು ದೇಶದ 474 ಕಿಟ್ಟರಹಿತ (ನಾನ್ ಕೋಕಿಂಗ್) ಕಲ್ಲಿದ್ದಲು ಗಣಿಗಳ ಆಡಳಿತವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಈ ಗಣಿಗಳನ್ನು ಮುಂದೆ ರಾಷ್ಟ್ರೀಕರಿಸಲಾಗುವುದು.

ಇದರಿಂದ ಭಾರತದ ಕಲ್ಲಿದ್ದಲು ಉದ್ಯಮ ಹೆಚ್ಚು ಕಡಿಮೆ ಪೂರ್ತಿಯಾಗಿ ಸಾರ್ವಜನಿಕ ಕ್ಷೇತ್ರಕ್ಕೆ ಒಳಪಟ್ಟಂತಾಗಿದೆ. ಕಳೆದ ವರ್ಷ 214 ಕಿಟ್ಟಯುಕ್ತ ಕಲ್ಲಿದ್ದಲು ಗಣಿಗಳನ್ನು ರಾಷ್ಟ್ರೀಕರಿಸಲಾಗಿತ್ತು.

ಕೇಂದ್ರ ಸಂಪುಟ ಇಂದು ಅಲ್ಪಕಾಲ ಸಭೆ ನಡೆಸಿದ ಮೇಲೆ ರಾಷ್ಟ್ರಪತಿ ವಿ.ವಿ. ಗಿರಿ ಅವರು ಸುಗ್ರೀವಾಜ್ಞೆಗೆ ಸಹಿ ಹಾಕಿದರು.

ರಾಷ್ಟ್ರೀಯ ಕಲ್ಲಿದ್ದಲು ಕಾರ್ಪೊರೇಷನ್ನಿನ ಅಧ್ಯಕ್ಷ ಜೆ.ಜಿ. ಕುಮಾರಮಂಗಲಂ ಅವರನ್ನು ಕಲ್ಲಿದ್ದಲು ಗಣಿಗಳ ಆಡಳಿತ ಸಂಸ್ಥೆಯ ಕಸ್ಟೋಡಿಯನ್ ಆಗಿ ನೇಮಿಸಲಾಗಿದೆ.

ಈ ಸಂಸ್ಥೆ ಈಗ ವಶಪಡಿಸಿಕೊಳ್ಳಲಾದ ಕಿಟ್ಟರಹಿತ ಕಲ್ಲಿದ್ದಲು ಗಣಿಗಳ ಆಡಳಿತ ನಿರ್ವಹಿಸುತ್ತದೆ.

• **ಮುಂದಿನ ಮುಂಗಡಪತ್ರದಲ್ಲಿ ಬರ ನಿವಾರಣೆಯ ಶಾಶ್ವತ ಕ್ರಮಗಳಿಗೆ ಆದ್ಯತೆ**

ಬೆಂಗಳೂರು, ಜ. 30– ಫೆಬ್ರುವರಿ ತಿಂಗಳ ಮೂರನೇ ವಾರದ ಸುಮಾರಿನಲ್ಲಿ ವಿಧಾನ ಮಂಡಲದಲ್ಲಿ ಮಂಡಿತವಾಗಲಿರುವ 1973–74ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ಮೂರರಲ್ಲಿ ಒಂದು ಭಾಗದಲ್ಲಿ ತೀವ್ರ ಅಭಾವ ಪರಿಸ್ಥಿತಿಯಿರುವ ಪ್ರದೇಶಗಳ ಜನ ಮತ್ತು ಜಾನುವಾರು ರಕ್ಷಣೆ ಹಾಗೂ ಶಾಶ್ವತ ಬರ ನಿವಾರಣಾ ಕ್ರಮಗಳು ಆದ್ಯತೆ ಪಡೆಯಲಿವೆ.

ಮಕ್ಕಳ ಬಗೆಗೆ ಅಕ್ಕರೆಯಿಲ್ಲದ ನಡೆಯು ಸೂಚಿಸುತ್ತಿರುವುದೇನು?

ಅಜ್ಞಾನದ ತೊಟ್ಟಿಲು: ಜ್ಞಾನದ ಶಿಶುಗಳು



ವಿಶ್ಲೇಷಣೆ

ಸಬಿತಾ ಬನ್ನಾಡಿ

'ದೇವರೇ! ಮನುಷ್ಯನನ್ನು ಏಕಿಷ್ಟು ಕ್ಲಿಷ್ಟ ವಸ್ತುವನ್ನಾಗಿ ಸೃಷ್ಟಿಸಿದೆ? ಅವನ ಸೆರೆಮನೆಗಳೇ ಅವನಿಗೆ ಗೊತ್ತಿಲ್ಲ'. ಇದು, ಪಿ.ಲಂಕೇಶ್ ಅವರು ಬರೆದ 'ಗುಣಮುಖ' ನಾಟಕದಲ್ಲಿ ಬರುವ ಒಂದು ಸಾಲು. ಮುನ್ನೂರು ವರ್ಷಗಳ ಹಿಂದಿನ ಕತೆಯನ್ನು ಮರುರೂಪಿಸುವಾಗ ಹೇಳುವ ಈ ಮಾತುಗಳು ವರ್ತಮಾನದಲ್ಲೂ ಪುನರಾವರ್ತನೆಯಾಗುತ್ತವೆಂದು ಕಾಣುತ್ತದೆ.

ಮನುಷ್ಯನು ಬಂದಿಯಾಗಿರುವ ಅಹಂಕಾರದ ಕಾರಾಗೃಹದ ಬಗೆಗೆ ಈ ನಾಟಕದ ಅಲಾವಿಖಾನ್ ಹೇಳುತ್ತಾನೆ. ಇಂದು, ಪ್ರಪಂಚವನ್ನೇ ಗೆಲ್ಲುವ, ಕಟ್ಟುವ, ಪ್ರಜೆಗಳಿಗೆಲ್ಲಾ ಮಹಾನ್ ಭವಿಷ್ಯವನ್ನು ರೂಪಿಸುತ್ತಿದ್ದೇವೆ ಎಂದು ಜಂಬ ಕೊಚ್ಚಿಕೊಳ್ಳುವ ಈ ವ್ಯವಸ್ಥೆಯಲ್ಲಿ ಹಸಿದ ಮಕ್ಕಳ ಅಹವಾಲು ಕೇಳುವುದಕ್ಕೂ ವ್ಯವಧಾನವಿಲ್ಲದೆ, ಪೊಲೀಸರನ್ನು ಕರೆಸಿ ಪುಟ್ಟ ಮಕ್ಕಳನ್ನು ಕಂಗಾಲಾಗಿಸಿ, ಅಲ್ಲಿಂದ ಅವರನ್ನು ತೆರವುಗೊಳಿಸುವ ಅಸಂಗತಗಳೂ ನಡೆದುಬಿಡುತ್ತವೆ!

ಇಷ್ಟಾಗಿ ಈಗ ನಾವಿರುವುದು ಆಗಿನ ನಿರಂಕುಶ ಚಕ್ರವರ್ತಿಗಳ ಸಾಮ್ರಾಜ್ಯದಲ್ಲಲ್ಲ, ಪ್ರಜಾಪ್ರಭುತ್ವದಲ್ಲಿ. ಇಲ್ಲಿ ಶಾಂತ ರೀತಿಯಲ್ಲಿ ಪ್ರಜೆಗಳು ತಮ್ಮ ಬೇಡಿಕೆಗಳನ್ನು ಮಂಡಿಸುವುದು, ಪ್ರತಿಭಟಿಸುವುದು, ತಮ್ಮ ಸಮಸ್ಯೆಗಳನ್ನು ಆಳುವವರ ಗಮನಕ್ಕೆ ತರುವುದು ಸಂವಿಧಾನ ದತ್ತವಾದ ಸಹಜ ಕ್ರಿಯೆ. ವ್ಯವಸ್ಥೆಯು ಸುಗಮವಾಗಿ ನಡೆಯುವುದನ್ನು ಗಮನಿಸುತ್ತಾ, ದೋಷ, ದಮನಗಳಾದಾಗ ಅವನ್ನು ಬೆಳಕಿಗೆ ತರುವುದು, ಸರಿಪಡಿಸುವುದು ಸಾರ್ವಜನಿಕ ಸಂಸ್ಥೆಗಳ ಜವಾಬ್ದಾರಿ. ಇದನ್ನೇ ನಾವು ನಮ್ಮ ಪಠ್ಯಗಳಿಂದ ಹಿಡಿದು ನಮ್ಮ ಹಲವು ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಹೇಳುತ್ತಲೇ ಇರುತ್ತೇವೆ. ನಮ್ಮ ಮಕ್ಕಳಲ್ಲಿ ಈ ಆದರ್ಶಗಳನ್ನು ಕಲಿಸುತ್ತೇವೆ (ತಮಾಷೆಯೆಂದರೆ, ವರ್ಷಕ್ಕೊಮ್ಮೆ ಶಿಕ್ಷಣ ಸಂಸ್ಥೆಗಳಲ್ಲಿ 'ನಾನು ಲಂಚ ಕೊಡುವುದಿಲ್ಲ, ಸ್ವೀಕರಿಸುವುದಿಲ್ಲ' ಎಂಬ ಪ್ರತಿಜ್ಞಾವಿಧಿ ನಡೆಯುತ್ತದೆ!). ಆ ಮುಗ್ಧ ಮನಸ್ಸುಗಳು ಅದನ್ನು ವಾಸ್ತವ ಎಂದೇ ಭಾವಿಸುತ್ತವೆ.

ನಮ್ಮ ಆಡಳಿತದ ಅನುಕೂಲಕ್ಕೆಂದು ಮಾಡಿಕೊಂಡಿರುವ ಜಿಲ್ಲೆಯ ಅಧಿಕಾರಿಯು ನಮಗೆ ಮೊದಲು ಲಭ್ಯವಿರಬೇಕಾದ ಸರ್ಕಾರದ ಪ್ರತಿನಿಧಿ. ನಮ್ಮ ಕೊಂಡಿಯಾಗಿ ಸರ್ಕಾರದ ಜೊತೆಗೆ ಈ ಅಧಿಕಾರಿ ಇರುವುದೇ ವಿನಾ ಸರ್ಕಾರದ ಹೇರಿಕೆಯಾಗಿ ಅಲ್ಲ. ಆದರೆ ಜನರ ಅನುಭವದಲ್ಲಿ ಇವರು ದೂರದ ಬೆಟ್ಟಗಳು. ಎಲ್ಲೋ ಅಪರೂಪಕ್ಕೆ ಕೆಲವು ಅಧಿಕಾರಿಗಳ ವ್ಯಕ್ತಿಗತ ನಡೆಯಿಂದ ಜನರ ಮುಖವಾಗಿ ಕಾಣಿಸಿಕೊಳ್ಳುವುದಿದೆ. ನಮ್ಮ ಹಲವು ಸಿನಿಮಾಗಳಲ್ಲಿ ಇಂತಹ ಅಧಿಕಾರಿಗಳನ್ನು ವೈಭವೀಕೃತ ನೆಲೆಯಲ್ಲಿ ಕಾಣಿಸಲಾಗಿದೆ. ನಮ್ಮ ಮಕ್ಕಳಿಗೆ ದೊರಕುವುದು ಇಂತಹ ಕೆಲವು ಮಾದರಿಗಳು. ಜೊತೆಗೆ ಈಚೆಗೆ ಮಾತೆತ್ತಿದರೆ ಐಎಎಸ್ ಮಾಡು ಎಂಬ ಪ್ರವಚನವೂ ನಮ್ಮ ಮಕ್ಕಳ ಕಿವಿಯ ಮೇಲೆ ಅಪ್ಪಳಿಸುತ್ತಲೇ ಇರುತ್ತದೆ. ಇವೆಲ್ಲದರ ಪ್ರಭಾವವೂ ಇರಬಹುದು.

ಈಚೆಗೆ ಚಿಕ್ಕ ಮಕ್ಕಳೂ ತಮ್ಮ ಕಷ್ಟವನ್ನು ಜಿಲ್ಲಾಧಿಕಾರಿಗೆ ತಿಳಿಸಿದಲ್ಲಿ ಅದು ಪರಿಹಾರ ಆಗಬಹುದು ಎಂದು ಭಾವಿಸಿದಂತಿದೆ.

ಕೆಲವು ದಿನಗಳ ಹಿಂದೆ, ತಮ್ಮ ಹಾಸ್ಟೆಲ್‌ನಲ್ಲಿ ಆಗುತ್ತಿರುವ ಜಾತಿ ಆಧಾರಿತ ಹಿಂಸೆಯನ್ನು ಅರುಹಲು ಜಾರ್ಖಂಡ್‌ನ ಹೆಣ್ಣುಮಕ್ಕಳು ರಾತ್ರಿಯಿಡೀ ನಿರ್ಮಾನುಷ ದಾರಿಯಲ್ಲಿ ನಡೆದುಕೊಂಡು ಹೋಗಿ ಜಿಲ್ಲಾಧಿಕಾರಿಯನ್ನು ಭೇಟಿಯಾದ ಸುದ್ದಿ ಬಂದಿತ್ತು. ಆ ಮಕ್ಕಳ ಮನವಿಯನ್ನು ಸ್ವೀಕರಿಸಿದ್ದೂ ತಿಳಿಯಿತು. ಮುಂದೇನಾಯಿತೋ ಗೊತ್ತಿಲ್ಲ. ಆದರೆ ನಮ್ಮ ಕರ್ನಾಟಕದಲ್ಲಿ ಮಕ್ಕಳನ್ನೇ ಅಪರಾಧಿಗಳನ್ನಾಗಿಸಲಾಯಿತು. ನಾವು ಹೀಗೆ ವರ್ತಿಸಬಹುದೇ? ಮಕ್ಕಳ ಬಗೆಗೆ ನಮಗಿರುವ ಕಾಳಜಿಗಳೇನು? ಮಕ್ಕಳ ಪ್ರಶ್ನೆಗಳನ್ನು ಮಕ್ಕಳೇ ಕೇಳುವುದರ ಕುರಿತು ನಮಗೆ ಸಹನೆ ಇದೆಯೇ?

ನಾವು ಮಾತೆತ್ತಿದರೆ ಮಕ್ಕಳ ಭವಿಷ್ಯದ ಬಗೆಗೆ ಮಾತಾಡುತ್ತಿರುತ್ತೇವೆ. ಆದರೆ ಆ ಮಾತುಗಳೆಲ್ಲವನ್ನೂ ನಾವೇ, ಅಂದರೆ ದೊಡ್ಡವರೇ ಮಾತಾಡುತ್ತಿರುತ್ತೇವೆ. ವಿಧೇಯತೆಯ ಹೆಸರಿನಲ್ಲಿ ಸದಾ ಮಕ್ಕಳ ಬಾಯಿ ಮುಚ್ಚಿಸುವುದು ಅಭ್ಯಾಸವಾಗಿರುವ ನಮಗೆ ಅವರು ಎತ್ತುವ ನ್ಯಾಯವಾದ ಪ್ರಶ್ನೆಯಲ್ಲಿಯೂ ಆಸಕ್ತಿಯಾಗಲಿ, ನಂಬಿಕೆಯಾಗಲಿ ಇಲ್ಲ. ಮೇಲಿನ ಸಂಗತಿಗಳು ನಮ್ಮನ್ನು ಎಚ್ಚರಿಸುವ ನಡೆಯಾಗಬೇಕಾಗಿದೆ. ಆದರೆ ಎಂದಿನಂತೆ ಇವುಗಳು ಅತ್ಯಂತ ನಿರ್ಲಕ್ಷಿತ ವಿಷಯಗಳಾಗುವ ಎಲ್ಲ ಲಕ್ಷಣಗಳೂ ಇವೆ. ಪ್ರತಿಯೊಂದರಲ್ಲೂ ರಾಜಕಾರಣ ಬೆರೆಸುವುದು ನಮ್ಮ ಆದ್ಯತೆಯಾಗಿರುವಾಗ ಈ ಬೇರು ಮಟ್ಟದ ವಿಚಾರಗಳು ಅಧಿಕಪ್ರಸಂಗಗಳಂತೆ ಕಾಣುತ್ತವೆ.

ಮೇಲಿನ ಪ್ರಸಂಗಗಳು ಭ್ರಷ್ಟಾಚಾರದ ರಾಕ್ಷಸೀ ಬಾಹುಗಳ ಆಕ್ರಮಣದ ನೇರ ನಿದರ್ಶನಗಳಾಗಿವೆ. ಭ್ರಷ್ಟಾಚಾರವನ್ನೇ ಹಾಸುಂಡು ಮಲಗುವವರ ಪಡೆಯು ಬಲ ಪಡೆದುಕೊಳ್ಳುತ್ತಿದೆ. ಈ ಸ್ಥಿತಿಯಲ್ಲಿ ಮಕ್ಕಳೇ ಪ್ರತಿಭಟನೆಗೆ ತೊಡಗುವುದನ್ನು ಸಹಿಸಲಾಗಿಲ್ಲ. ಮಕ್ಕಳ ಬಾಯಿ ಮುಚ್ಚಿಸುವ ಕೆಲಸ ಮಾಡುವುದೆಂದರೆ, ಮುಂದೆಂದೂ ಯಾರೂ ಸೊಲ್ಲೆತ್ತದಂತೆ ಮಾಡುವುದರ ಸೂಚನೆಯೂ ಹೌದು. ಇದು ಬರೀ ಹಣದ ಭ್ರಷ್ಟತೆಯಷ್ಟೇ ಅಲ್ಲ, ಚಿಂತನೆಯ ಭ್ರಷ್ಟತೆಯೂ ಆಗಿದೆ. ಪರಿಶಿಷ್ಟ ಪಂಗಡಗಳ ಮಕ್ಕಳ ಹಾಸ್ಟೆಲ್ ಎಂಬುದೂ ಸಾಮಾಜಿಕ ನಿರ್ಲಕ್ಷ್ಯಕ್ಕೆ ಒಂದು ಕಾರಣವಾಗಿರುತ್ತದೆ.



ಹಾಗೆಯೇ ಮುರುಘಾಮಠದ ಹೆಣ್ಣುಮಕ್ಕಳು ಬಡವರಾಗಿರುವುದೂ ಆ ಗಹನ ವಿಷಯ ಮರೆಗೆ ಸರಿಯಲು ಕಾರಣವಾಗಿರುತ್ತದೆ.

ಬಡವರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಉಚಿತವಾಗಿ ನೀಡುವ ಅಕ್ಕಿ ಎಂಬುದು ಮಧ್ಯಮ ವರ್ಗದವರಿಗೆ ಇಂದಿಗೂ ಅಸಹನೆಯ ವಿಷಯವಾಗಿದೆ. ಅದೇ ಲಕ್ಷ ಕೋಟಿ ಸಂಪತ್ತಿರುವ ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ತೆರಿಗೆ ರಿಯಾಯಿತಿಯ ಹಿಂದು ಮುಂದು ಅರಿಯುವ ವಿವೇಚನೆಯೂ ಕಾಣುವುದಿಲ್ಲ. ರೈತರ ಹತ್ತಾರು ಕೋಟಿ 'ಸಾಲಮನ್ನಾ' ಬಗೆಗೆ ಉರಿದು ಬೀಳುವ ಕೆಲವು ಶ್ರೀಮಂತ ಸಲಹೆಗಾರರು, ಬ್ಯಾಂಕ್‌ನಿಂದ ಮರಳಿ ಬಾರದ ಅತಿ ಶ್ರೀಮಂತರ ಲಕ್ಷಾಂತರ ಕೋಟಿ ರೂಪಾಯಿಯ ಸಾಲಗಳನ್ನು 'ರೈಟ್ ಆಫ್' ಮಾಡುವುದರ ಬಗೆಗೆ ಚಕಾರ ಎತ್ತುವುದಿಲ್ಲ.


ನೌಕರರ ಸಂಬಳ, ಪಿಂಚಣಿಗಳೂ ಹೊರಲಾರದ ಹೊರೆ ಎಂಬಂತೆ ಬಿಂಬಿಸುವುದನ್ನು ನಂಬಿರುವ ಜನತೆಗೆ ಎಲೆಕ್ಷನ್‌ಗೆ ನಿಲ್ಲುವಾಗಲೇ ತಮ್ಮ ಕೋಟಿ ಮೀರಿದ ಆಸ್ತಿಯನ್ನು ಘೋಷಿಸಿಕೊಂಡಿರುವವರು, ಒಮ್ಮೆ ಗೆದ್ದರೆ ಜೀವನವಿಡೀ ಹಳೆಯ ಮಾದರಿಯ ಪಿಂಚಣಿಯನ್ನು ಪಡೆಯುವುದರ ಬಗೆಗೆ ಕನಿಷ್ಠ ಮಾಹಿತಿಯೂ ಇರುವುದಿಲ್ಲ. ಬರೇ ಧರಿಸುವ ಬಟ್ಟೆಯಿಂದಲೇ ಮರುಳು ಮಾಡಿ 'ಧಾರ್ಮಿಕತೆ'ಯ ಸೋಗು ಹಾಕುವವರು ಸರ್ಕಾರದಿಂದಲೂ ಜನರಿಂದಲೂ ದೋಚುವ ಹಣದ ಬಗೆಗೆ ಅಸಹನೆ ಕಾಣುವುದೇ ಇಲ್ಲ. ಹೀಗೆ ವಯಸ್ಕರನ್ನೆಲ್ಲಾ ಮೂರ್ಖರನ್ನಾಗಿಸುವುದು ಸುಲಭವಾಗಿರುವ ಈ ಹೊತ್ತಿನಲ್ಲಿ, ಮಕ್ಕಳು ಅನ್ಯಾಯದ ವಿರುದ್ಧ ಎದ್ದು ನಿಲ್ಲುವುದು ನಿದ್ದೆಗೆಡಿಸುವ ಸಂಗತಿಯಾಗದೇ ಇರುತ್ತದೆಯೇ?

ಬಳ್ಳಾರಿಯ ಸಮಸ್ತ ಆಡಳಿತವು, ಪ್ರತಿಭಟಿಸಿದ ಮಕ್ಕಳ ಬಗೆಗೆ ತಳೆದ ನಿಲುವಿನ ಹಿಂದೆ ಈ ನಿದ್ದೆಗೆಡುವಿಕೆಯೇ ಎದ್ದು ಕಾಣುತ್ತಿದೆ. ಮಕ್ಕಳ ಪ್ರತಿಭಟನೆಯ ಹಿಂದೆ ಯಾರದೋ ಕೈವಾಡವಿದೆ ಎಂಬ ಶಂಕೆ ಇದ್ದರೆ ಅದರ ಬಗ್ಗೆ ಪ್ರಾಮಾಣಿಕವಾಗಿ ತನಿಖೆಯಾಗಲಿ. ಆದರೆ ಯಾವುದೇ ತನಿಖೆ ಇಲ್ಲದೆ ಮಕ್ಕಳಿಗೆ ಶಿಕ್ಷೆಯಾಗಿದ್ದು ಹೇಗೆ? ಅವರನ್ನು ಇದ್ದಕ್ಕಿದ್ದಂತೆ ಹಾಸ್ಟೆಲ್‌ನಿಂದ ತೆರವುಗೊಳಿಸಿದ್ದು ಹೇಗೆ? ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಕೊಲೆ ಮಾಡಿದವರ್‍ಯಾರೂ ಸಹಾಯ ಕೇಳಿದ್ದಲ್ಲ, ಮಕ್ಕಳನ್ನು ತೆರವುಗೊಳಿಸದಂತೆ ಸಹಾಯ ಕೇಳಿದಾಗ ಅವರ್‍ಯಾಕೆ ಅಷ್ಟು ಅಸಹಾಯಕತೆ ತೋರಿದರು? ವಿಚಿತ್ರವೆನಿಸುತ್ತದೆ.

ಇಲ್ಲಿ ಯಾರೂ ಕಾನೂನನ್ನು ಉಲ್ಲಂಘಿಸಿಲ್ಲ. ಸಾಂಬಾರಿನ ಗುಣಮಟ್ಟವನ್ನು ಖುದ್ದು ಪರಿಶೀಲಿಸಲಷ್ಟೇ ಆ ಮಕ್ಕಳು ಕೇಳಿದ್ದು. ಇದು 'ಸೊಕ್ಕಿನ ನಡೆ'ಯಾಗಿ ಕಾಣಿಸಿದ್ದು ಯಾಕೆ? ಆ ಮಕ್ಕಳ ಬಡ ಪೋಷಕರೂ ಕೊಟ್ಟ ತೆರಿಗೆಯ ಒಂದು ಭಾಗದಿಂದಲೇ ಸಂಬಳ ಪಡೆಯುತ್ತಿರುವ ಅಧಿಕಾರಿಗಳಿಗೆ, ಹಾಸ್ಟೆಲ್‌ನಲ್ಲಿರುವ ಮಕ್ಕಳು ಮಾತ್ರ ಬಿಟ್ಟಿ ಊಟ ತಿನ್ನುತ್ತಿದ್ದಾರೆ ಎಂಬ ಅಜ್ಞಾನವೇ? ಮಕ್ಕಳು ತಾವಾಗಿಯೇ ಪ್ರತಿಭಟಿಸಬೇಕಾದ ಸ್ಥಿತಿಗೆ ಅವರನ್ನು ತಲುಪಿಸಿರುವ ನಮ್ಮ ಬಗ್ಗೆಯೇ ನಾವೀಗ ತನಿಖೆ ಮಾಡಿಕೊಳ್ಳಬೇಕಾಗಿದೆ ಎಂಬ ಎಚ್ಚರ ಮೊದಲು ಮೂಡಬೇಕಿದೆ.

'ಎಲ್ಲರನ್ನೂ ಆಳುವ, ಹತ್ತಿಕ್ಕುವ, ಕೊಲ್ಲುವ ಧಿಮಾಕು. ದೇವರೇ, ಮನುಷ್ಯನೆಂಬ ಈ ಅಪ್ರಾಮಾಣಿಕ, ಅಸಹಾಯಕ ಜಂತುವಿನ ಮೇಲೆ ನಿನಗೆ ಕರುಣೆಯೇ ಇಲ್ಲವೇ?' ಎಂಬ ಅಲಾವಿಖಾನ್‌ನ ಪ್ರಶ್ನೆಯನ್ನು ಮಕ್ಕಳ ಪರವಾಗಿ 'ದೊಡ್ಡವರು' ಕೇಳಿಕೊಳ್ಳಬೇಕಾಗಿದೆ.

ಚುರುಮುರಿ



ಒಳ್ಳೇರಿಗೆ ಕಾಲವಿಲ್ಲ

• ಲಿಂಗರಾಜು ಡಿ.ಎಸ್.

'ಅಪರಾಧಿಗಳೇ ಇವತ್ತು ಹಣಬಲ, ರಾಜಕೀಯ ಬಲ, ತೋಳ್ಬಲ ತೋರಿಸಿಗ್ಯಂಡು ಜೀವನದಲ್ಲಿ ಮ್ಯಾಲಮ್ಯಾಲಕ್ಕೋಯ್ತಾವರೆ. ಒಳ್ಳೇರಿಗೆ ಕಾಲ ಇಲ್ಲ ಕನಪ್ಪಾ' ಯಂಟಪ್ಪಣ್ಣ ನೋವು ತೋಡಿಕೊಂಡಿತು.

'ದಿಟ ಕನಣ್ಣ, ಒಳ್ಳೇರಾದಷ್ಟೂ ಮುಳ್ಳು ಮುರಿಯರು ಜಾಸ್ತಿ. ಸತ್ಯಹರಿಶ್ಚಂದ್ರನ್ನೇ ನೋಡಿ, ಒಳ್ಳೇನಾಗವೊತ್ಗೆ ಹೆಂಡ್ರು ಮಕ್ಳ ಮಾರಿಕ್ಯಂಡು ಮಸಾಣ ಕಾದ' ಅಂತ ದುಃಖ ತೋರಿಸಿದೆ.

'ಹ್ಞೂಂಕಲಾ, ಕೆಟ್ಟೋನಾಗ ವೊತ್ಗೆ ಹಿರಣ್ಯಕಶಿಪು ಬೇಗನೆ ಸ್ವರ್ಗ ಸೇರಿಕ್ಯಂಡ. ದುರ್ಯೋಧನ ದ್ರೌಪದಮ್ಮನ ಅವಮಾನ ಮಾಡಿ ಮೆರೆದ್ರೂವೆ ಕೊನೆಗೆ ಸ್ವರ್ಗಕ್ಕೋದ' ಯಂಟಪ್ಪಣ್ಣ ಕಣ್ಣೀರು ಹಾಕತೊಡಗಿತು.

'ಇದೇನಿರ್ಲಾ ನಿಮ್ಮ ಮುಲುಕಾಟ, ಕುತುಗಂಡು ಯಾರಿಗೆ ಸಾಪ ಹಾಕ್ತಿದ್ದರಿ? ರಾಜಕೀಯದೋರು ವೋಟಾಕ್ರಿ ಅಂತ ಕುಕ್ಕರ್ರು, ಸೀರೆ, ದುಡ್ಡು-ಕಾಸು ಹಂಚತಾವ್ರಂತೆ' ತುರೇಮಣೆ ಸಿಡಿದರು.

'ಒಳ್ಳೇತನಕ್ಕೆ ಬೆಲೆ ಇಲ್ಲ ಅಂತ ನಾವು ಮುಕ್ಕುರಿತಿದ್ರೆ ನೀನೊಬ್ಬ, ನಂದೆಲ್ಲಿ ಮಡಗಲಿ ಅಂತ' ಯಂಟಪ್ಪಣ್ಣ ಸಿಟ್ಟಿಗೆ ಬಿದ್ದಿತು.

'ನೋಡಿರ್ಲಾ ಸಾಮಾನ್ಯ ಜನ ತೀರಾ ಒಳ್ಳೇರಾಗ ವೊತ್ಗೇ ಇವೆಲ್ಲಾ ಹಲವಂಗ. ಈಗ ಎಲೆಕ್ಷನ್ ಬಂತಲ್ಲಾ 'ನಾವು ಗೆದ್ರೆ ಉಚಿತ ವಿದ್ಯುತ್, ಉಚಿತ ದವಸ, ಸಾಲ ಮನ್ನಾ, ಲೊಟ್ಟೆ ಲೊಸಕು' ಅಂತ ನಿಮ್ಮನ್ನ ಮಂಗ ಮಾಡ್ತಾವೆ ಕನ್ರೋ' ತುರೇಮಣೆ ದನಿ ಎತ್ತಿದರು.

'ಸಾ, ಮುಂದ್ಲ ಜಲುಮದೇಲಿ ಅದಾನಿ ಮನೇಲೋ ಅಂಬಾನಿ ಮನೇಲೋ ಹುಟ್ಟಲೇಬೇಕು ಅಂತ ಯಂಟಪ್ಪಣ್ಣ ತಯಾರಿ ನಡೆಸ್ತಾ ಅದೆ' ನಾನು ಸತ್ಯವನ್ನ ಸ್ಫೋಟಿಸಿದೆ.

'ಹ್ಞೂಂ ಕಲಾ, ಬರೀ ಕೈ ಅಲ್ಲಾಡಿಸಿಕ್ಯಂಡು ರಾಜಕೀಯಕ್ಕೆ ಬಂದೋರು ಐದೊರ್ಸದೇಲೇ ಕೋಟಿ ಕೋಟಿ ಆಸ್ತಿ ಮಾಡ್ತರಲ್ಲಾ ಯಂಗೆ ಅಂತ ರಮೇಸಣ್ಣ ಬಾಯ ಮ್ಯಾಲೆ ಬೆಳ್ಳಿಟ್ಕಂಡದೆ' ಅಂತ ಯಂಟಪ್ಪಣ್ಣ ಲೇವಡಿ ಮಾಡಿತು.

'ಅಲ್ಲ ಕನ್ರೋ, ಮುಂದ್ಲ ಜಲುಮದೇಲಿ ಒಳ್ಳೇದಾಗ್ಲಿ ಅಂತ ಈ ಜಲ್ಮದೇಲಿ ತೀರಾ ಒಳ್ಳೇರಾಗಿ ಅನ್ಯಾಯಕ್ಕೆ ಮಣೆ ಹಾಕ್ತಿರಲ್ಲೋ ಬಾಯಿ ಸತ್ತ ನನ ಮಕ್ಕಳಾ!' ತುರೇಮಣೆ ಕ್ರಾಂತಿ ಮಾಡತೊಡಗಿದರು.

ಸಂಗತ

ಅರಸೋಣ ಆತ್ಮಶುದ್ಧಿಯ ದಿವ್ಯಮಾರ್ಗ

ತಮ್ಮಲ್ಲಿಗೆ ಭೇಟಿ ನೀಡುವ ಗಾಂಧಿ ದ್ವೇಷಿಗಳನ್ನೂ ಹೊರ ದೇಶಗಳು 'ಗಾಂಧಿ ನಾಡಿನಿಂದ ಬಂದವರು' ಎಂದೇ ಆದರಣೀಯವಾಗಿ ನಡೆಸಿಕೊಳ್ಳುತ್ತವೆ!

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮತ್ತೆ ಮತ್ತೆ ಸಂದಿಗ್ಧಗೊಳ್ಳುವ ಜಗತ್ತು ಬಿಡುಗಡೆಗೆ ಮುಖ ಮಾಡುವುದು ಅವರೆಡೆಗೇ, 'ನನ್ನ ಜೀವನವೇ ನನ್ನ ಸಂದೇಶ' ಎಂಬ ಮಾತನ್ನು ಕೃತಿಯಲ್ಲಿಯೂ ನಿರೂಪಿಸಿ, ಸಮಕಾಲೀನ ಜಾಗತಿಕ ಸ್ಮೃತಿಯಲ್ಲಿ ಅಚ್ಚೊತ್ತಿದ ಅಪರೂಪದ ದಾರ್ಶನಿಕನತ್ತ... ಹೌದು, ಇವತ್ತು ಸಾರ್ವಕಾಲಿಕ ಶ್ರೇಷ್ಠ ಮಾನವೀಯ ಸಂತ ಮಹಾತ್ಮ ಗಾಂಧೀಜಿಯನ್ನು ಜಗತ್ತು ಮತ್ತೊಮ್ಮೆ ಎದೆಯೊಳಗೆ ಬೆಳಕಾಗಿ ತಂದುಕೊಳ್ಳುತ್ತಿದೆ.


ಸರಳತೆಯ ತತ್ವಗಳು ಹಾಗೂ ಅಹಿಂಸಾಚರಣೆಯ ಬದ್ಧತೆಗಳನ್ನು ಹಾಗೆಲ್ಲಾ ಪರಿಪೂರ್ಣವಾಗಿ ಬಾಳಿ, ಬೋಧಿಸಿ, ಜನಸಾಮಾನ್ಯನೊಬ್ಬ ವಿಶ್ವಚರಿತ್ರೆಯಲ್ಲಿ ಅಸಾಮಾನ್ಯನಾಗಿ ಬೆಳೆದುನಿಂತ ಪರಿಯೇ ಕಾಲದ ಅಚ್ಚರಿ. ಗಾಂಧಿಯ ಬದುಕು ಮತ್ತು ಹೋರಾಟದ ಮಾದರಿಗಳು ಮಾನವಜಗತ್ತಿಗೆ ಎಂದಿಗೂ ದಾರಿದೀಪವಾಗಿ ಉಳಿಯುವಂತಹವು. ತಮ್ಮೊಳಗಿನ ಸಹಜ ದೌರ್ಬಲ್ಯಗಳನ್ನು ಮೀರಿ, ವಿನೂತನ ಆತ್ಮಸಂಯಮದ ಮಾರ್ಗವೊಂದನ್ನು ಅನ್ವೇಷಿಸಿಕೊಂಡು ಮಾದರಿ ಚಳವಳಿಯನ್ನು ಮುನ್ನಡೆಸುತ್ತಲೇ ಅವರು ಮಹಾತ್ಮರಾದರು.

ಚರಿತ್ರೆಯಲ್ಲಿನ ಅಸಂಖ್ಯ ಹೋರಾಟಗಳು ರಕ್ತಪಾತದಿಂದ ಕೊನೆಗೊಂಡು ಅಲ್ಪಾಯುಷಿಯಾದದ್ದರ ಸ್ಪಷ್ಟ ಅರಿವಿದ್ದ ಗಾಂಧೀಜಿ, ತಾತ್ವಿಕ ಅಂತ್ಯದೆಡೆಗೆ ಕೊಂಡೊಯ್ಯಬಲ್ಲ ಅಹಿಂಸಾತ್ಮಕ ಹೋರಾಟಕ್ಕೆ ಮುನ್ನುಡಿ ಬರೆದರು. ಬುದ್ಧನ ಶಾಂತಿ, ಏಸುವಿನ ಪ್ರೀತಿ, ಮಹಾವೀರನ ಅಹಿಂಸಾ ತತ್ವಗಳನ್ನು ಒಳಗೊಂಡ ಸತ್ಯಾಗ್ರಹ, ಮೌನ ಪ್ರತಿಭಟನೆ, ಅಸಹಕಾರಗಳಂತಹ ಮೃದುಹರಿತ ಸಾತ್ವಿಕಾಸ್ತ್ರಗಳನ್ನು ಪರಿಚಯಿಸಿದ ಕಾಲಪುರುಷರು. ಎದುರಾಳಿಯ ಹಿಂಸೆ, ದೌರ್ಜನ್ಯ, ಅಟ್ಟಹಾಸಗಳನ್ನು ತಮ್ಮ ಸತ್ಯ, ಶಾಂತಿ, ಅಹಿಂಸೆಯ ಅಸ್ತ್ರದೊಂದಿಗೆ ಗೆಲ್ಲುವ ಹೋರಾಟದ ಮಾದರಿಯೇ ದೈವಿಕ ಎನಿಸುವಂತಹದ್ದು!

'ನನ್ನೊಟ್ಟಿಗಿರುವ ಎಲ್ಲರಿಗೂ ಕನಿಷ್ಠ ಅಗತ್ಯಗಳು ದೊರಕುವವರೆಗೂ ನಾನು ಸರಳವಾಗಿ ಬದುಕುತ್ತೇನೆ' ಅಂದುಕೊಂಡ ಗಾಂಧಿ ನಿಲುವಿಗಿಂತ ದೊಡ್ಡ ಅಧ್ಯಾತ್ಮವೇನಿದೆ ಈ ಜಗತ್ತಿನಲ್ಲಿ? ಕುಟುಂಬದೊಟ್ಟಿಗಿದ್ದು, ಜೀವನಸಂಗ್ರಾಮವನ್ನು ಕಂಡುಂಡು ಲೌಕಿಕದ ಲೋಭವನ್ನು ಅಂಟಿಸಿಕೊಳ್ಳದೆ, 'ಇರಬೇಕು ಇಲ್ಲದಂತಿರಬೇಕು' ಎಂಬಂತೆ ಸಾರ್ವಜನಿಕ ಬದುಕಲ್ಲಿ ತಾತ್ವಿಕತೆಯ ದೀಪಧಾರಿಯಾಗಿ ಸದಾಕಾಲ ಉಳಿದಿರುವುದೂ 'ಗಾಂಧಿ' ಎಂಬ ಸೋಜಿಗವೇ. ಸರಳತೆಯಲ್ಲಿ ದಿವ್ಯತೆಯನ್ನೂ ಸಹಜತೆಯಲ್ಲಿ ಸೌಂದರ್ಯವನ್ನೂ ಸ್ವಚ್ಛತೆಯಲ್ಲಿ ದೈವತ್ವವನ್ನೂ ಕಂಡವರು ಗಾಂಧಿ. ಬದುಕಿನುದ್ದಕ್ಕೂ ಆಡಂಬರಕ್ಕಿಂತ ಆಚರಣೆಗೆ, ವಿಜೃಂಭಣೆಗಿಂತ ವಿಚಾರಗಳಿಗೆ ಪ್ರಾಶಸ್ತ್ಯ ಸಿಗಬೇಕು, 'ಅದ್ಧೂರಿಯ ನೆಪದಲ್ಲಿ ಮಿತಿರಹಿತವಾಗಿ, ಮತಿರಹಿತವಾಗಿ ಮಾಡುವ ದುಂದುವೆಚ್ಚ ಮತ್ತು ವಸ್ತುಗಳನ್ನು ಅರ್ಧಂಬರ್ಧ ಬಳಸಿ ಬಿಸಾಕುವ ಪ್ರವೃತ್ತಿ ಅಪಾಯಕಾರಿ' ಎಂದು ಎಚ್ಚರಿಸಿದ್ದರು ಗಾಂಧಿ.

ಗೀತೆ, ಕುರಾನ್, ಬೈಬಲ್, ಟಾಲ್‌ಸ್ಟಾಯ್ ಮತ್ತು ರಸ್ಕಿನ್ ಕೃತಿಗಳ ಆಳ ಅಧ್ಯಯನದಲ್ಲಿ ಮಾನವ ಜಗತ್ತಿನ ಅಭ್ಯುದಯವನ್ನು ಕಂಡುಕೊಂಡರು ಗಾಂಧೀಜಿ. ಅವರ ವ್ಯಕ್ತಿತ್ವ ಸ್ವಾತಂತ್ರ್ಯ ಹೋರಾಟಕ್ಕಷ್ಟೇ ಸೀಮಿತವಾಗದೆ ಅಸ್ಪೃಶ್ಯತೆ ನಿವಾರಣೆ, ನೀಲಿ ಬೆಳೆಗಾರರ ಸಂಕಷ್ಟ, ಗ್ರಾಮೋದ್ಧಾರ, ಶಿಕ್ಷಣ, ಆರ್ಥಿಕತೆ, ಪರಿಸರ ರಕ್ಷಣೆ, ಪತ್ರಿಕಾ ರಂಗ, ಮೌಲ್ಯಗಳ ಮರುಸ್ಥಾಪನೆಯಂತಹ ಕಾರ್ಯಗಳಲ್ಲೂ ಗಾಂಧೀಜಿಯ ಪ್ರಭಾವಗಳು ಢಾಳಾಗಿವೆ.

'ವ್ಯಕ್ತಿಯೊಬ್ಬ ತನ್ನೊಳಗೆ ಬೆಳೆಯುತ್ತಾ ಸಮಾಜದ ಬೆಳವಣಿಗೆಯ ಭಾಗವಾಗಬೇಕು. ಅಂತಹ ಬದುಕಲ್ಲಿ ಸಮಾಧಾನ, ಸಂತೃಪ್ತಿ, ಧನ್ಯತೆಯು ಪ್ರಾಪ್ತಿಯಾಗುತ್ತದೆ' ಅನ್ನುವುದು ಗಾಂಧಿಗ್ರಹಿಕೆ. ಪರಿಸರ ಪ್ರಜ್ಞೆಯೆಂಬುದೇ ಹುಟ್ಟಿರದ ಕಾಲದಲ್ಲಿ 'ಪಶ್ಚಿಮದ ಆಧುನಿಕ ನಾಗರಿಕತೆ'ಯು ಉಳಿದ ಜಗತ್ತನ್ನು ತನ್ನ ಅನುಭೋಗಕ್ಕಿರುವ ಭೌತವಸ್ತುವೆಂಬಂತೆ ಪರಿಗಣಿಸುವ ಮೂಲಕ ಅವುಗಳ ಆಧ್ಯಾತ್ಮಿಕ ಅಸ್ತಿತ್ವವನ್ನೇ ನಿರ್ಲಕ್ಷಿಸುತ್ತದೆ' ಎಂಬ ಕಟುಸತ್ಯವನ್ನು ಮನವರಿಕೆ ಮಾಡಲೆತ್ನಿಸಿದ್ದರು. ಅವರಲ್ಲಿ ಪ್ರಕೃತಿಯೊಟ್ಟಿಗಿನ ನವಿರು ಸಂಬಂಧಕ್ಕೂ ಸಕಲ ಜೀವರಾಶಿಗಳಲ್ಲಿನ ದೈವತ್ವಭಾವಕ್ಕೂ ಪ್ರಾಧಾನ್ಯವಿತ್ತು.



ಗಾಂಧೀಜಿ ಬೋಧಿಸಿದ ದುಡಿಮೆರಹಿತ ಸಂಪತ್ತು, ಆತ್ಮಸಾಕ್ಷಿರಹಿತ ಭೋಗ, ನೀತಿರಹಿತ ವಾಣಿಜ್ಯ, ತತ್ವರಹಿತ ರಾಜಕೀಯ, ಶೀಲವಿಲ್ಲದ ಶಿಕ್ಷಣ, ತ್ಯಾಗವಿಲ್ಲದ ಪೂಜೆ, ಮಾನವೀಯತೆ ಇಲ್ಲದ ವಿಜ್ಞಾನಗಳೆಂಬ ಏಳು ಸಾಮಾಜಿಕ ಪಾಪಗಳನ್ನು ಜಗತ್ತು ಮರೆತರೆ ಅಪಾಯ. ಬರೀ ಚಿತ್ರಪಟಗಳನ್ನಿಟ್ಟು, ವಿಗ್ರಹ ಮಾಡಿ ನಿಲ್ಲಿಸಿ ಅವರಿಗೆ ದೇವರ ಪಟ್ಟ ಕಟ್ಟಿ ಆರಾಧಿಸುವ ಬದಲು ಯುವ ಮನಸುಗಳ ಎದೆಯೊಳಗೆ ಗಾಂಧಿಚಿಂತನೆಯನ್ನು ಬಿತ್ತಬೇಕಾದ್ದು ಇವತ್ತಿನ ಜರೂರು.

ಜಗತ್ತಿನ ಬಹುತೇಕ ದೇಶಗಳಲ್ಲಿನ ರಸ್ತೆ, ಸ್ಮಾರಕ, ಸಂಸ್ಥೆಗಳಿಗೆ ಗಾಂಧಿಯ ಹೆಸರಿಟ್ಟಿರುವುದು, ವಿವಿಧ ದೇಶಗಳ ಪ್ರಮುಖ ಎರಡುನೂರ ಎಪ್ಪತ್ತು ವಿಶ್ವವಿದ್ಯಾಲಯಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳಿರುವುದು ಅವರ ಪ್ರಸ್ತುತತೆಗೆ ನಿದರ್ಶನ. ಗಾಂಧಿಯವರ ಬೋಧನೆ, ತತ್ವಾದರ್ಶಗಳಿಗೆ ಸಾರ್ವಕಾಲಿಕ ಮಹತ್ವವಿದೆ. ಇತರ ದೇಶಗಳೆಲ್ಲಾ ತಮ್ಮಲ್ಲಿಗೆ ಭೇಟಿ ನೀಡುವ ಗಾಂಧಿ ದ್ವೇಷಿಗಳನ್ನೂ 'ಗಾಂಧಿ ನಾಡಿನಿಂದ ಬಂದವರು' ಎಂದೇ ಆದರಣೀಯವಾಗಿ ನಡೆಸಿಕೊಳ್ಳುತ್ತವೆ!

ಹುತಾತ್ಮರಾದ ಎಪ್ಪತ್ತೈದು ವರ್ಷಗಳ ನಂತರವೂ ಗಾಂಧಿಯೆಂಬ ಅರಿವಿನ ಬೆಳಕಿನಲ್ಲಿ ನಾವೆಲ್ಲ ಒಳಗಿನ ಆತ್ಮಾನುಸಂಧಾನದ ಮತ್ತು ಆತ್ಮಶುದ್ಧಿಯ ದಿವ್ಯ ಮಾರ್ಗವನ್ನು ಅರಸಬೇಕಾದ್ದು, ಅನುಸರಿಸಬೇಕಾದ್ದು ಅಗತ್ಯ. ಗಾಂಧಿಸ್ಮೃತಿಯು ಸಾತ್ವಿಕಪ್ರಜ್ಞೆಯಾಗಿ, ಆತ್ಮಸಾಕ್ಷಿಯಾಗಿ ಎಲ್ಲ ಕಾಲಕ್ಕೂ ಉಳಿದಿರುತ್ತದೆ.

ವಾಚಕರ ವಾಣಿ

ಸಚಿವರ ಹತ್ಯೆ: ಸತ್ಯಸಂಗತಿ ಹೊರಬರಲಿ

ಒಡಿಶಾ ಆರೋಗ್ಯ ಸಚಿವ ನಬ ಕಿಶೋರ್ ದಾಸ್ ಅವರನ್ನು ಪೊಲೀಸ್ ಅಧಿಕಾರಿಯೊಬ್ಬರು ಹತ್ಯೆ ಮಾಡಿದ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಅಲ್ಲಿನ ಪೊಲೀಸರು ಹೇಳಿಕೆ ನೀಡಿದ್ದಾರೆ. ಏಳೆಂಟು ವರ್ಷಗಳಿಂದ ತಮ್ಮ ಗಂಡ ಮಾನಸಿಕ ಅಸ್ವಸ್ಥನಾಗಿದ್ದುದಾಗಿ ಆರೋಪಿ ಅಧಿಕಾರಿಯ ಪತ್ನಿ ಹೇಳಿದ್ದಾರೆ. ಆದರೆ ಈ ಹೇಳಿಕೆ ಎಷ್ಟೊಂದು ಅಸಮಂಜಸ ಎನಿಸುತ್ತದೆ. ಮಾನಸಿಕ ಅಸ್ವಸ್ಥನಾಗಿದ್ದರೂ ಇಷ್ಟು ವರ್ಷಗಳ ಕಾಲ ಆತ ಕೆಲಸದಲ್ಲಿ ಮುಂದುವರಿದಿದ್ದು ಹೇಗೆ ಎಂಬ ಪ್ರಶ್ನೆ ಮೂಡುತ್ತದೆ. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಸತ್ಯಸಂಗತಿ ಹೊರತರಬೇಕಾಗಿದೆ.

ಪ್ರದೀಪ್ ಶಾಕ್ಯ, ಬೆಳ್ತಂಗಡಿ

ಕಳಂಕ ತೊಡೆದರಷ್ಟೇ ಜನರ ವಿಶ್ವಾಸ ಗಳಿಕೆ

ಯಾರು ಏನೇ ಹೇಳಿದರೂ ತಮ್ಮ ಮತ್ತು ಎಚ್.ಡಿ. ಕುಮಾರಸ್ವಾಮಿಯವರ ನಡುವೆ ಯಾವುದೇ ಭಿನ್ನಾಭಿಪ್ರಾಯ ಸೃಷ್ಟಿಸಲು ಸಾಧ್ಯವಿಲ್ಲ ಎಂದಿದ್ದಾರೆ ಎಚ್.ಡಿ.ರೇವಣ್ಣ. ಜನ ಗಮನಿಸುತ್ತಿರುವಂತೆ, ಭಿನ್ನಾಭಿಪ್ರಾಯ ಸೃಷ್ಟಿಯಾಗುತ್ತಿರುವುದು, ಗೊಂದಲ ಏರ್ಪಡುತ್ತಿರುವುದು ಇತರರ ಹೇಳಿಕೆಗಳಿಂದಲ್ಲ, ಬದಲಾಗಿ ಕುಟುಂಬ ಸದಸ್ಯರು ಮತ್ತು ಅವರ ಹಿಂಬಾಲಕರು ಎನಿಸಿಕೊಂಡವರ ಹೇಳಿಕೆಗಳಿಂದ! ನೆರೆಯ ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಪ್ರಬಲವಾಗಿದ್ದು ಸ್ವಂತ ಬಲದಿಂದ ಸರ್ಕಾರ ರಚಿಸಿ ಆಡಳಿತ ನಡೆಸುವಲ್ಲಿ ಯಶಸ್ವಿಯಾಗಿವೆ. ಆದರೆ, ಕರ್ನಾಟಕದ ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ ಈವರೆಗೆ ಸ್ವಸಾಮರ್ಥ್ಯದಿಂದ ಸರ್ಕಾರ ರಚಿಸಲು ಸಾಧ್ಯವಾಗದಿರುವುದಕ್ಕೆ ಅದು ಕುಟುಂಬ ರಾಜಕಾರಣ, ಸ್ವಾರ್ಥ ಮತ್ತು ಸಮಯಸಾಧಕತನದ ಆರೋಪದಿಂದ ಮುಕ್ತವಾಗದಿರುವುದು ಮತ್ತು ಅದನ್ನು ಹೋಗಲಾಡಿಸುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನೇ ಮಾಡದೆ, ಮಾಡಿದ್ದ ತಪ್ಪುಗಳನ್ನೇ ಮುಂದುವರಿಸುತ್ತಾ, ಜನರ ಪೂರ್ಣ ವಿಶ್ವಾಸ ಗಳಿಸುವಲ್ಲಿ ದಯನೀಯವಾಗಿ ಸೋತಿರುವುದು ಕಾರಣ.

ತನಗೆ ಅಂಟಿಕೊಂಡಿರುವ ಈ ಎಲ್ಲ ಕಳಂಕಗಳನ್ನೂ ತೊಳೆದುಕೊಂಡು, ಜನತೆಯ ಪೂರ್ಣ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾದರೆ ಮಾತ್ರ ಪಕ್ಷ ಗಟ್ಟಿಗೊಳ್ಳಬಲ್ಲದು, ಸ್ವಂತ ಬಲದ ಮೇಲೆ ಸರ್ಕಾರವನ್ನೂ ರಚಿಸಬಲ್ಲದು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಬರೀ ಅಸ್ತಿತ್ವಕ್ಕಾಗಿಯೇ ಹೋರಾಡಬೇಕಾಗಬಹುದು. ಇಂದಿನ ರಾಜಕೀಯ ಸ್ಥಿತ್ಯಂತರದ ಸಂದರ್ಭದಲ್ಲಿ, ಇತರ ರಾಜ್ಯಗಳಲ್ಲಿರುವಂತೆ ರಾಷ್ಟ್ರೀಯ ಪಕ್ಷಗಳಿಗೆ ಪರ್ಯಾಯವಾಗಿ ಕರ್ನಾಟಕದಲ್ಲೂ ವಿಶ್ವಾಸಾರ್ಹ ಪ್ರಾದೇಶಿಕ ಪಕ್ಷವೊಂದರ ಅವಶ್ಯಕತೆಯಿದೆ. ತನ್ನ ಕರ್ತವ್ಯವನ್ನರಿತು, ಈ ದಿಸೆಯಲ್ಲಿ ಜೆಡಿಎಸ್ ತನ್ನನ್ನು ತೊಡಗಿಸಿಕೊಳ್ಳಲಿ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಅವರೇ ಮಾಲೀಕರು

ಶೇ 66ರಷ್ಟು ಮಹಿಳೆಯರು
ಮನೆಯ ಮಾಲೀಕರು
(ಪ್ರ.ವಾ., ಜ. 30).
ಅಂಕಿಸಂಖ್ಯೆ ತಪ್ಪಾಗಿರಬಹುದು
ನೋಡಿ ಸ್ವಾಮಿ,
ಮನೆ ಮಾಲೀಕರು
ಅವರೇ ನೂರಕ್ಕೆ ನೂರು
ಮನೆಗಾಗಲಿ, ಮನಸಿಗಾಗಲಿ,
ಬದುಕಿಗಾಗಲಿ ಅವರಿಗೆ
ಸರಿಸಾಟಿ ಹೇಳಿ
ಇರುವುದಾದರೂ ಯಾರು?

ಸಂತೆಬೆನ್ನೂರು ಫೈಜ್ನಟ್ರಾಜ್
ಸಂತೆಬೆನ್ನೂರು

ಎಲ್ಲ ಇಲಾಖೆಗಳಲ್ಲಿ ನಡೆಯಲಿ ಕಾರ್ಯಕ್ಷಮತೆ ಪರೀಕ್ಷೆ

ಲಿಪಿಕ ಸಿಬ್ಬಂದಿ ವರ್ಗದವರಲ್ಲಿ ಕಾರ್ಯಕ್ಷಮತೆ ಹೆಚ್ಚಿಸುವ ಉದ್ದೇಶಕ್ಕಾಗಿ ಶಿಕ್ಷಣ ಇಲಾಖೆ ನಡೆಸಲು ನಿರ್ಧರಿಸಿದ್ದ ಪರೀಕ್ಷೆಯನ್ನು ಸಿಬ್ಬಂದಿಯ ಮನೋಬಲ ಕುಗ್ಗುತ್ತದೆ ಎಂಬ ಕುಂಟು ನೆಪ ನೀಡಿ ರದ್ದುಗೊಳಿಸಿರುವುದು ಸರಿಯಾದ ನಿರ್ಧಾರವಲ್ಲ. ಸರ್ಕಾರಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಹಲವು ಸಿಬ್ಬಂದಿಯ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದೇ ಇರುವುದನ್ನು ಕಾಣಬಹುದು. ಈ ತೆರನಾದ ನಿರ್ವಹಣೆಯಿಂದ ವಿವಿಧ ಯೋಜನೆಗಳ ಗುರಿ ತಲುಪಲು, ಸಾರ್ವಜನಿಕರಿಗೆ ಒದಗಿಸಬೇಕಾದ ಅಗತ್ಯ ಸೇವೆಗಳನ್ನು ಒದಗಿಸಲು ಬಹುತೇಕ ಇಲಾಖೆಗಳು ವಿಫಲವಾಗುತ್ತಿವೆ. ಹೀಗಾಗಿ ಆಡಳಿತ ಸುಧಾರಣಾ ಆಯೋಗದ ವರದಿಗಳಲ್ಲೂ ಸರ್ಕಾರಿ ನೌಕರರ ಕಾರ್ಯಕ್ಷಮತೆ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿಸಲಾಗಿರುತ್ತದೆ. ಇಂಥ ಪರೀಕ್ಷೆಗಳಿಂದ ನೌಕರರಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿ, ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂಬ ಉದ್ದೇಶಕ್ಕಾದರೂ ಕಲಿತು, ಕ್ಷಮತೆ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಯಾವುದೇ ಪರೀಕ್ಷೆ ಇಲ್ಲದಿದ್ದಲ್ಲಿ, ಹೇಗಿದ್ದರೂ ಕಾಲಕಾಲಕ್ಕೆ ಸಂಬಳ, ಮುಂಬಡ್ತಿ ಸಿಗುತ್ತದೆ ಎಂಬ ಮನೋಭಾವ ಬೆಳೆದು, ನೌಕರರು ಜಡವಾಗಿ ಕೆಲಸದಲ್ಲಿ ದಕ್ಷತೆಯೇ ಇಲ್ಲದಂತಾಗುತ್ತದೆ. ಎಲ್ಲಾ ಇಲಾಖೆಗಳಲ್ಲಿ ಕಾರ್ಯಕ್ಷಮತೆ ಪರೀಕ್ಷೆ ನಡೆಸಿ ಆಡಳಿತದಲ್ಲಿ ಸುಧಾರಣೆ ತರುವ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ಚಿಂತಿಸಬೇಕಿದೆ.

ಮಧು ಎನ್. ಬೈಲಪ್ಪ, ನಾರನಹಳ್ಳಿ, ದೊಡ್ಡಬಳ್ಳಾಪುರ

ರೈಲು ಸೇವೆ ಪುನಃ ಆರಂಭಿಸಿ

ಬೆಂಗಳೂರು– ತುಮಕೂರು ರೈಲು ಮಾರ್ಗದಲ್ಲಿ ನಿತ್ಯ ಬೆಳಿಗ್ಗೆ 7.50ಕ್ಕೆ ಬೆಂಗಳೂರು ಸಿಟಿ ರೈಲು ನಿಲ್ದಾಣದಿಂದ ಹೊರಡುತ್ತಿದ್ದ ಪ್ಯಾಸೆಂಜರ್ ರೈಲು ದೊಡ್ಡಬೆಲೆ ರೈಲು ನಿಲ್ದಾಣಕ್ಕೆ 9.10ಕ್ಕೆ ತಲುಪುತ್ತಿತ್ತು. ಹಾಗೆಯೇ ಸಂಜೆ 6.30ಕ್ಕೆ ದೊಡ್ಡಬೆಲೆ ರೈಲು ನಿಲ್ದಾಣ ತಲುಪಿ, ಸಂಜೆ 7.15ಕ್ಕೆ ಬೆಂಗಳೂರು ಸಿಟಿ ರೈಲು ನಿಲ್ದಾಣ ತಲುಪುತ್ತಿತ್ತು. ಆದರೆ ಈ ಎರಡೂ ರೈಲುಗಳನ್ನು ಕೋವಿಡ್ ಸಂದರ್ಭದಲ್ಲಿ ರದ್ದು ಮಾಡಿದ್ದು ಪುನಃ ಇವುಗಳ ಸಂಚಾರ ಆರಂಭಿಸಿಲ್ಲ.

ದೊಡ್ಡಬೆಲೆ ಹಾಗೂ ಸುತ್ತಮುತ್ತಲಿನ ಗ್ರಾಮಗಳು ತುಮಕೂರು ಮತ್ತು ಬೆಂಗಳೂರು ನಗರಗಳಿಂದ ಕೇವಲ 35- 40 ಕಿ.ಮೀ. ಅಂತರದಲ್ಲಿದ್ದರೂ ಸಾರಿಗೆ ಸಂಚಾರ ವ್ಯವಸ್ಥೆ ಹಾಗೂ ರಸ್ತೆ ಸೌಕರ್ಯಗಳು ಉತ್ತಮವಾಗಿಲ್ಲ. ಇದರಿಂದ ಜನರು ಸ್ವಂತ ವಾಹನಗಳನ್ನು ಅವಲಂಬಿಸಿದ್ದಾರೆ. ವಿದ್ಯಾರ್ಥಿಗಳು, ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವವರು ಸಮಯಕ್ಕೆ ಸರಿಯಾಗಿ ಕಚೇರಿಗೆ ತಲುಪುವುದು ಪ್ರಯಾಸದ ಕೆಲಸವಾಗಿದೆ. ಆದಕಾರಣ, ಕೋವಿಡ್ ಅವಧಿಯ ಪೂರ್ವದಲ್ಲಿ ಇದ್ದ ರೈಲು ಗಾಡಿಗಳ ಸೇವೆಯನ್ನು ಪುನಃ ಆರಂಭಿಸಿದರೆ ಬಹಳ ಅನುಕೂಲವಾಗುತ್ತದೆ. ರೈಲ್ವೆ ಇಲಾಖೆ ಈ ಬಗ್ಗೆ ಗಮನಹರಿಸಬೇಕು.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಕೈ’ ಬಲಪಡಿಸಿದ ಜೋಡೊ ಯಾತ್ರೆ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ನಡೆಸಿದ ‘ಭಾರತ್ ಜೋಡೊ ಯಾತ್ರೆ’ಗೆ ಕಾಶ್ಮೀರದ ಶ್ರೀನಗರದಲ್ಲಿ ಸೋಮವಾರ ತೆರೆ ಬಿದ್ದಿದೆ. ಆದರೆ, ಯಾತ್ರೆಯು ದೊಡ್ಡ ಮಟ್ಟದ ಪರಿಣಾಮವನ್ನೇ ಬೀರಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಜನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಮುನ್ನೆಲೆಗೆ ತಂದಿದೆ; ಪಕ್ಷದ ಕಾರ್ಯಕರ್ತರಲ್ಲಿ ಹುರುಪು ತುಂಬಿದೆ. ಲೋಕಸಭೆಗೆ ಮುಂದಿನ ವರ್ಷ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷದ ಸಾಧ್ಯತೆಗಳು ಹಿಗ್ಗಬಹುದು ಎಂಬ ನಿರೀಕ್ಷೆಯನ್ನು ಪಕ್ಷದ ಕಾರ್ಯಕರ್ತರಲ್ಲಿ ಮೂಡಿಸಿದೆ. ಹಲವು ವಿವಾದಗಳಿಗೂ ಸಾಕ್ಷಿಯಾಗಿದೆ. 2024ರ ಚುನಾವಣೆಯನ್ನು ಹೇಗೆ ಎದುರಿಸಬೇಕು? –ಕಾಂಗ್ರೆಸ್ ಪಕ್ಷದ ಮುಂದೆ ನಿಂತಿದ್ದ ಈ ಬಹುದೊಡ್ಡ ಪ್ರಶ್ನೆಗೆ ಸ್ವಲ್ಪ ಮಟ್ಟಿನ ಉತ್ತರವನ್ನು ಈ ಯಾತ್ರೆಯು ಕೊಟ್ಟಿದೆ. ಆದರೆ ಪಕ್ಷದ ನಿರೀಕ್ಷೆಯಂತೆ ಯಾತ್ರೆಯು ಚುನಾವಣೆಯಲ್ಲಿ ನೆರವಾಗಬಹುದೇ ಎಂಬುದಕ್ಕೆ ಈಗ ಉತ್ತರವೇನೂ ಸಿಕ್ಕಿಲ್ಲ ಎಂದು ಕಾಂಗ್ರೆಸ್ ಪಕ್ಷವನ್ನು ಹತ್ತಿರದಿಂದ ಗಮನಿಸುತ್ತಿರುವವರು ಹೇಳುತ್ತಿದ್ದಾರೆ.

ಚುನಾವಣೆಯಲ್ಲಿ ನೆರವಾಗಲಿ ಆಗದೇ ಇರಲಿ, ಯಾತ್ರೆಯು ಇತಿಹಾಸ ನಿರ್ಮಿಸಿದೆ ಎಂಬುದು ನಿಜ. ಸ್ವಾತಂತ್ರ್ಯಾನಂತರ, ರಾಜಕೀಯ ನಾಯಕನೊಬ್ಬ ನಡೆಸಿದ ಅತಿ ದೊಡ್ಡ ಯಾತ್ರೆ ಎಂದು ಇದು ದಾಖಲಾಗಿದೆ. ರಾಹುಲ್ ಗಾಂಧಿ ಅವರಿಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ ಮತ್ತು ಅವರೊಬ್ಬ ಅರೆಕಾಲಿಕ ರಾಜಕಾರಣಿ ಎಂಬ ಆರೋಪವನ್ನು ರಾಜಕೀಯ ಪ್ರತಿಸ್ಪರ್ಧಿಗಳು ಪದೇ ಪದೇ ಮಾಡಿದ್ದರು. ಆದರೆ ಯಾತ್ರೆಯು ರಾಹುಲ್ ಅವರ ವರ್ಚಸ್ಸನ್ನು ಬದಲಾಯಿಸಿದೆ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ.

ರಾಹುಲ್ ಅವರ ವರ್ಚಸ್ಸು ಬದಲಾವಣೆಯು ಯಾತ್ರೆಯ ಉದ್ದೇಶವಾಗಿರಲಿಲ್ಲ. ಆದರೆ, ಯಾತ್ರೆ ಫಲವಾಗಿ ಅವರ ವರ್ಚಸ್ಸು ಬದಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ಪಕ್ಷದ ಮುಖಂಡ ದಿಗ್ವಿಜಯ್ ಸಿಂಗ್ ಮತ್ತು ಜೈರಾಮ್ ಅವರು ಯಾತ್ರೆಯ ರೂವಾರಿಗಳು. ಆರ್ಥಿಕ ಅಸಮಾನತೆಗಳು, ಸಾಮಾಜಿಕ ಧ್ರುವೀಕರಣ ಮತ್ತು ರಾಜಕೀಯ ನಿರಂಕುಶಾಧಿಕಾರದಿಂದ ದೇಶದ ಮೇಲೆ ಯಾವ ಪರಿಣಾಮಗಳು ಆಗಬಹುದು ಎಂಬ ಸಂದೇಶವನ್ನು ಜನರಿಗೆ ಮನದಟ್ಟು ಮಾಡಿಕೊಡುವಲ್ಲಿ ಯಾತ್ರೆಯು ಯಶಸ್ವಿಯಾಗಿದೆ ಎಂದು ಜೈರಾಮ್ ಹೇಳಿದ್ದಾರೆ.

ತಮ್ಮ ಬೆಂಬಲಿಗರು ಮಾತ್ರವಲ್ಲದೆ ಟೀಕಾಕಾರರು ಹಾಗೂ ಪ್ರತಿಸ್ಪರ್ಧಿಗಳ ಗಮನವನ್ನೂ ಸುಮಾರು 4,000 ಕಿ.ಮೀ. ಉದ್ದದ ಯಾತ್ರೆಯಲ್ಲಿ ರಾಹುಲ್ ಸೆಳೆದಿದ್ದಾರೆ. ಕಮಲ್‌ಹಾಸನ್, ರಘುರಾಮ್ ರಾಜನ್ ಅವರಂತಹ ಗಣ್ಯರು ಯಾತ್ರೆಯಲ್ಲಿ ಹೆಜ್ಜೆ ಹಾಕಿದ್ದಾರೆ.

ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ಹಲವು ಮುಖಂಡರು ಯಾತ್ರೆಯ ಜೊತೆಯಾಗಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಲವು ಬಾರಿ ಯಾತ್ರೆಯನ್ನು ಕೂಡಿಕೊಂಡಿದ್ದಾರೆ. ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಡ್ಯದಲ್ಲಿ ಒಮ್ಮೆ ಮತ್ತು ದೆಹಲಿಯಲ್ಲಿ ಒಮ್ಮೆ ಯಾತ್ರೆಯ ಭಾಗವಾಗಿದ್ದಾರೆ. ಯಾತ್ರೆಯು ರಾಜ್ಯಗಳಿಗೆ ಪ್ರವೇಶಿಸಿದಾಗ ರಾಜ್ಯಗಳ ಹಿರಿಯ ಮುಖಂಡರು ರಾಹುಲ್ ಅವರ ಜೊತೆ ಹೆಜ್ಜೆ ಹಾಕಿದ್ದಾರೆ.

ಹಲವು ಮೈಲುಗಲ್ಲುಗಳಿಗೂ ಯಾತ್ರೆಯು ಸಾಕ್ಷಿಯಾಗಿದೆ. ಹೈದರಾಬಾದ್‌ನ ಚಾರ್‌ಮಿನಾರ್‌ನಲ್ಲಿ ತ್ರಿವರ್ಣ ಧ್ವಜಾರೋಹಣ ಅದರಲ್ಲಿ ಒಂದು. ರಾಹುಲ್ ಅವರ ತಂದೆ, ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಜೀವ್ ಗಾಂಧಿ ಅವರು 32 ವರ್ಷಗಳ ಹಿಂದೆ ಇದೇ ಸ್ಥಳದಿಂದ ‘ಸದ್ಭಾವನಾ ಯಾತ್ರೆ’ ಆರಂಭಿಸಿದ್ದರು.


ಯಾತ್ರೆಯ ಮಧ್ಯದಲ್ಲಿ ಆಗಾಗ ಒಂದು–ಎರಡು ದಿನಗಳ ವಿರಾಮ ನೀಡಲಾಗಿತ್ತು. ಕ್ರಿಸ್‌ಮಸ್–ಹೊಸ ವರ್ಷದ ಸಂದರ್ಭದಲ್ಲಿ ಒಂಬತ್ತು ದಿನ ವಿರಾಮ ನೀಡಲಾಗಿತ್ತು. ಜನವರಿ 3ರಂದು ಪುನರಾರಂಭಗೊಂಡಿತು. ನಂತರ ಯಾತ್ರೆಯು ಉತ್ತರ ಪ್ರದೇಶ, ಹರಿಯಾಣ, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಿಗೆ ಹೋಯಿತು. ಉತ್ತರ ಭಾರತದಲ್ಲಿ ಯಾತ್ರೆಗೆ ಜನ ಸೇರುವುದು ಕಷ್ಟ ಎಂದು ವಿಶ್ಲೇಷಕರು ಭಾವಿಸಿದ್ದರು. ಆದರೆ, ಉತ್ತರ ಭಾರತದ ಎಲ್ಲ ರಾಜ್ಯಗಳಲ್ಲಿಯೂ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಕಾಶ್ಮೀರ ಕಣಿವೆ ಪ್ರವೇಶಿಸಿದ ಬಳಿಕ, ಶುಕ್ರವಾರ ನಡಿಗೆಯನ್ನು ರದ್ದುಪಡಿಸಬೇಕಾದ ಪರಿಸ್ಥಿತಿಯೂ ತಲೆದೋರಿತು. ಯಾತ್ರೆಯ ಹಾದಿಯಲ್ಲಿ ದೊಡ್ಡ ಗುಂಪೊಂದು ಎದುರಾಯಿತು. ಅಗತ್ಯ ಭದ್ರತೆ ಇರಲಿಲ್ಲ. ಭದ್ರತಾ ಲೋಪವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿತು. ಆದರೆ, ಪೊಲೀಸರು ನಿರಾಕರಿಸಿದ್ದಾರೆ.

ಲಾಲ್ ಚೌಕದ ಐತಿಹಾಸಿಕ ಗಡಿಯಾರ ಗೋಪುರದಲ್ಲಿ ರಾಹುಲ್ ಅವರು ಭಾನುವಾರ ತ್ರಿವರ್ಣ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಅತ್ಯಂತ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸೋಮವಾರ ಬೆಳಿಗ್ಗೆ ಧ್ವಜಾರೋಹಣ ಮಾಡುವುದರೊಂದಿಗೆ ಯಾತ್ರೆಯು ಕೊನೆಗೊಂಡಿತು.




ಕನ್ಯಾಕುಮಾರಿಯಲ್ಲಿ ಯಾತ್ರೆ ಆರಂಭವಾದ ಕ್ಷಣ



ಶ್ರೀನಗರದಲ್ಲಿ ಯಾತ್ರೆ ಸಮಾರೋಪ

ದಕ್ಷಿಣದಿಂದ ಉತ್ತರದತ್ತ...

ದೇಶದ ದಕ್ಷಿಣ ತುದಿಯಿಂದ ಉತ್ತರದತ್ತ ಸಾಗಿದ ‘ಭಾರತ್ ಜೋಡೊ ಯಾತ್ರೆ’ಗೆ ಕಾಂಗ್ರೆಸ್ಸೇತರ ಪಕ್ಷಗಳ ನಾಯಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಗಣ್ಯರು ಜತೆಯಾಗಿದ್ದರು. ಭಿನ್ನ ಸಿದ್ಧಾಂತದ ಪಕ್ಷಗಳು, ಭಿನ್ನ ಕ್ಷೇತ್ರಗಳ ಹೋರಾಟಗಾರರು, ಬೇರೆ–ಬೇರೆ ಕ್ಷೇತ್ರಗಳ ಗಣ್ಯರು ಈ ಯಾತ್ರೆಯಲ್ಲಿ ಭಾಗಿಯಾಗಿದ್ದರು



- ಜಮ್ಮು–ಕಾಶ್ಮೀರದಲ್ಲಿ ಯಾತ್ರೆ ಸಾಗುವ ವೇಳೆ ನಮ್ಮನ್ನು ಭೇಟಿ ಮಾಡಿ ಎಂದು ಕಾಶ್ಮೀರಿ ಪಂಡಿತರು ರಾಹುಲ್ ಗಾಂಧಿಗೆ ಆಹ್ವಾನ ನೀಡಿದ್ದರು. ಸಂವಾದವನ್ನೂ ನಡೆಸಿದರು. ಎನ್‌ಸಿಯ ಉಮರ್ ಅಬ್ದುಲ್ಲಾ, ಪಿಡಿಪಿಯ ಮೆಹಬೂಬಾ ಮುಫ್ತಿ ಯಾತ್ರೆಯಲ್ಲಿ ಭಾಗಿಯಾಗಿದ್ದರು. ತಮಿಳು ಸಾಹಿತಿ ಪೆರುಮಾಳ್ ಮುರುಗನ್ ಕಾಶ್ಮೀರದಲ್ಲಿ ರಾಹುಲ್ ಒಟ್ಟಿಗೆ ಹೆಜ್ಜೆಹಾಕಿದ್ದರು
- ಬಿಗ್ ಬಾಸ್ –7 ಖ್ಯಾತಿಯ ಕಾಮ್ಯಾ ಪಂಜಾಬಿ ಸೇರಿ, ಪಂಜಾಬ್‌ನಲ್ಲಿ ಹಲವು ಕಲಾವಿದರು ಯಾತ್ರೆಯಲ್ಲಿ ಭಾಗಿಯಾಗಿದ್ದರು.
- ಹರಿಯಾಣದಲ್ಲೂ ಹಲವು ಗಣ್ಯರು ಯಾತ್ರೆಗೆ ಬೆಂಬಲ ಸೂಚಿಸಿ ರಾಹುಲ್ ಒಟ್ಟಿಗೆ ಹೆಜ್ಜೆ ಹಾಕಿದ್ದರು
- ಯಾತ್ರೆಯು ದೆಹಲಿಯಲ್ಲಿ ಇದ್ದಾಗ, ತಮಿಳು ನಟ ಮತ್ತು ಎಂಎನ್‌ಎಂ ಮುಖ್ಯಸ್ಥ ಕಮಲ್ ಹಾಸನ್ ಅವರು ರಾಹುಲ್‌ಗೆ ಜತೆಯಾದರು. ರಾಹುಲ್ ಮತ್ತು ಕಮಲ್ ಹಾಸನ್ ಅವರ ನಡುವಣ ಸಂವಾದವು ಹೆಚ್ಚು ಹಂಚಿಕೆಯಾಗಿತ್ತು
- ಉತ್ತರ ಪ್ರದೇಶ ಹಾದುಹೋಗುವಾಗ, ಯಾತ್ರೆಯಲ್ಲಿ ಭಾಗಿಯಾಗುವಂತೆ ಎಸ್‌ಪಿ, ಬಿಎಸ್‌ಪಿಗೆ ಆಹ್ವಾನ ನೀಡಲಾಗಿತ್ತು. ಎರಡೂ ಪಕ್ಷಗಳು ಆಹ್ವಾನ ತಿರಸ್ಕರಿಸಿದ್ದವು. ಬಿಹಾರದಲ್ಲಿ ಜೆಡಿಯು ಮತ್ತು ಆರ್‌ಜೆಡಿ ಯಾತ್ರೆಗೆ ಬೆಂಬಲ ಸೂಚಿಸಿದ್ದವು
- ಆರ್‌ಬಿಐನ ಗವರ್ನರ್ ಆಗಿದ್ದ ರಘುರಾಮ್ ರಾಜನ್ ಅವರು ರಾಜಸ್ಥಾನದಲ್ಲಿ ರಾಹುಲ್ ಜತೆಗೆ ಹೆಜ್ಜೆಹಾಕಿದ್ದರು. ರಾಜನ್ ಅವರು ನಡೆಸಿದ್ದ ಸಂವಾದವು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗಿತ್ತು
- ಮಧ್ಯಪ್ರದೇಶದಲ್ಲಿ ನಟಿ ಸ್ವರ ಭಾಸ್ಕರ್, ರಾಹುಲ್ ಜತೆಗೆ ಹೆಜ್ಜೆ ಹಾಕಿದ್ದರು
- ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ಬಣದ ಶಿವಸೇನಾ ಮತ್ತು ಎನ್‌ಸಿಪಿ ಯಾತ್ರೆಗೆ ಜತೆಯಾದವು. ಉದ್ಧವ್ ಠಾಕ್ರೆಯ ಮಗ ಆದಿತ್ಯ ಠಾಕ್ರೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮಗಳು ಸುಪ್ರಿಯಾ ಸುಳೆ, ಮಹಾತ್ಮಾ ಗಾಂಧಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ, ಹಿರಿಯ ನಟ ಅಮೋಲ್ ಪಾಲೇಕರ್, ನಟಿ ರಿಯಾ ಸೆನ್ ಭಾಗಿಯಾಗಿದ್ದರು
- ತೆಲಂಗಾಣದ ವಿಕಾರಾಬಾದ್‌ಗೆ ಭೇಟಿ ನೀಡುವುದಷ್ಟೇ ಯಾತ್ರೆಯ ಯೋಜನೆಯಾಗಿತ್ತು. ಆದರೆ, ಯಾತ್ರೆಯನ್ನು ಹೈದರಾಬಾದ್‌ವರೆಗೂ ವಿಸ್ತರಿಸಲಾಯಿತು. ಹೈದರಾಬಾದ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾಗಿದ್ದ ರೋಹಿತ್ ವೇಮುಲ ಅವರ ತಾಯಿ ಮತ್ತು ಸೋದರ, ನಟಿ ಪೂಜಾ ಭಟ್ ರಾಹುಲ್ ಒಟ್ಟಿಗೆ ಹೆಜ್ಜೆ ಹಾಕಿದ್ದರು
- ಯಾತ್ರೆಯು ಆಂಧ್ರಪ್ರದೇಶವನ್ನು ಹಾದುಹೋಗುವ ಕಾರ್ಯಕ್ರಮ ಮೂಲ ಯೋಜನೆಯಲ್ಲಿ ಇರಲಿಲ್ಲ. ಆದರೆ, ಕರ್ನಾಟಕದ ಬಳ್ಳಾರಿ ಮತ್ತು ರಾಯಚೂರನ್ನು ಹಾದುಹೋಗುವ ವೇಳೆ ಯಾತ್ರೆಯು ಆಂಧ್ರಪ್ರದೇಶಕ್ಕೆ ಎರಡು ಬಾರಿ ಭೇಟಿ ನೀಡಿತ್ತು. ಎರಡೂ ರಾಜ್ಯಗಳ ಗಡಿಯನ್ನು ಹಾದುಹೋಗುವ ವೇಳೆ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು
- ಕರ್ನಾಟಕದಲ್ಲಿ ಕಾಂಗ್ರೆಸ್ ನಾಯಕರು, ನಟ–ಪರಿಸರವಾದಿ ಸುರೇಶ್ ಹೆಬ್ಳೀಕರ್, ಗೌರಿ ಲಂಕೇಶ್ ಅವರ ಸೋದರಿ ಕವಿತಾ ಲಂಕೇಶ್ ಮತ್ತು ತಾಯಿ ಇಂದಿರಾ ಲಂಕೇಶ್ ಭಾಗಿಯಾಗಿದ್ದರು
- ಕೇರಳದಲ್ಲಿ ಕಾಂಗ್ರೆಸ್ ನಾಯಕರು ಮತ್ತು ಸಿನಿಮಾ ತಾರೆಯರು ಯಾತ್ರೆಯಲ್ಲಿ ಭಾಗಿಯಾಗಿದ್ದರು. ಆಡಳಿತಾರೂಢ ಎಲ್‌ಡಿಎಫ್‌ನ ಎಡಪಕ್ಷಗಳು, ‘ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಒಟ್ಟಿಗಿದ್ದೇವೆ, ಆದರೆ ರಾಜ್ಯದಲ್ಲಲ್ಲ’ ಎಂದು ಸ್ಪಷ್ಟಪಡಿಸಿದವು
- ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಆರಂಭವಾದ ಯಾತ್ರೆಗೆ ಚಾಲನೆ ನೀಡಿದ್ದು ಡಿಎಂಕೆ ಮುಖ್ಯಸ್ಥ ಮತ್ತು ರಾಜ್ಯದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್. ರಾಜ್ಯದ ಆಡಳಿತ ಮೈತ್ರಿಕೂಟದ ಮಿತ್ರಪಕ್ಷಗಳಾದ ಎಂಡಿಎಂಕೆ, ಐಯುಎಂಎಲ್ ಕಾಂಗ್ರೆಸ್‌ಗೆ ಜತೆಯಾಗಿದ್ದವು. ಎಡಪಕ್ಷಗಳಾದ ಸಿಪಿಎಂ ಮತ್ತು ಸಿಪಿಐ ಸಹ ಯಾತ್ರೆಗೆ ಬೆಂಬಲ ಸೂಚಿಸಿದ್ದವು

ನಡಿಗೆಯ ಜಾಡಿನಲ್ಲಿ...

- ಭಾರತ್ ಜೊಡೊ ಯಾತ್ರೆ ಆರಂಭಕ್ಕೆ ಮುನ್ನವೇ ಬಿಜೆಪಿ–ಕಾಂಗ್ರೆಸ್ ನಡುವೆ ಸಂಘರ್ಷ ಸೃಷ್ಟಿಯಾಗಿತ್ತು. ಯಾತ್ರೆ ಕುರಿತು ರಚಿಸಿದ್ದ ಪೋಸ್ಟರ್‌ನಲ್ಲಿ ಖಾಕಿ ಚಡ್ಡಿಗೆ ಬೆಂಕಿ ಹಚ್ಚಲಾದ ಚಿತ್ರವನ್ನು ಪ್ರಕಟಿಸಲಾಗಿದೆ ಎಂದು ಕಾಂಗ್ರೆಸ್ ವಿರುದ್ಧ ಬಿಜೆಪಿ ಹರಿಹಾಯ್ದಿತ್ತು
- ಯಾತ್ರೆ ಆರಂಭಿಸುವ ವೇಳೆ, ಕನ್ಯಾಕುಮಾರಿಯಲ್ಲಿ ಸ್ವಾಮಿ ವಿವೇಕಾನಂದ ಸ್ಮಾರಕಕ್ಕೆ ರಾಹುಲ್ ಗೌರವ ಸಲ್ಲಿಸಲಿಲ್ಲ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಆರೋಪಿಸಿದರು. ಇದು ಸುಳ್ಳು ಆರೋಪ ಎಂದು ಸಾಬೀತುಪಡಿಸಿದ ಕಾಂಗ್ರೆಸ್, ರಾಹುಲ್ ಅವರು ಸ್ಮಾರಕಕ್ಕೆ ಭೇಟಿ ನೀಡಿದ್ದ ವಿಡಿಯೊವನ್ನು ಪ್ರಕಟಿಸಿತು
- ರಾಹುಲ್ ಅವರು ಬರ್‌ಬೆರಿ ಕಂಪನಿಯ ₹41,000 ಬೆಲೆಯ ದುಬಾರಿ ಟಿ–ಶರ್ಟ್ ಧರಿಸಿ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಬಿಜೆಪಿ ಲೇವಡಿ ಮಾಡಿತ್ತು. ಪ್ರಧಾನಿ ಮೋದಿ ಅವರು ₹10 ಲಕ್ಷ ಬೆಲೆಯ ಸೂಟ್ ಹಾಗೂ ₹1.5 ಲಕ್ಷ ಬೆಲೆಯ ಕನ್ನಡಕ ಧರಿಸುತ್ತಾರೆ ಎಂದು ಕಾಂಗ್ರೆಸ್ ಆರೋಪಿಸಿತು
- ಭಾರತ್ ಜೋಡೊ ಯಾತ್ರೆ ಅಂಗವಾಗಿ, ಕರ್ನಾಟಕದ ಬದನವಾಳು ಗ್ರಾಮದಲ್ಲಿ ಎರಡು ಕೇರಿಗಳನ್ನು ಸಂಪರ್ಕಿಸುವ ರಸ್ತೆಯನ್ನು ಕಾಂಗ್ರೆಸ್ ನಿರ್ಮಿಸಿತು. ರಾಹುಲ್ ಅವರು ರಸ್ತೆ ಉದ್ಘಾಟಿಸಿ ಜನರ ಬಳಕೆಗೆ ಮುಕ್ತವಾಗಿಸಿದರು
- ಮೈಸೂರಿನಲ್ಲಿ ಸುರಿಯುವ ಮಳೆಯಲ್ಲಿ ತೊಯ್ದುಕೊಂಡು ರಾಹುಲ್ ಭಾಷಣ ಮಾಡಿದ್ದರು
- ರಾಹುಲ್ ‘ಗಡ್ಡ’ವೂ ಚರ್ಚೆಯ ವಸ್ತುವಾಗಿತ್ತು. ರಾಹುಲ್ ಅವರು ಇರಾಕ್ ಸರ್ವಾಧಿಕಾರಿ ಸದ್ದಾಂ ಹುಸೇನ್ ಚಹರೆಯನ್ನು ಹೋಲುತ್ತಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದರು. ಯಾತ್ರೆಯ ಕೊನೆಯವರೆಗೆ ಗಡ್ಡ ಕತ್ತರಿಸುವುದಿಲ್ಲ ಎಂದು ರಾಹುಲ್ ಮೊದಲೇ ಹೇಳಿದ್ದರು
- ಸಾವರ್ಕರ್ ಅವರು ಕ್ಷಮಾಪಣೆ ಪತ್ರ ಬರೆದಿದ್ದರು ಎಂಬ ರಾಹುಲ್ ಆರೋಪವು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್–ಶಿವಸೇನಾ ನಡುವೆ ಜಗಳ ಹಚ್ಚಿತ್ತು
- ಕೋವಿಡ್ ನಿಯಮಾವಳಿ ಪಾಲಿಸದಿದ್ದರೆ ಯಾತ್ರೆ ನಿಲ್ಲಿಸಿ ಎಂದು ಕೇಂದ್ರ ಆರೋಗ್ಯ ಸಚಿವರು ಸೂಚಿಸಿದ್ದಕ್ಕೆ ತಿರುಗೇಟು ಕೊಟ್ಟಿದ್ದ ರಾಹುಲ್, ಯಾತ್ರೆ ನಿಲ್ಲಿಸುವ ಷಡ್ಯಂತ್ರ ನಡೆಯುತ್ತಿದೆ ಎಂದಿದ್ದರು
- ದೆಹಲಿಯಲ್ಲಿ ವಾಜಪೇಯಿ ಮೊದಲಾದವರ ಸ್ಮಾರಕಕ್ಕೆ ಭೇಟಿ ನೀಡಿದ್ದ ರಾಹುಲ್, ತಮ್ಮ ಪಕ್ಷದ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಸ್ಮಾರಕಕ್ಕೆ ಏಕೆ ಭೇಟಿ ನೀಡಲಿಲ್ಲ ಎಂದು ಬಿಜೆಪಿ ಹುಯಿಲೆಬ್ಬಿಸಿತ್ತು. ನರಸಿಂಹರಾವ್ ಸ್ಮಾರಕ ಹೈದರಾಬಾದ್‌ನಲ್ಲಿದೆ
- ಮಹಾರಾಷ್ಟ್ರದಲ್ಲಿ ಯಾತ್ರೆಯ ಅಂಗವಾಗಿ ನಡೆದ ಸಮಾವೇಶದ ಆರಂಭದಲ್ಲಿ, ಮೈಕ್‌ನಲ್ಲಿ ರಾಷ್ಟ್ರಗೀತೆಯ ಬದಲು ನೇಪಾಳದ ರಾಷ್ಟ್ರಗೀತೆ ಪ್ರಸಾರವಾಗಿ ಕಾಂಗ್ರೆಸ್‌ಗೆ ಮುಜುಗರ ಉಂಟಾಗಿತ್ತು
- ಒಟ್ಟು ನಾಲ್ವರು ಮೃತಪಟ್ಟಿದ್ದಾರೆ. ಸಂಸದ ಸಂತೋಖ್ ಸಿಂಗ್ ಚೌಧರಿ ಹೃದಯಸ್ತಂಭನದಿಂದ ಮೃತಪಟ್ಟರು. ಸೇವಾದಳ ಕಾರ್ಯಕರ್ತರೊಬ್ಬರು ಮಹಾರಾಷ್ಟ್ರದಲ್ಲಿ ನಿಧನರಾದರು

ಆಧಾರ: ಪಿಟಿಐ, ಕಾಂಗ್ರೆಸ್ ಟ್ವೀಟ್‌ಗಳು

ಸುಳ್ಳು ಸುದ್ದಿ ಮತ್ತು ಫ್ಯಾಕ್ಟ್ ಚೆಕ್

- ಹರಿಯಾಣದಲ್ಲಿ ಯಾತ್ರೆಯ ವೇಳೆ ರಾಹುಲ್ ಅವರು ಹೋಟೆಲ್‌ನಲ್ಲಿ ಮದ್ಯ ಸೇವಿಸಿದ್ದರು ಎನ್ನಲಾದ ಚಿತ್ರವೂ ಸದ್ದು ಮಾಡಿತ್ತು. ಈ ಚಿತ್ರವನ್ನು ತಿರುಚಲಾಗಿತ್ತು. ಮೂಲ ಚಿತ್ರದಲ್ಲಿ ಇದ್ದ ಚಹಾ ಕಪ್ ತೆಗೆದು, ಆ ಜಾಗದಲ್ಲಿ ಮದ್ಯದ ಗ್ಲಾಸ್ ಸೇರಿಸಲಾಗಿತ್ತು
- ಪ್ರಧಾನಿ ನರೇಂದ್ರ ಮೋದಿ ಅವರ ಕುರಿತ ಬಿಬಿಸಿ ಸಾಕ್ಷ್ಯಚಿತ್ರದ ನಿರ್ದೇಶಕರ ಜತೆ ರಾಹುಲ್ ಕಾಣಿಸಿಕೊಂಡಿದ್ದರು ಎಂಬುದನ್ನು ಬಿಂಬಿಸುವ ಚಿತ್ರ ವಿವಾದ ಸೃಷ್ಟಿಸಿತ್ತು. ಬ್ರಿಟನ್‌ನ ಲೇಬರ್ ಪಕ್ಷದ ಮಾಜಿ ನಾಯಕನನ್ನು ಭೇಟಿಯಾಗಿದ್ದ ಚಿತ್ರವನ್ನು ತಪ್ಪಾಗಿ ಬಿಂಬಿಸಲಾಗಿತ್ತು
- ಯಾತ್ರೆಯ ವೇಳೆ ರಾಹುಲ್ ಅವರು ಯುವತಿಯೊಬ್ಬಳ ಕೈಹಿಡಿದು ಕುಳಿತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಅರ್ಥ ಕಲ್ಪಿಸುವ ರೀತಿಯಲ್ಲಿ ಹರಿದಾಡಿತ್ತು. ಚಿತ್ರದಲ್ಲಿ ಇದ್ದಿದ್ದು ತಂಗಿ ಪ್ರಿಯಾಂಕಾ ಅವರ ಮಗಳು ಮಿರಾಯಾ ವಾದ್ರಾ
- ಪಾಕಿಸ್ತಾನ ಪರ ಘೋಷಣೆ ಕೂಗಿದ್ದ ಅಮೂಲ್ಯ ಲಿಯೋನಾ ಜೊತೆ ರಾಹುಲ್ ಕಾಣಿಸಿಕೊಂಡಿದ್ದಾರೆ ಎಂದು ಹೇಳಲಾದ ಚಿತ್ರ ಹರಿದಾಡಿತ್ತು. ಆದರೆ ಇದು ಸುಳ್ಳು. ಚಿತ್ರದಲ್ಲಿ ರಾಹುಲ್ ಜೊತೆ ಇದ್ದಿದ್ದು ಕೇರಳ ವಿದ್ಯಾರ್ಥಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮಿವಾ ಜೊಲ್ಲಿ

ಕೊರೆಯುವ ಚಳಿಯಲ್ಲೂ ಟಿ–ಶರ್ಟ್...

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ನಡಿಗೆಯಲ್ಲಿ ರಾಹುಲ್ ಅವರು ಸದಾ ಟಿ–ಶರ್ಟ್ ಧರಿಸಿಯೇ ಇದ್ದರು. ಇದು ಗಮನ ಸೆಳೆದ ಅಂಶ. ಉತ್ತರ ಭಾರತದ ಕೊರೆಯುವ ಚಳಿಯಲ್ಲಿ, ದೆಹಲಿಯಲ್ಲಿ ಮಹಾತ್ಮ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮಾರಕಗಳಿಗೆ ಭೇಟಿ ನೀಡುವಾಗಲೂ ಅವರು ಟಿ–ಶರ್ಟ್ ಧರಿಸಿಯೇ ಇದ್ದರು.

ಹೀಗೆ ಇದ್ದದ್ದಕ್ಕೆ ರಾಹುಲ್ ಕೊಟ್ಟ ಕಾರಣ ಹೀಗಿದೆ: ‘ಮಧ್ಯ ಪ್ರದೇಶದಲ್ಲಿ ಮೂವರು ಹೆಣ್ಣು ಮಕ್ಕಳು ಚಳಿಗೆ ನಡುಗುತ್ತಿರುವುದನ್ನು ಕಂಡಿದ್ದೆ. ಹಾಗಾಗಿಯೇ ಯಾತ್ರೆಯ ಉದ್ದಕ್ಕೂ ಟಿ–ಶರ್ಟ್‌ನಲ್ಲಿಯೇ ಇರಲು ನಿರ್ಧರಿಸಿದೆ’ ಎಂದು ರಾಹುಲ್ ಹೇಳಿದ್ದರು. ಶ್ರೀನಗರದಲ್ಲಿ ಮಾತ್ರ ಅವರು ಸುರಿಯುತ್ತಿದ್ದ ಮಂಜಿನಿಂದ ರಕ್ಷಣೆ ಪಡೆಯಲು ಕಾಶ್ಮೀರಿ ಫೆರನ್ (ನಿಲುವಂಗಿ) ಧರಿಸಿದ್ದರು.

ಸಿನಿ ಬಿಟ್ಸ್



ಎಐ ಅವತಾರ್!

ನಟ ರಿಷಬ್ ಶೆಟ್ಟಿ ತಮ್ಮ ಮುಂದಿನ ಸಿನಿಮಾದಲ್ಲಿ ಪುರಾಣದ ಕಥೆಯೊಂದರ ಯೋಧನಾದರೆ, ಇಲ್ಲವೇ ರಾಜನಾದರೆ ಅಥವಾ ಕಾಲ್ಪನಿಕ ಪಾತ್ರವೊಂದಕ್ಕೆ ಬಣ್ಣ ಹಚ್ಚಿದರೆ ಹೇಗಿರುತ್ತಾರೆ? ಇಂಥ ಕಲ್ಪನೆಯೊಂದನ್ನು ಸ್ವತಃ ರಿಷಬ್ ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾರೆ.

ಸದ್ಯ ಎಲ್ಲೆಡೆ ವೈರಲ್ ಆಗುತ್ತಿರುವ ಎಐ(ಆರ್ಟಿಫಿಷಿಯಲ್ ಇಂಟೆಲಿಜೆನ್ಸ್–ಕೃತಕ ಬುದ್ಧಿಮತ್ತೆ) ಇಮೇಜ್‌ಗಳಲ್ಲಿ ನಟ ರಿಷಬ್ ಶೆಟ್ಟಿ ಹಾಗೂ ನಟಿ ಆಶಿಕಾ ರಂಗನಾಥ್ ಮಿಂಚುತ್ತಿದ್ದಾರೆ. ತಾವು ವಿಭಿನ್ನ ಪಾತ್ರಗಳಲ್ಲಿ ಹೀಗೆ ಕಾಣಿಸಿಕೊಳ್ಳಬಹುದು ಎನ್ನುತ್ತಾ ತಮ್ಮ ಫೋಟೊಗಳನ್ನು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ್ದಾರೆ. ‘ತಂತ್ರಜ್ಞಾನ ಎನ್ನುವುದು ನನ್ನ ಪ್ರಚಂಡ ಕನಸುಗಳಿಗೆ ಜೀವತುಂಬಲಿದೆ ಎನ್ನುವುದು ಯಾರಿಗೆ ತಿಳಿದಿತ್ತು?’ ಎನ್ನುತ್ತಾ ಕೆಆರ್‌ಜಿ ಸಂಸ್ಥೆಯು ಸಿದ್ಧಪಡಿಸಿದ ತಮ್ಮ ಎಐ ಇಮೇಜ್‌ಗಳನ್ನು ಅಪ್‌ಲೋಡ್ ಮಾಡಿ ರಿಷಬ್ ಶೆಟ್ಟಿ ಆಶ್ಚರ್ಯಪಟ್ಟಿದ್ದಾರೆ. ಈ ಫೋಟೊಗಳಿಗೆ ಪ್ರತಿಕ್ರಿಯೆ ನೀಡಿರುವ ಹಲವರು, ಪೌರಾಣಿಕ ಕಥೆ ಹೊಂದಿರುವ ಸಿನಿಮಾವೊಂದನ್ನು ಮುಂದಿನ ಪ್ರಾಜೆಕ್ಟ್‌ಗಳಲ್ಲಿ ಆರಿಸಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ. ಇದೇ ಮಾದರಿಯಲ್ಲಿ ನಟಿಯರಾದ ರಮ್ಯಾ, ಸೌಂದರ್ಯ, ರಕ್ಷಿತಾ ಪ್ರೇಮ್, ನಟರಾದ ಪ್ರಜ್ವಲ್ ದೇವರಾಜ್, ಉಪೇಂದ್ರ, ಜಗ್ಗೇಶ್ ಅವರ ಎಐ ಇಮೇಜ್‌ಗಳನ್ನೂ ಕೆಆರ್‌ಜಿ ಸಿದ್ಧಪಡಿಸಿ ತಮ್ಮ ಟ್ವಿಟರ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದೆ.



ರಕ್ಷಿತಾ



ಆಶಿಕಾ




ರಮ್ಯಾ

ತೆರೆ ಮೇಲೆ ‘ಸಿಂಹಪ್ರಿಯ’

ವಸಿಷ್ಠಸಿಂಹ, ಹರಿಪ್ರಿಯ ಹಾಗೂ ದಿಗಂತ್ ಮಂಚಾಲೆ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ, ಮರ್ಡರ್ ಮಿಸ್ಟ್ರಿ ಸುತ್ತ ನಡೆಯುವ ಕಥಾಹಂದರಹೊಂದಿರುವ ‘ಯದಾ ಯದಾ ಹಿ’ ಚಿತ್ರ ಬಿಡುಗಡೆಗೆ ಸಜ್ಜಾಗಿದೆ.


ವಸಿಷ್ಠ ಸಿಂಹ ಹಾಗೂ ಹರಿಪ್ರಿಯ ಅವರು ವೈವಾಹಿಕ ಜೀವನಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಚಿತ್ರತಂಡವು ಮದುವೆಯ ಉಡುಗೊರೆ ರೂಪದಲ್ಲಿ ಚಿತ್ರದ ವಿಶೇಷ ಮೋಷನ್ ಪೋಸ್ಟರ್ ಬಿಡುಗಡೆ ಮಾಡಿದೆ.

ತೆಲುಗಿನ ‘ಎವುರು’ ಚಿತ್ರದ ರೀಮೇಕ್ ಇದಾಗಿದ್ದು, ತೆಲುಗಿನಲ್ಲಿ ಎರಡು ಚಿತ್ರಗಳನ್ನು ನಿರ್ದೇಶಿಸಿರುವ ಅಶೋಕ್ ತೇಜ ಈ ಸಿನಿಮಾ ಮೂಲಕ ನಿರ್ದೇಶಕರಾಗಿ ಕನ್ನಡಕ್ಕೆ ಆಗಮಿಸುತ್ತಿದ್ದಾರೆ. ಒಂದು ಕೊಲೆಯ ಸುತ್ತ ನಡೆಯುವ ತನಿಖೆಯನ್ನು ರೋಚಕವಾಗಿ ಈ ಚಿತ್ರದಲ್ಲಿ ಹೇಳಲಾಗಿದೆ. ತೆಲುಗಿನಲ್ಲಿ ನಟಿ ರೆಜಿನಾ ನಿರ್ವಹಿಸಿದ್ದ ಪಾತ್ರವನ್ನು ಹರಿಪ್ರಿಯಾ ಹಾಗೂ ಅದ್ವಿಶೇಷ್ ಪಾತ್ರವನ್ನು ದಿಗಂತ್ ಮಾಡಿದ್ದಾರೆ.



ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಮಯೋಗ

ಹೊರಗೆ ಹೊರೆಯಾಗದವೊಲ್ ಒಳಗನನುಗೊಳಿ-
ಸಿ, ನೀ-ನೊಳಗು ಶೆಕೆಯಾಗದವೊಲ್ ಅಳವಡಿಸೆ
ಹೊರಗ ||
ಸರಿಸಮದೊಳೆರಡನುಂ ಬಾಳಿನಲಿ ಜೋಡಿಪುದೆ |
ಪರಮ ಜೀವನ ಯೋಗ – ಮಂಕುತಿಮ್ಮ || 811 ||

ಪದ-ಅರ್ಥ: ಹೊರೆಯಾಗದವೊಲ್ = ಹೊರೆಯಾಗದಂತೆ, ಒಳಗನನುಗೊಳಿಸಿ = ಒಳಗನು + ಅನುಗೊಳಿಸಿ(ಸಿದ್ಧಗೊಳಿಸಿ), ನೀನೊಳಗು = ನೀನು + ಒಳಗು, ಶೆಕೆಯಾಗದವೊಲ್ = ಶೆಕೆಯಾಗದಂತೆ, ಸರಿಸಮದೊಳೆರಡನುಂ = ಸರಿಸಮದೊಳ್ + ಎರಡನುಂ, ಜೋಡಿಪುದೆ = ಜೋಡಿಸುವುದೆ

ವಾಚ್ಯಾರ್ಥ: ಹೊರಗೆ ಹೊರೆಯಾಗದಂತೆ ಅಂತರ್ಯವನ್ನು ಸಿದ್ಧಗೊಳಿಸಿ, ಒಳಗೆ ಶೆಕೆಯಾಗದಂತೆ ಹೊರಗನ್ನು ಜೋಡಿಸುತ್ತ, ಅವೆರಡನ್ನೂ ಸರಿಸಮವಾಗಿ ಜೋಡಿಸುವುದೇ ಶ್ರೇಷ್ಠವಾದ ಯೋಗ.

ವಿವರಣೆ: ಪ್ರತಿಯೊಬ್ಬ ಮನುಷ್ಯನಿಗೆ ಎರಡು ಪರಿಸರಗಳಿವೆ. ಒಂದು ಬಾಹ್ಯ ಪರಿಸರ. ಅದು ಇಂದ್ರಿಯಗಳಿಗೆ ದೊರಕುವಂಥದ್ದು. ಅವುಗಳಿಂದ ಅನುಭವಕ್ಕೆ ಸಿಗುವಂಥದ್ದು. ಇನ್ನೊಂದು ಪ್ರಪಂಚ ಅಂತರಂಗದ್ದು. ಹೊರಗಿನ ದೃಶ್ಯ ಪ್ರಪಂಚಕ್ಕೆ ಸೆಳೆತ ಹೆಚ್ಚು. ಇಂದ್ರಿಯಗಳ ಅಪೇಕ್ಷೆಯಂತೆ ಮನುಷ್ಯ ದಿಕ್ಕುದಿಕ್ಕಿಗೆ ಧಾವಿಸುತ್ತಾನೆ. ಸುಖ ಸಿಕ್ಕೀತು ಎಂಬ ವ್ಯರ್ಥ ಆಸೆಯಲ್ಲಿ ದುಡಿಯುತ್ತ ಬದುಕನ್ನು ಭಾರ-ಮಾಡಿಕೊಳ್ಳುತ್ತಾನೆ. ಅದನ್ನೇ ಕಗ್ಗ ‘ಹೊರಗನ್ನು ಹೊರೆಯಾಗಿಸಿಕೊಳ್ಳುವುದು’ ಎನ್ನುತ್ತದೆ. ಆ ಹೊರೆ ಹೆಚ್ಚಾಗದಂತೆ ನೋಡಿಕೊಳ್ಳುವುದು ಅಂತರಂಗದ ಸಿದ್ಧತೆ. ನನಗೆ ಮಾರ್ಗದರ್ಶಕರಾಗಿದ್ದ ಖ್ಯಾತ ಅಣುವಿಜ್ಞಾನಿ ಡಾ. ರಾಜಾ ರಾಮಣ್ಣನವರ ಕಾರ್ಯವಿಸ್ತಾರ ಅಪಾರವಾದದ್ದು. ಹಗಲು ರಾತ್ರಿ ದುಡಿಮೆ, ಜಗತ್ತಿನಾದ್ಯಂತ ಸತತ ಪ್ರವಾಸ. ಆದರೆ ಅವರು ಯಾವಾಗಲೂ ನಿರಾಳ, ಸದಾ ನಗು ಮುಖ, ಹಾಸ್ಯದ ಬುಗ್ಗೆ. ಇಷ್ಟು ಒತ್ತಡದ ಕೆಲಸವಿದ್ದರೂ ಹೀಗೆ ಹಗುರಾಗಿರುವುದು ಹೇಗೆ ಸಾಧ್ಯ ಎಂದು ಒಮ್ಮೆ ಅವರನ್ನು ಕೇಳಿದ್ದೆ. ಅವರ ಉತ್ತರ ನಮಗೆ ತುಂಬ ಪ್ರಯೋಜನಕಾರಿ. “ಈ ಕೆಲಸದಿಂದ ಜನರಿಗೆ ಪ್ರಯೋಜನವಾಗುತ್ತದೆ ಎಂಬ ನಂಬಿಕೆ ಇದೆ. ಅದಕ್ಕೆ ಬುದ್ಧಿಶಕ್ತಿಯನ್ನೆಲ್ಲ ಹಾಕಿ ದುಡಿಯುತ್ತೇನೆ. ಆದರೆ ಭಾವನಾತ್ಮಕವಾಗಿ ನಾನು ಆತಂಕಮಾಡಿಕೊಳ್ಳುವುದಿಲ್ಲ. ಪ್ರಯತ್ನದಲ್ಲಿ ಕೊರತೆ ಇಲ್ಲ. ಆಗಿಯೇ ತೀರಬೇಕೆಂಬ ಉದ್ವೇಗವಿಲ್ಲ. ಉದ್ವೇಗ ಹೆಚ್ಚಾದಂತೆ ಕೆಲಸದ ಪರಿಣಾಮ ಕಡಿಮೆಯಾಗುತ್ತದೆ. ಅದು ನನ್ನ ಆರೋಗ್ಯಕ್ಕೂ ಒಳ್ಳೆಯದಲ್ಲ”. ಹಾಗೆಂದರೆ, ಹೊರಗಿನ ಭಾರವನ್ನು ಕಡಿಮೆ ಮಾಡಲು ಒಳಗಿನ ಮನಸ್ಥಿತಿಯಲ್ಲಿಯ ಸಮತ್ವತೆ ಕಾರಣ. ಅದೇ ರೀತಿ, ಆಂತರ್ಯದ ಶಾಂತತೆಗೆ ಬಾಹ್ಯಪ್ರಪಂಚದ ಆಕರ್ಷಣೆಗಳೂ ಕಡಿಮೆಯಾಗಬೇಕು. ಜನ ಮನಶ್ಶಾಂತಿಯ-ನ್ನು ಕಳೆದುಕೊಂಡು ಆತಂಕಪಡುವುದು ಏಕೆ? ಅಪೇಕ್ಷೆಪಟ್ಟ ಆಕರ್ಷಣೆಗಳು ದೊರಕದೆ ಹೋದಾಗ, ಸಂಬಂಧಗಳಲ್ಲಿ ಅತಿಯಾಸೆ ಇಟ್ಟುಕೊಂಡು, ಅವು ಒಡೆದು ಹೋದಾಗ. ಅಂದರೆ ಬಾಹ್ಯಪ್ರಪಂಚಕ್ಕೂ, ಆಂತರ್ಯದ ಮನಸ್ಸಿನ ವ್ಯವಸ್ಥೆಗೂ ಒಂದು ಅವಿನಾ ಸಂಬಂಧವಿದೆ. ಒಂದಿಲ್ಲದಿದ್ದರೆ ಇನ್ನೊಂದು ಇಲ್ಲ ಎನ್ನುವ ಸಂಬಂಧ. ಒಂದು ಮತ್ತೊಂದರ ಮೇಲೆ ಪ್ರಭಾವವನ್ನುಂಟು ಮಾಡುತ್ತದೆ. ಅದನ್ನೇ ಕಗ್ಗ ಹೇಳುತ್ತದೆ. ಬಾಹ್ಯಪ್ರಪಂಚದ ಒತ್ತಡ ಹೆಚ್ಚಾಗದಂತೆ ಆಂತರಿಕ ಮನಸ್ಥಿತಿಯನ್ನು ಹದ ಮಾಡಿಕೊಳ್ಳಬೇಕು. ಮನಸ್ಸಿನ ಸ್ಥಿಮಿತತೆ, ಶಾಂತತೆ ಕೆಡದ ಹಾಗೆ ಬಾಹ್ಯಪ್ರಪಂಚದ ಆಕರ್ಷಣೆಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಹೀಗೆ ಬಾಹ್ಯ ಮತ್ತು ಆಂತರ್ಯದ ಎರಡೂ ಕಾರ್ಯಗಳನ್ನು ಸರಿಯಾಗಿ, ಹದವಾಗಿ ಜೋಡಿಸುವುದೇ ಜೀವನದ ಶ್ರೇಷ್ಠ ಯೋಗ. ಯೋಗ ಎಂದರೆ ಜೋಡಿಸುವುದು, ಹೊಂದಿಸುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜನವರಿ 31, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ದಶಮಿ ಗಂ. 11-54 ನಕ್ಷತ್ರ: ರೋಹಿಣಿ ಗಂ. 24-39 ಯೋಗ: ಬ್ರಹ್ಮ ಗಂ. 10-59, ಕರಣ: ಗರಜೆ ಗಂ. 11-54, ಮಕರ ಮಾಸದ 17 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 -04-30
ಸೂರ್ಯೋದಯ : 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 08 ರಜಬ್
ಅದೃಷ್ಟ ಸಂಖ್ಯೆ : 4, 6

ಮೇಷ: ವಿದೇಶೀ ಗೆಳೆಯನ ಆಗಮನ ಮತ್ತು ಅವನ ಸಹವಾಸದಿಂದ ವ್ಯವಹಾರದಲ್ಲಿ ಉತ್ತಮ ಬದಲಾವಣೆ ಕಾಣುವಿರಿ. ಹೊಸ ಹುಮ್ಮಸ್ಸು ಮೂಡಲಿದೆ. ರಾಜಕೀಯ ವಿಚಾರಗಳನ್ನು ಗುಪ್ತವಾಗಿ ಇರಿಸಿ.

ವೃಷಭ: ಧಾನ್ಯಗಳ ವ್ಯಾಪಾರಗಳಿಂದ ಹೆಚ್ಚಿನ ಲಾಭ ಪಡೆಯಬಹುದು. ಬಹಳ ದಿನಗಳಿಂದ ನೀವು ಅಂದುಕೊಂಡಂತೆ ಕೆಲಸದಲ್ಲಿ ಹೊಸ ಪರಿವರ್ತನೆ ಮಾಡಲು ಈ ಸಮಯ ಸಾಧ್ಯ. ಮನರಂಜನೆಗಾಗಿ ದೂರ ಪ್ರಯಾಣ ಸರಿಯಲ್ಲ.

ಮಿಥುನ: ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸಾಹಸದ ವಿಚಾರ. ಹೊರ ಪ್ರಪಂಚದಲ್ಲಿ ಬೆರೆಯುವುದನ್ನು ರೂಢಿಸಿಕೊಳ್ಳಿ. ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ.

ಕರ್ಕಾಟಕ: ಆಹಾರ ಪದಾರ್ಥಗಳ ತಯಾರಕರಿಗೆ ವ್ಯಾಪಾರಸ್ಥರಿಗೆ ಉತ್ತಮ ಲಾಭ ಸಿಗಲಿದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಅಪೇಕ್ಷಿಸಬಹುದು. ಕುಟುಂಬದಲ್ಲಿ ಅತ್ಯಂತ ಸಂತೋಷದ ವಾತಾವರಣವಿರಲಿದೆ.

ಸಿಂಹ: ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಕ್ಕೆ ವಿಘ್ನ ಸಂಭವಿಸದಂತೆ ದೇವರ ಮೊರೆ ಹೋಗಬೇಕಾಗುತ್ತದೆ. ಇಂದು ಬಂಧುಗಳಲ್ಲಿ ಮಾಡಿದ ಲೇವಾದೇವಿ ವ್ಯವಹಾರ ಲಾಭದಾಯಕವಾಗಿರುವುದು.

ಕನ್ಯಾ: ಈ ದಿನ ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಸರ್ಕಾರಿ ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು.

ತುಲಾ: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಕೆಲಸದ ಒತ್ತಡ ಇರುವುದು. ಹೆದರಬೇಡಿ ಇಂದು ಅದೃಷ್ಟ ನಿಮ್ಮ ಪಾಲಿಗೇ ಇದೆ. ಒಂದು ಸಂಸ್ಥೆಯ ಜವಾಬ್ದಾರಿ ನೋಡಲು ಇತರರಿಂದ ಒತ್ತಡಗಳು ಬರಬಹುದು.

ವೃಶ್ಚಿಕ: ಸಾಲ ಅಥವಾ ಸಹಾಯದ ರೂಪದಲ್ಲಿ ಹಣ ದೊರೆಯಲಿದೆ. ವ್ಯವಸಾಯಗಾರರಾಗಿರುವ ಇಲಾಖೆಯವರಿಂದ ಸಹಾಯವನ್ನು ಪಡೆದುಕೊಳ್ಳಬಹುದು. ವಕೀಲರಿಗೆ ಮಾತಿನಲ್ಲಿ ಎದುರಾಳಿಯನ್ನು ಕಟ್ಟಿಹಾಕುವ ಅವಕಾಶ.

ಧನು: ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ಉತ್ತಮ ವರಮಾನ ಪಡೆದುಕೊಳ್ಳುವಿರಿ. ಸಂಸಾರದಲ್ಲಿ ನೆಮ್ಮದಿಯ ಜೀವನವಿರುವುದು. ಧೈರ್ಯದಿಂದ ದೊಡ್ಡ ಯೋಜನೆ ಕೈಗೊಳ್ಳಬಹುದು.

ಮಕರ: ರಾಜಕೀಯ ವೃತ್ತಿ ಸೇರುವ ಯೋಚನೆ ಬರುವುದು. ರಾಜಿಯಾಗುವ ಮನೋಭಾವ ಬೆಳೆಸಿಕೊಳ್ಳಿ. ಹೊಸ ಕ್ಷೇತ್ರದಲ್ಲಿ ಏಳಿಗೆ ಪಡೆಯುವಿರಿ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನಹರಿಸಬೇಕು.

ಕುಂಭ: ಕಳೆದು ಹೋದ ಆಸ್ತಿಯ ಬಗ್ಗೆ ಯೋಚಿಸದೇ, ಶ್ರಮದಿಂದ ದುಡಿಯುವ ಬಗ್ಗೆ ಗಮನಹರಿಸಿ. ನಿಮ್ಮ ಬಾಳು ಹಸನವಾಗುವುದರೊಂದಿಗೆ ವೈವಾಹಿಕ ಜೀವನ ಸುಧಾರಿಸಲಿದೆ. ಮಕ್ಕಳ ಖರ್ಚುವೆಚ್ಚಗಳನ್ನು ಸರಿದೂಗಿಸುವಿರಿ.

ಮೀನ: ಕ್ರೀಡಾಪಟುಗಳ ಅಥವಾ ಸಂಗೀತಗಾರರ ಅಭ್ಯಾಸದ ಕೊರತೆ ವೈಫಲ್ಯಕ್ಕೆ ಕಾರಣವಾಗುವುದು. ದಾಂಪತ್ಯ ಜೀವನ ಪರಸ್ಪರ ಸೋಲು ಗೆಲುವಿನಿಂದ ಉತ್ತಮವಾಗಿರುತ್ತದೆ.

ಪದಬಂಧ 5216


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೇರವಾಗಿರುವ ಗುಣ (3)
3.ವಿದ್ಯೆಯನ್ನು ಹೇಳಿಕೊಡುವವನು (2)
4.ಸಮಯ ಸೂಚಕ ಯಂತ್ರ (4)
6.ಕನ್ನಡಿಗ ಮಾಡಿಕೊಂಡಿರುವ ಎಕ್ಸ್‌ಚೇಂಜ್ (4)
8.ಮಣ್ಣು ಮಿಶ್ರಿತ ನೀರು (3)
11.ಈತ ವಯಸ್ಸಾದವನು (3)
13.ಶ್ರೇಷ್ಠವಾದ ನೆಲೆಯಿದು (4)
17.ತಟದಲ್ಲಿದ್ದವನು ಮಾಡಿರುವ ಮೋಸ (4)
18.ತೋಟದ ಕೆಲಸ ಮಾಡುವವನು (2)
19.ಅಂಗೈ ಹುಣ್ಣಿಗೆ ಈ ದರ್ಪಣ ಬೇಕೇ? (3)

ಮೇಲಿಂದ ಕೆಳಕ್ಕೆ

1.ಯಜ್ಞ ಪುರೋಹಿತನಿವನು (3)
2.ಗಳಿಕೆಯಿದ್ದರೂ ನಿಂದೆ! (4)
3.ಮಲಗುವಾಗ ಕಾಣಿಸಿದ ಆಳು (3)
5.ವಿರಮಿಸುತ್ತಿದ್ದಾಗ ಮೂಡಿದ ಸೂರ್ಯ (2)
7.ಈತ ಗ್ರೀಸ್ ದೇಶದವನು (3)
9.ಕೊಡತಕ್ಕ ಹಣ (3)
10.ತಾಪವಿರುವಾಗ ತೋಡಿಕೊಂಡ ಬೇಗುದಿ (3)
12.ಕನ್ನಡಿಗರ ಹೆಮ್ಮೆಯ ನಾಡು (4)
14.ರಂಗನ್ನು ತುಂಬಿ ಬರೆದ ಹಸೆ (3)
15.ಮಡಿವಂತ ನೀಡಿರುವ ಓಟು (2)
16.ದಡಿಯನ ಬಳಿಯಿರುವ ಬಿಡಿಗಾಸು (3)



5215ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದೂರದರ್ಶಕ 4.ಸಪ್ತಾಹ
5.ಮಾತುಲ 6.ಗಮಾರ
8.ಮಂದ್ರ 9.ಮಿತಿ
11.ಮರುಕ 14.ಕಪೋಲ
15.ಮಾರ್ದವ 16.ಗರಡಿಮನೆ

ಮೇಲಿಂದ ಕೆಳಕ್ಕೆ:
1.ದೂತಾವಾಸ 2.ದಟ್ಟದರಿದ್ರ
3.ಕಮಾನು 4.ಸಲಗ
7.ಮಾರುತಿ 8.ಮಂಪರು
9.ಮಿಟಕಲಾಡಿ 10.ಸೆರೆಮನೆ
12.ಕಕವ 13.ಓಲಗ

ಸುಡೊಕು 5602

				5				1
3		5	2		1	7		
	1			9			3	5
5		7	8			1		
	6						8	
9		8			4	5		2
1		2		8			6	
			5		6	2		3
6		3		4			5	

5601ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಸಾಮಾನ್ಯತೆಯ ಆರಾಧಕ ತಿರುಮಲೇಶ್

• ಎಸ್.ಆರ್. ವಿಜಯಶಂಕರ



ನುಡಿ ನಮನ

ಕನ್ನಡ ಕವಿ, ಆಧುನಿಕ ಚಿಂತಕ ನಮ್ಮ ನಡುವಿನ ಬಹುದೊಡ್ಡ ವಿದ್ವಾಂಸ, ಭಾಷಾ ಶಾಸ್ತ್ರಜ್ಞ ಹಾಗೂ ತತ್ವಶಾಸ್ತ್ರಜ್ಞ ಕೆ.ವಿ. ತಿರುಮಲೇಶ್ ಇನ್ನಿಲ್ಲ (1940–2023) ಎಂಬ ದುಃಖದ ವಾರ್ತೆ ತಿಳಿದಾಗ ಸಾಹಿತ್ಯ ಬಳಗ ಮಂಕಾಯಿತು. ಅವರು ಕವಿ ಮಾತ್ರವಲ್ಲದೆ ಕನ್ನಡ ವೈಚಾರಿಕತೆಯ ಸಾಕ್ಷಿಪ್ರಜ್ಞೆಯೂ ಆಗಿದ್ದರು.

ಈಗ ಕೇರಳದಲ್ಲಿರುವ ಕಾಸರಗೋಡಿನ ಕಾರಡ್ಕ ಗ್ರಾಮದ ಕಿಳಿಂಗಾರಿನವರಾದ ತಿರುಮಲೇಶ್, ಸಮೀಪದ ನೀರ್ಚಾಲಿನ ಸಂಸ್ಕೃತ ಕಾಲೇಜಿನಲ್ಲಿ ಪ್ರಾರಂಭದ ವಿದ್ಯಾಭ್ಯಾಸ ಮುಗಿಸಿದರು. ಕನ್ನಡ ವಿದ್ವಾನ್ ಪರೀಕ್ಷೆಗೆ ಓದುತ್ತಿದ್ದ ಅವರು ಇಂಗ್ಲಿಷ್ ಸಾಹಿತ್ಯದ ಆಕರ್ಷಣೆಯಿಂದ ಮುಂದೆ ತಿರುವನಂತಪುರದಲ್ಲಿ ಇಂಗ್ಲಿಷ್ ಎಂ.ಎ. ಓದಿದರು. ಅಲ್ಲಿ ಅವರು ಪ್ರಸಿದ್ಧ ಬರಹಗಾರ ಅಯ್ಯಪ್ಪ ಪಣಿಕ್ಕರ್ ಅವರ ನೇರ ವಿದ್ಯಾರ್ಥಿ. ಕಾಸರಗೋಡಿನ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದಾಗ, ವೇಣುಗೋಪಾಲ ಕಾಸರಗೋಡು, ಗಂಗಾಧರ ಭಟ್ಟ ಮೊದಲಾದವರೊಡಗೂಡಿ ಅಲ್ಲಿ ನವ್ಯ ಸಾಹಿತ್ಯ ಸಂಘ ಕಟ್ಟಿದರು. ಕತೆಗಾರ ವ್ಯಾಸರಿಗೂ ಆಪ್ತರು.

ಮುಂದೆ ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಅಂಡ್ ಫಾರಿನ್ ಲ್ಯಾಂಗ್ವೇಜಸ್ ಸಂಸ್ಥೆಯಲ್ಲಿ ಭಾಷಾಶಾಸ್ತ್ರದ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದರು. ಅದೇ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇರಿ, ಪ್ರಾಧ್ಯಾಪಕರಾಗಿ, ಸಂಸ್ಥೆಯ ಡೀನ್ ಹುದ್ದೆಯನ್ನಂಲಕರಿಸಿ ನಿವೃತ್ತರಾದರು. ಇಂಗ್ಲೆಂಡಿನ ರೀಡಿಂಗ್ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದಲ್ಲೂ ಸ್ನಾತಕೋತ್ತರ ಪದವಿ ಪಡೆದ ಇವರು, ಅಮೆರಿಕ ಹಾಗೂ ಮಧ್ಯಪ್ರಾಚ್ಯ ದೇಶದ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಲವು ವರುಷಗಳ ಕಾಲ ಕೆಲಸ ಮಾಡಿದರು.

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರ 'ಅಕ್ಷಯ ಕಾವ್ಯ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಸಂದಿದೆ. ತಿರುಮಲೇಶ್ ನವ್ಯೋತ್ತರ ಚಿಂತಕರು. ಚಿತ್ರಕಲೆಯಲ್ಲಿ ಬಹಳ ಆಸಕ್ತಿವುಳ್ಳವರು. ಕವಿಯಾಗಿ ಅವರು ಕಟ್ಟುವ ಶಬ್ದಚಿತ್ರಗಳಲ್ಲಿ ಅವರ ಚಿತ್ರಕಲಾಸಕ್ತಿಯನ್ನೂ ಗುರುತಿಸಬಹುದು. ತತ್ವಶಾಸ್ತ್ರ ಅವರಿಗೆ ಆಳವಾದ ಅಭ್ಯಾಸವಿದ್ದ ಕ್ಷೇತ್ರ. ಪಾಶ್ಚಿಮಾತ್ಯ ಹಾಗೂ ಭಾರತೀಯ ತತ್ವಶಾಸ್ತ್ರಗಳ ಅಪಾರ ಜ್ಞಾನವಿದ್ದ ಅವರ ಬಹುಶ್ರುತ ಆಸಕ್ತಿಯ ಆಳ, ಅಗಲವನ್ನು ಅವರ ಪತ್ರಿಕಾ ಅಂಕಣಗಳ ಸಂಗ್ರಹಗಳಾದ 'ಆಳ–ನಿರಾಳ' ಸಂಪುಟಗಳಲ್ಲಿ ಕಾಣಬಹುದು. ಅವರ ಅಸ್ತಿತ್ವವಾದದ ಬಗ್ಗೆ ಕನ್ನಡದಲ್ಲಿ ಬರೆದ ಕೃತಿಯೊಂದು ಆಕರ ಗ್ರಂಥವೂ ಹೌದು. ನಾಟಕ, ಕಾವ್ಯ, ಕಾದಂಬರಿ, ವೈಚಾರಿಕ ಬರಹ – ಹೀಗೆ ಅವರ ಅನುವಾದ ಕೃತಿಗಳು ನೂತನ ಜಾಗತಿಕ ಚಿಂತನೆಗಳ ಸಂಗ್ರಹಯೋಗ್ಯ ಕೃತಿಗಳೇ ಆಗಿವೆ.

ಕಾವ್ಯ, ಸಣ್ಣಕತೆ, ಕಾದಂಬರಿ, ವಿಮರ್ಶೆ, ಪ್ರಬಂಧಗಳು– ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಅವರು ಬಹಳ ಮೌಲಿಕವಾದ ಕೊಡುಗೆಯನ್ನಿತ್ತಿದ್ದಾರೆ. 'ಮುಖವಾಡಗಳು', 'ವಠಾರ' ಮೊದಲಾದ ಕವನ ಸಂಗ್ರಹಗಳ ಮೂಲಕ ನವ್ಯ ಸಾಹಿತ್ಯದ ಗಮನಾರ್ಹ ಕವಿಯಾಗಿ ಬೆಳೆದರು. ನವ್ಯ ಸಾಹಿತ್ಯದ ಗಮನಾರ್ಹ ಸಂಕಲನ ಎಂದು ಪರಿಗಣಿತವಾದ 'ಮಹಾಪ್ರಸ್ಥಾನ' ಸಂಕಲನದ (1971) ಬಳಿಕ ಕವಿ ಅಡಿಗರಿಂದ ಭಿನ್ನವಾದ ಚಿಂತನೆಗೆ ತೊಡಗಿದ ತಿರುಮಲೇಶರ 'ಮುಖಾಮುಖಿ' ಕವನ ಸಂಕಲನ (1978) ಅವರನ್ನು ನವ್ಯರಿಂದ ಭಿನ್ನನೆಲೆಗೆ ಒಯ್ದಿತು. ಆ ಬಳಿಕ 'ಪಾಪಿಯೂ' ಕಥನ ಕಾವ್ಯ, 'ಅವಧ' ಕವನ ಸಂಕಲನ ಮೂಲಕ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ನಡೆಸಿದರು.

ಅಕ್ಷಯ ಕಾವ್ಯ, ಅವ್ಯಯ ಕಾವ್ಯ ಮೊದಲಾದ ಕಾವ್ಯಗಳು ಅವರ ಕಾವ್ಯ ಸಾಧನೆಗಳನ್ನು ಇನ್ನೊಂದು ಮಜಲಿಗೆ ಒಯ್ದವು. ಅವುಗಳ ಜೊತೆ ಜೊತೆಯಲ್ಲಿ ಸತತವಾಗಿ ಅವರು ಕನ್ನಡ, ಇಂಗ್ಲಿಷ್ ಸಾಹಿತ್ಯಗಳ ಬಗ್ಗೆ ಕನ್ನಡದಲ್ಲಿ ವಿಮರ್ಶೆಗಳನ್ನು ಬರೆಯುತ್ತಿದ್ದರು. ಇಂಗ್ಲಿಷ್‌ನಲ್ಲೂ ಕೃತಿ ರಚನೆ ಮಾಡುತ್ತಿದ್ದರು. ಡೆರಿಡಾನ ಬಗ್ಗೆ ಅವರು ಇಂಗ್ಲಿಷಿನಲ್ಲಿ ಬರೆದ ಕೃತಿ (ಡೆರಿಡಾಸ್ ಹೀಲ್ ಆಫ್ ಅಖಿಲಿಸ್ ಅಂಡ್ ಅದರ್ ಎಸ್ಸೇಸ್) ಕೃತಿ ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದಿತ್ತು.

ಶೈಲಿಶಾಸ್ತ್ರದ ಹಿನ್ನೆಲೆಯಲ್ಲಿ ಅವರು ಬರೆದ ಬೇಂದ್ರೆಯವರ ಕಾವ್ಯ ಶೈಲಿ ಎಂಬ ಲೇಖನ ಇಂದಿಗೂ ಬೇಂದ್ರೆ ಕಾವ್ಯಾಧ್ಯಯನದಲ್ಲೊಂದು ಮೈಲಿಗಲ್ಲು. ಹಾಗೆಯೇ ಅವರು ಪುರಂದರದಾಸರ ಬಗ್ಗೆ, ಹಳೆಗನ್ನಡ ಶೈಲಿಯ ಬಗ್ಗೆ, ಕನ್ನಡ ವ್ಯಾಕರಣದ ಬಗ್ಗೆ ಬರೆದವೂ ಗಮನಾರ್ಹ ಕೃತಿಗಳು. ವಾಗರ್ಥ, ಉಲ್ಲೇಖ, ಕಾವ್ಯಕಾರಣ, ಹೀಗೆ ಅವರ ವಿಮರ್ಶಾ ಕೃತಿಗಳ ಕೊಡುಗೆಯೂ ದೊಡ್ಡದು.

ಅಸ್ತಿತ್ವವಾದಿ ಚಿಂತಕ ಹೈಡೆಗರ್ 'ಬೀಯಿಂಗ್ ಆನ್ ದ ವರ್ಲ್ಡ್' ಎಂಬ ತಾತ್ವಿಕತೆಯನ್ನು ವಿವರಿಸುತ್ತಾರೆ. ಅದನ್ನು ವಿವರಿಸುವ ಸಂದರ್ಭದಲ್ಲಿ ಪ್ರಸಿದ್ಧ ಚಿತ್ರಕಲಾವಿದ ವ್ಯಾನ್‌ಗಾಫ್‌ನ ಬೂಟುಗಳ ಚಿತ್ರದ ಉದಾಹರಣೆ ನೀಡುತ್ತಾರೆ. ಅವು ಬೂಟುಗಳಾಗಿದ್ದೂ ಇನ್ನೇನನ್ನೋ ಹೇಳುತ್ತವೆ. ತಿರುಮಲೇಶ್ ಕಾವ್ಯ ಚಿತ್ರಗಳು ಹಾಗೆ. ಅವು ಆ ವಸ್ತು–ವ್ಯಕ್ತಿಗಳಾಗಿದ್ದೂ ಕವಿ ಮನಸ್ಸಿನ ಏನೇನನ್ನೋ ಕಾಣಿಸುತ್ತವೆ. ತಿರುಮಲೇಶ್‌ರ 'ವಾನ್‌ಗಾಫ್‌ನ ಬೂಟುಗಳು' ಎಂಬ ಕವನ ಪ್ರಸಿದ್ಧ ಚಿತ್ರಗಾರ ವ್ಯಾನ್‌ಗಾಫ್ ಮಾಡಿದ ಬೂಟಿನ ಚಿತ್ರಗಳನ್ನು ಧ್ವಾನಿಸುತ್ತದೆ.

ವಾನ್‌ಗಾಫ್ ಆಯ್ದುಕೊಂಡ ಸಾಮಾನ್ಯ ವಿಚಾರ ಕಲೆಯ ವಸ್ತುವಲ್ಲ ಎಂದು ಹಲವು ಕಲಾ ವಿಮರ್ಶಕರು ಬರೆದರು. ವಾನ್‌ಗಾಫ್ ರೈತರ, ಕಾರ್ಮಿಕರ ಬೂಟುಗಳ ಹಲವು ಚಿತ್ರಗಳನ್ನು ಬರೆದು ಚರಿತ್ರೆಗೆ ಸೇರಿಹೋದ. ತಿರುಮಲೇಶ್ ಕವನ, ಆ ವಿಮರ್ಶಕರು ಏನಾದರು ಎಂದು ಕೇಳಿ, ಆ ಬೂಟಿನಡಿಗೆ ಸೇರಿ ಹೋದರು ಎನ್ನುತ್ತದೆ. ಅದು ವರ್ತಮಾನವನ್ನು ಅರಿಯದ ವಿಮರ್ಶೆಯ ಗತಿ. ಯಾವುದೇ ಕವನ, ಬರಹ, ಚಿಂತನೆಯಲ್ಲೂ ತಿರುಮಲೇಶ್ ಸಾಮಾನ್ಯತೆಯ ಆರಾಧಕ. ಸಾಮಾನ್ಯ ವಸ್ತುಗಳಿಂದ, ಅನುಭವಗಳಿಂದ ಅವರು ಅಸಾಮಾನ್ಯ ಕಾವ್ಯಾನುಭವ ನೀಡುತ್ತಾರೆ. ಇದ್ದಿಲ ಕೆಲಸದ ಪೆಂಟಯ್ಯನ ಅಂಗಿ, ಹೈದರಾಬಾದಿನ ಅಬೀಡ್ಸ್‌ನಲ್ಲಿ ರಸ್ತೆ ದಾಟುವುದು, ಎದುರಿನ ಕಟ್ಟಡದ ಬಾಲ್ಕನಿಯಲ್ಲಿ ಹೆಂಗಸು ನಿತ್ಯ ತಲೆ ಬಾಚುವುದು, ಚೋರಟೆ ಹುಳ, ಕಿಟ್ಟುಣ್ಣಿ ಸರ್ಕಸ್, ಮನೆಯೊಳಗೆ ಕಂಡು ಮುಖಾಮುಖಿಯಾದ ಬೆಕ್ಕು– ಎಲ್ಲಾ ಸಾಮಾನ್ಯವೆಂದು ಕಾಣುವ ವಸ್ತು ವಿಚಾರಗಳೂ ಅವರಲ್ಲೊಂದು ಕಾವ್ಯಾನುಭವವನ್ನು ಹುಟ್ಟಿಸುತ್ತವೆ.

ತಾವೇ ಕಟ್ಟಿದ ತಮ್ಮ ಕಾವ್ಯ ರೀತಿಗಳನ್ನು ತಾವೇ ಮುರಿಯುತ್ತಾ ಬೆಳೆದರು. ಮಕ್ಕಳಿಗಾಗಿಯೂ ಸಾಹಿತ್ಯ ರಚಿಸಿದ ಇವರು ತಮ್ಮ ಕೊನೆಯ ಎರಡು ವರ್ಷಗಳಲ್ಲಿ ಹತ್ತಕ್ಕೂ ಹೆಚ್ಚು ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದರು. ಸಾರ್ವಜನಿಕ ಜೀವನದಲ್ಲಿ ಕೊನೆವರೆಗೂ ತಮಗೆ ಅನಿಸಿದ್ದನ್ನು ನೇರವಾಗಿ ಹೇಳಬಲ್ಲ ಪ್ರಜಾಪ್ರಭುತ್ವವಾದಿ ಅವರಾಗಿದ್ದರು. ಅಂತಹ ಸಂವೇದನಾಶೀಲ, ಪಾಂಡಿತ್ಯಪೂರ್ಣ ಕವಿ ತೀರಿಹೋಗಿ ಉಂಟಾದ ಖಾಲಿ ಜಾಗವನ್ನು ಇನ್ನೊಬ್ಬ ಕವಿ ತುಂಬಲು ತುಂಬಾ ದಿನಗಳು ಬೇಕಾಗುತ್ತವೆ. ❖

ಮಹದಾಯಿ ವಿವಾದ: ಅಮಿತ್ ಶಾ ಹೇಳಿಕೆ ಪ್ರಶ್ನಿಸಿದ ಗೋವಾ ಸಚಿವ

ಪ್ರಜಾವಾಣಿ ವಾರ್ತೆ

ಪಣಜಿ: ಬಿಜೆಪಿಯ ಕೇಂದ್ರ ನಾಯಕತ್ವದ ವಿರುದ್ಧ ಗೋವಾ ಸಚಿವರೊಬ್ಬರು ಪ್ರತಿರೋಧ ತೋರಿರುವ ಅಪರೂಪದ ವಿದ್ಯಮಾನ ಸೋಮವಾರ ನಡೆದಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರುಮಹದಾಯಿ ವಿವಾದದ ಕುರಿತು ಬೆಳಗಾವಿಯಲ್ಲಿ ಶನಿವಾರ ನೀಡಿದ್ದ ಹೇಳಿಕೆಯನ್ನು ರಾಜ್ಯ ಲೋಕೋಪಯೋಗಿ ಸಚಿವ ನಿಲೇಶ್ ಕಬ್ರಾಲ್ ಅವರು ಬಹಿರಂಗವಾಗಿ ಪ್ರಶ್ನಿಸಿದ್ದಾರೆ.

'ಕೇಂದ್ರ ಸರ್ಕಾರವು ಗೋವಾ ಮತ್ತು ಕರ್ನಾಟಕದ ಬಿಜೆಪಿ ಸರ್ಕಾರಗಳ ಜೊತೆ ಚರ್ಚಿಸಿ, ಸುದೀರ್ಘ ಕಾಲದ ಮಹದಾಯಿ ವಿವಾದವನ್ನು ಬಗೆಹರಿಸಿದೆ. ಕರ್ನಾಟಕದ ಕಡೆ ಮಹದಾಯಿ ನದಿ ನೀರು ತಿರುಗಿಸಲು ಅನುವು ಮಾಡಿ ಕರ್ನಾಟಕಕ್ಕೆ ಅನುಕೂಲ ಮಾಡಿಕೊಟ್ಟಿದೆ' ಎಂದು ಅಮಿತ್ ಶಾ ಅವರು 'ಜನಸಂಕಲ್ಪ ಯಾತ್ರೆ'ಯಲ್ಲಿ ಹೇಳಿದ್ದರು.

ಈ ಹೇಳಿಕೆ ಅಲ್ಲಗಳೆದಿರುವ ನಿಲೇಶ್ ಕಬ್ರಾಲ್, 'ಅಮಿತ್ ಶಾ ಏನು ಹೇಳುತ್ತಿದ್ದಾರೋ ತಿಳಿದಿಲ್ಲ. ಈ ರೀತಿಯ ಬೆಳವಣಿಗೆಗಳು ನಡೆದಿಲ್ಲ. ಮಹದಾಯಿ ನದಿ ನೀರನ್ನು ಕರ್ನಾಟಕದ ಕಡೆ ತಿರುಗಿಸಲು ನಮ್ಮ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಒಪ್ಪಿಗೆ ನೀಡಿಲ್ಲ. ಮುಂದೆ ನೀಡುವುದೂ ಇಲ್ಲ. ರಾಜ್ಯದ ನಿಯೋಗವು ಅಮಿತ್ ಶಾ ಅವರನ್ನು ಮುಂದಿನ ಬಾರಿ ಭೇಟಿ ಆದಾಗ ಈ ಹೇಳಿಕೆ ಕುರಿತು ಅವರನ್ನು ಪ್ರಶ್ನಿಸಲಿದೆ' ಎಂದರು.

ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸುತ್ತೀರಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಖಂಡಿತವಾಗಿಯೂ ಖಂಡಿಸುತ್ತೇನೆ. ಕೇಂದ್ರದ ಬಿಜೆಪಿ ಆಡಳಿತವು ಮಹದಾಯಿ ನೀರು ಹಂಚಿಕೆ ವಿಚಾರದಲ್ಲಿ ಗೋವಾವನ್ನು ಬೆಂಬಲಿಸದಿದ್ದರೆ, ಗೋವಾ ಕಾನೂನಾತ್ಮಕ ಹೋರಾಟ ಕೈಗೆತ್ತಿಕೊಳ್ಳಲಿದೆ' ಎಂದರು.

'ರಾಜಿ ಇಲ್ಲ': ಮಹದಾಯಿ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಮತ್ತು ನದಿ ನೀರನ್ನು ಬೇರೆಡೆಗೆ ತಿರುಗಿಸದಂತೆ ರಕ್ಷಿಸಲು ತಮ್ಮ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಹೇಳಿದ್ದಾರೆ.

ದಾಭೋಲ್ಕರ್ ಹತ್ಯೆ ತನಿಖೆ ಮುಕ್ತಾಯ: ಬಾಂಬೆ ಹೈಕೋರ್ಟ್‌ಗೆ ಸಿಬಿಐ ಮಾಹಿತಿ

ಮುಂಬೈ (ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ ಮೊಕದ್ದಮೆಯ ತನಿಖೆಯನ್ನು ಪೂರ್ಣಗೊಳಿಸಲಾಗಿದೆ. ತನಿಖೆಯನ್ನು ಸಮಾಪ್ತಿಗೊಳಿಸುವಂತೆ ಶಿಫಾರಸು ಮಾಡಿರುವ ತನಿಖಾಧಿಕಾರಿಯು ಸಂಬಂಧಪಟ್ಟ ಅಧಿಕಾರಿಗೆ ಈ ಕುರಿತು ವರದಿ ಸಲ್ಲಿಸಿದ್ದಾರೆ ಎಂದು ಬಾಂಬೆ ಹೈಕೋರ್ಟ್‌ಗೆ ಸಿಬಿಐ ಸೋಮವಾರ ತಿಳಿಸಿದೆ.

ದಾಭೋಲ್ಕರ್ ಹತ್ಯೆ ಪ್ರಕರಣದ ತನಿಖೆಯ ಸದ್ಯದ ಸ್ಥಿತಿ ಕುರಿತು ಮಾಹಿತಿ ನೀಡುವಂತೆ ಹೈಕೋರ್ಟ್ ಈ ತಿಂಗಳ ಆರಂಭದಲ್ಲಿ ಹೇಳಿತ್ತು. ಈ ಮೊಕದ್ದಮೆಯಲ್ಲಿ ಈ ವರೆಗೂ ಐವರು ಆರೋಪಿಗಳ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿದೆ ಎಂದು ಸಿಬಿಐ ಪರವಾಗಿ ಹೈಕೋರ್ಟ್‌ನಲ್ಲಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್(ಎಎಸ್‌ಜಿ) ಅನಿಲ್ ಸಿಂಗ್ ಅವರು ನ್ಯಾಯಮೂರ್ತಿಗಳಾದ ಎ.ಎಸ್. ಗಡ್ಕರಿ ಮತ್ತು ಪಿ.ಡಿ. ನಾಯಕ್ ಅವರಿದ್ದ ವಿಭಾಗೀಯ ಪೀಠಕ್ಕೆ ತಿಳಿಸಿದರು.

ಈ ಮೊಕದ್ದಮೆಯ ತನಿಖೆಯನ್ನು ಸಿಬಿಐ ಸಂಪೂರ್ಣಗೊಳಿಸಿದೆ. 32 ಸಾಕ್ಷಿಗಳಲ್ಲಿ 15 ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಲಾಗಿದೆ. ಮೊಕದ್ದಮೆ ಸಮಾಪ್ತಿಗೊಳಿಸುವಂತೆ ಶಿಫಾರಸು ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತನಿಖಾಧಿಕಾರಿಯು ವರದಿ ಸಲ್ಲಿಸಿದ್ದಾರೆ. ಅಂತಿಮ ನಿರ್ಧಾರವನ್ನು ಸಂಬಂಧಪಟ್ಟ ಅಧಿಕಾರಿ ತೆಗೆದುಕೊಳ್ಳಬೇಕಿದೆ ಎಂದು ಅನಿಲ್ ಸಿಂಗ್ ಹೇಳಿದ್ದಾರೆ. ಜೊತೆಗೆ, ಸಮಾಪ್ತಿ ವರದಿ ಕುರಿತು ನಿರ್ಧಾರ ಕೈಗೊಳ್ಳಲು ಸಿಬಿಐಗೆ ಮೂರು ವಾರಗಳ ಕಾಲಾವಕಾಶವನ್ನೂ ನೀಡುವಂತೆಯೂ ಅವರು ಪೀಠಕ್ಕೆ ಮನವಿ ಮಾಡಿದ್ದಾರೆ.

ಮನವಿಗೆ ಸಮ್ಮತಿಸಿದ ಹೈಕೋರ್ಟ್, ಈ ಮೊಕದ್ದಮೆಯ ಮುಂದಿನ ವಿಚಾರಣೆಯನ್ನು ಮೂರು ವಾರಗಳ ನಂತರ ನಿಗದಿಪಡಿಸಿದೆ.

ಇದೇ ವೇಳೆ, ಸಿಬಿಐ ತನಿಖೆ ಕುರಿತು ಹೈಕೋರ್ಟ್‌ನಲ್ಲಿ ಆಕ್ಷೇಪ ವ್ಯಕ್ತಪಡಿಸಿರುವ ದಾಭೋಲ್ಕರ್ ಮಗಳ ಪರ ವಕೀಲರು, ಈ ಮೊಕದ್ದಮೆಯ ತನಿಖೆಯನ್ನು ಸಿಬಿಐ ಸಮರ್ಪಕವಾಗಿ ನಡೆಸಿಲ್ಲ. ಮೊಕದ್ದಮೆ ಕುರಿತ ಸಾಕಷ್ಟು ಅಂಶಗಳ ಕುರಿತು ಇನ್ನೂ ತನಿಖೆ ನಡೆಸಬೇಕಿದೆ ಎಂದಿದ್ದಾರೆ. ಜೊತೆಗೆ, ಈ ತನಿಖೆಯ ಪ್ರಕ್ರಿಯೆಗಳ ಮೇಲ್ವಿಚಾರಣೆ ನಡೆಸುವಂತೆ ಅವರು ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಅತ್ಯಾಚಾರ ಪ್ರಕರಣ: ಅಸಾರಾಂ ಬಾಪು ಅಪರಾಧಿ

ಗಾಂಧಿನಗರ (ಪಿಟಿಐ): ಶಿಷ್ಯೆಯೊಬ್ಬರ ಮೇಲಿನ ಅತ್ಯಾಚಾರ ಪ್ರಕರಣವೊಂದರಲ್ಲಿ ಸ್ವಯಂ ಘೋಷಿತ ದೇವಮಾನವ ಅಸಾರಾಂ ಬಾಪುಗೆ ಗುಜರಾತ್‌ನ ಸೆಷನ್ಸ್ ನ್ಯಾಯಾಲಯವು ಸೋಮವಾರ ಅಪರಾಧಿ ಎಂದು ತೀರ್ಪು ನೀಡಿದೆ.



ಅಸಾರಾಂ ಬಾಪು

ಸೆಷನ್ಸ್ ನ್ಯಾಯಾಧೀಶ ಡಿ.ಕೆ. ಸೋನಿ ಅವರು ಜ.31ಕ್ಕೆ ಶಿಕ್ಷೆಯ ಪ್ರಮಾಣ ಘೋಷಿಸುವುದಾಗಿ ಹೇಳಿದರು. 2013ರ ಈ ಪ್ರಕರಣದಲ್ಲಿ ಅಸಾರಾಂ ಬಾಪುವಿನ ಪತ್ನಿ ಸೇರಿ ಪ್ರಕರಣದ ಆರೋಪಿಗಳಾಗಿದ್ದ ಆರು ಮಂದಿಯನ್ನು ನ್ಯಾಯಾಲಯ ಖುಲಾಸೆಗೊಳಿಸಿತು. ಪೂರಕ ಸಾಕ್ಷ್ಯಾಧಾರ ಇಲ್ಲದ ಕಾರಣ ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ ಎಂದು ಕೋರ್ಟ್ ಹೇಳಿದೆ.

'ಐಪಿಸಿ ಸೆಕ್ಷನ್ 376 2(ಸಿ) (ಅತ್ಯಾಚಾರ), 377 (ಅಸಹಜ ಅಪರಾಧಗಳು) ಸೇರಿದಂತೆ ಅಕ್ರಮ ಬಂಧನ ಸಂಬಂಧ ಇರುವ ಸೆಕ್ಷನ್‌ಗಳ ಅನ್ವಯ ಶಿಕ್ಷೆ ವಿಧಿಸಲಾಗಿದೆ' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆರ್.ಸಿ. ಕೊಡೇಕರ್ ಅವರು ಸೋಮವಾರ ಮಾಹಿತಿ ನೀಡಿದರು.

2001ರಿಂದ 2006ರ ವರೆಗೆ ಬೇರೆ ಬೇರೆ ಸಂದರ್ಭಗಳಲ್ಲಿ ತನ್ನ ಶಿಷ್ಯೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದಾರೆ. ಈ ವೇಳೆಯಲ್ಲಿ ಮಹಿಳೆಯು ಅಸಾರಾಂ ಬಾಪು ಆಶ್ರಮದಲ್ಲಿ ಇದ್ದರು. ಅಹಮದಾಬಾದ್‌ನ ಛಂದ್‌ಖೇಡಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅತ್ಯಾಚಾರ ಪ್ರಕರಣವೊಂದರಲ್ಲಿ ಅಸಾರಾಂ ಬಾಪು ಈಗಾಗಲೇ ಜೋಧಪುರ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ.



ಗಾಂಧಿ ಸ್ಮರಣೆ ಮಹಾತ್ಮ ಗಾಂಧಿ ಪುಣ್ಯತಿಥಿ ಅಂಗವಾಗಿ ಮಹಾರಾಷ್ಟ್ರದ ಪುಣೆಯಲ್ಲಿ ಭಾನುವಾರ ನಡೆದ ಸ್ವಚ್ಛತಾ ಆಂದೋಲನದಲ್ಲಿ ಸಾಮಾಜಿಕ ಹೋರಾಟಗಾರರೊಬ್ಬರು ಗಾಂಧಿ ರೀತಿ ವೇಷಭೂಷಣ ಧರಿಸಿ ಭಾಗವಹಿಸಿದ್ದರು –ಪಿಟಿಐ ಚಿತ್ರ

ಬಿಜೆಪಿ ಜೊತೆ ಮೈತ್ರಿ ಇಲ್ಲ: ನಿತೀಶ್

ಪಟ್ನಾ (ಪಿಟಿಐ): 'ನಾನು ಸಾಯುತ್ತೇನೆಯೇ ಹೊರತು ಬಿಜೆಪಿ ಜತೆ ಪುನಃ ಕೈಜೋಡಿಸುವುದಿಲ್ಲ' ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸೋಮವಾರ ಹೇಳಿದ್ದಾರೆ. 'ಜನಪ್ರಿಯವಲ್ಲದ ಜೆಡಿಯು' ಜೊತೆ ಮತ್ತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಬಿಜೆಪಿ ನೀಡಿದ್ದ ಹೇಳಿಕೆಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಗಾಂಧಿ ಪುಣ್ಯತಿಥಿ ಅಂಗವಾಗಿ ನಡೆದ ಕಾರ್ಯಕ್ರಮದ ವೇಳೆ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು.

ತಮ್ಮ ನಾಯಕತ್ವದ ಕಾರಣಕ್ಕಾಗಿ ರಾಜ್ಯದಲ್ಲಿ ಬಿಜೆಪಿ ಯಶಸ್ಸು ಕಂಡಿದ್ದು ಎಂದ ಅವರು, 'ಬಿಜೆಪಿಯ ಹಿಂದುತ್ವ ಸಿದ್ಧಾಂತದ ಬಗ್ಗೆ ಯಾವಾಗಲೂ ಎಚ್ಚರವಾಗಿರುವ ಮುಸ್ಲಿಮರು ನನ್ನ ನಾಯಕತ್ವದ ಕಾರಣಕ್ಕಾಗಿ ಭದ್ರತಾ ಭಾವ ಹೊಂದಿದ್ದರು. ಹೀಗಾಗಿ ಬಿಜೆಪಿಗೆ ಮುಸ್ಲಿಮರ ಮತಗಳೂ ದೊರಕುತ್ತಿದ್ದವು' ಎಂದರು.

'ಹಿಂಸೆ ಅಂತ್ಯವೇ ಯಾತ್ರೆ ಗುರಿ'

ಒಂದನೇ ಪುಟದಿಂದ...

'ಹಿಂಸೆಯಿಂದ ಆಗುವ ನೋವು ಎಂಥದ್ದು ಎಂಬುದು ಕಾಶ್ಮೀರದ ಜನರಿಗೆ, ಸೈನಿಕರ ಕುಟುಂಬದವರಿಗೆ, ನನಗೆ ಮತ್ತು ನನ್ನ ತಂಗಿಗೆ ಗೊತ್ತಿದೆ. ಫೋನ್ ಕರೆ ಎಂಬುದನ್ನು ನಾವು ಸಾಮಾನ್ಯವೆಂಬಂತೆ ನೋಡಲು ಸಾಧ್ಯವೇ ಇಲ್ಲ. ಅದನ್ನು ನಾವು ಬೇರೆ ರೀತಿಯಲ್ಲೇ ನೋಡುತ್ತೇವೆ. ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ, ತರಗತಿಯಲ್ಲಿ ಪಾಠ ಕೇಳುತ್ತಿದ್ದೆ. ಪ್ರಾಂಶುಪಾಲರ ಕಚೇರಿಗೆ ನನ್ನನ್ನು ಕರೆಸಿಕೊಳ್ಳಲಾಯಿತು. ಮನೆಯಿಂದ ನನಗೆ ಫೋನ್ ಕರೆ ಬಂದಿತ್ತು. ಫೋನ್ ಕಿವಿಗೆ ಇಟ್ಟೊಡನೆ ಮನೆಕೆಲಸದ ಮಹಿಳೆ ಅಳುತ್ತಿದ್ದದ್ದು ಕೇಳಿಸಿತು. 'ಅಜ್ಜಿಗೆ ಗುಂಡು ಹೊಡೆದಿದ್ದಾರೆ' ಎಂದು ಅರಚುತ್ತಿದ್ದರು. ಅದಾಗಿ ಐದಾರು ವರ್ಷಗಳಲ್ಲಿ ನಾನು ಅಮೆರಿಕದಲ್ಲಿದ್ದೆ. ಆಗಲೂ ನನಗೆ ಅಂತಹದ್ದೇ ಕರೆ ಬಂತು, ನನ್ನ ಅಪ್ಪನ ಹತ್ಯೆಯ ಕೆಟ್ಟಸುದ್ದಿ ಅದಾಗಿತ್ತು. ಆ ನೋವನ್ನು ಅನುಭವಿಸಿದವರಿಗೆ ಮಾತ್ರವೇ ಅದು ಗೊತ್ತು, ನನ್ನ ಹೃದಯದಲ್ಲಿ ಅಂತಹ ನೋವು ಮಡುಗಟ್ಟಿದೆ. ನನ್ನ ತಂಗಿಗೆ ಆ ನೋವು ಗೊತ್ತಿದೆ. ಕಾಶ್ಮೀರದ ಜನರಿಗೆ, ಸೈನಿಕರ ಮನೆಯವರಿಗೆ ಅಂತಹ ಕರೆ ಬಂದಾಗ ಭಯವಾಗುತ್ತದೆ. ತಮ್ಮವರು ಹಿಂಸೆಗೆ ಬಲಿಯಾದಾಗ ಇವರೆಲ್ಲರೂ ನೋವುಂಡಿದ್ದಾರೆ. ಹಿಂಸೆಗೆ ಕುಮ್ಮಕ್ಕು ನೀಡುವಂತಹ ಮೋದಿ, ಶಾ, ಡೊಭಾಲ್ ಮತ್ತು ಆರ್‌ಎಸ್‌ಎಸ್‌ನವರಿಗೆ ಈ ನೋವು ಅರ್ಥವಾಗುವುದಿಲ್ಲ. ದೇಶದಲ್ಲಿ ಮುಂದೊಂದು ದಿನ ಯಾರಿಗೂ ಅಂತಹ ಕರೆ ಬರಬಾರದು ಎಂಬುದೇ ಈ ಯಾತ್ರೆಯ ಉದ್ದೇಶ' ಎಂದು ರಾಹುಲ್ ಹೇಳಿದರು.

ನನ್ನ ಮನೆ ಕಾಶ್ಮೀರಕ್ಕೆ ನಾನು ಬಂದಿದ್ದೇನೆ: ರಾಹುಲ್

'ನನ್ನ ಪೂರ್ವಜರು ಕಾಶ್ಮೀರದಿಂದ ದಕ್ಷಿಣದ ಅಲಹಾಬಾದ್‌ನತ್ತ ಹೋಗಿದ್ದರು. ಈಗ ಇಲ್ಲಿಗೆ ಯಾತ್ರೆ ನಡೆಸುವಾಗ, ನಾನು ನನ್ನ ಮನೆಗೆ ವಾಪಸಾಗುತ್ತಿದ್ದೇನೆ ಎಂದು ಅನಿಸುತ್ತಿದೆ' ಎಂದು ರಾಹುಲ್ ಹೇಳಿದರು.

'ನಮ್ಮ ಸುತ್ತ ನಾವು ಕಟ್ಟಿಕೊಂಡಿರುವ ಕೋಟೆಯನ್ನು ನಾವೇ ಒಡೆಯಬೇಕಿದೆ. ಆ ಮೂಲಕ ಶೂನ್ಯವನ್ನು ಸಾಧಿಸಬೇಕು. ಹಿಂದೂ ಧರ್ಮದಲ್ಲಿ ಇದನ್ನು ಶೂನ್ಯ ಎನ್ನುತ್ತೇವೆ. ಇಸ್ಲಾಂನಲ್ಲಿ ಇದನ್ನೇ ಫನಾ ಎನ್ನುತ್ತಾರೆ. ಈ ವಿಚಾರಧಾರೆಗಳನ್ನು ಒಟ್ಟಿಗೇ ಕೊಂಡೊಯ್ಯುವುದೇ ಕಾಶ್ಮೀರಿಯತೆ. ಗಾಂಧೀಜಿ ಇದನ್ನೇ ವೈಷ್ಣವಜನತೋ ಎಂದರು, ಅಸ್ಸಾಂನಲ್ಲಿ ಶಂಕರ್‌ದೇವ್ ಇದನ್ನೇ ಹೇಳಿದರು. ಕರ್ನಾಟಕದಲ್ಲಿ ಬಸವಣ್ಣ ಇದನ್ನೇ ಪ್ರತಿಪಾದಿಸಿದರು. ತಮಿಳುನಾಡಿನಲ್ಲಿ ತಿರುವಳ್ಳುವರ್, ಕೇರಳದಲ್ಲಿ ನಾರಾಯಣಗುರು, ಮಹಾರಾಷ್ಟ್ರದಲ್ಲಿ ಜ್ಯೋತಿಬಾ ಫುಲೆ ಇದನ್ನೇ ಹೇಳಿದರು' ಎಂದು ರಾಹುಲ್ ಹೇಳಿದರು.

ಯಾತ್ರೆಯಲ್ಲಿ ಏನೇನು?

12	ಸಾರ್ವಜನಿಕ ಸಭೆಗಳು
100	ಬೀದಿ ಬದಿ ಸಭೆಗಳು
13	ಮಾಧ್ಯಮ ಗೋಷ್ಠಿಗಳು
100	ಸಂವಾದಗಳು
275	ನಡಿಗೆ ಜೊತೆ ಸಂವಹನಗಳು

ರಾಹುಲ್ ಇಂದು ಇಡೀ ದೇಶಕ್ಕೆ ಭರವಸೆಯ ಆಶಾಕಿರಣವಾಗಿದ್ದಾರೆ. ಗೋಡ್ಸೆ ಸಿದ್ಧಾಂತದವರು ದೇಶದಿಂದ ಕಿತ್ತುಕೊಂಡದ್ದನ್ನು ರಾಹುಲ್ ಗಾಂಧಿ ವಾಪಸ್ ಕೊಡಬಲ್ಲರು

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

ಬ್ರಿಟಿಷ್‌ರಾಜ್‌ನಿಂದ ದೇಶಕ್ಕೆ ಮುಕ್ತಿ ಕೊಡಲು ನಾವೆಲ್ಲರೂ ಒಟ್ಟಾಗಿ ಹೋರಾಡಿದ್ದೇವೆ. ಬಿಜೆಪಿರಾಜ್‌ನಿಂದ ಮುಕ್ತಿ ಪಡೆಯಲು ಜಾತ್ಯತೀತ ಪಕ್ಷಗಳು ಒಟ್ಟಾಗಬೇಕಾಗಿದೆ

ಡಿ.ರಾಜಾ
ಸಿಪಿಐ ನಾಯಕ

ರಾಹುಲ್, ನಿಮ್ಮ ಯಾತ್ರೆಯು ದಕ್ಷಿಣ ಭಾರತದೊಂದಿಗೆ ಉತ್ತರ ಭಾರತವನ್ನು ಜೋಡಿಸಿದೆ. ಪೂರ್ವ ಭಾರತವನ್ನು ಜೋಡಿಸಲು ಇನ್ನೊಂದು ಯಾತ್ರೆ ನಡೆಸಿ

ಉಮರ್ ಅಬ್ದುಲ್ಲಾ
ನ್ಯಾಷನಲ್ ಕಾನ್ಫರೆನ್ಸ್ ನಾಯಕ

ಕೋಮುವಾದಿ ಮತ್ತು ವಿಭಜಕ ಶಕ್ತಿಗಳ ವಿರುದ್ಧದ ಹೋರಾಟದ ನೇತೃತ್ವವಹಿಸಲು ಸಮರ್ಥ ವ್ಯಕ್ತಿ ತಾವು ಎಂಬುದನ್ನು ರಾಹುಲ್ ಗಾಂಧಿ ಸಾಬೀತುಪಡಿಸಿದ್ದಾರೆ

ಎನ್.ಕೆ. ಪ್ರೇಮಚಂದ್ರನ್
ಆರ್‌ಎಸ್‌ಪಿ ನಾಯಕ

ಸಂಕ್ಷಿಪ್ತ ಸುದ್ದಿ

ಪಾಕ್ ಚುನಾವಣೆ: 33 ಕ್ಷೇತ್ರಕ್ಕೂ ಇಮ್ರಾನ್ ಒಬ್ಬರೇ ಅಭ್ಯರ್ಥಿ



ಲಾಹೋರ್ (ಪಿಟಿಐ): ಮಾರ್ಚ್‌ನಲ್ಲಿ ನಡೆಯಲಿರುವ ಪಾಕಿಸ್ತಾನ ಸಂಸತ್ತಿನ ಎಲ್ಲ 33 ಕ್ಷೇತ್ರಗಳ ಉಪಚುನಾವಣೆಯಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಒಬ್ಬರೇ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ ಎಂದು ಪಾಕಿಸ್ತಾನ್ ತೆಹ್ರೀಕ್ ಇ ಇನ್‌ಸಾಫ್(ಪಿಟಿಐ) ಪಕ್ಷ ಘೋಷಿಸಿದೆ.

ಪಕ್ಷದ ಉಪಾಧ್ಯಕ್ಷ ಹಾಗೂ ಮಾಜಿ ವಿದೇಶಾಂಗ ಸಚಿವ ಶಾ ಮಹಮ್ಮೂದ್ ಖುರೇಷಿ ಅವರು ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನದಲ್ಲಿ ಅಸ್ತಿತ್ವದಲ್ಲಿರುವ ಸಮ್ಮಿಶ್ರ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನವಾಗಿ ಇಮ್ರಾನ್ ಈ ನಿರ್ಧಾರಕ್ಕೆ ಬಂದಿದ್ದಾರೆ. ಇಮ್ರಾನ್ ಬಹು ಸ್ಥಾನಗಳಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಿರುವುದು ಇದೇ ಮೊದಲಲ್ಲ. 2022ರ ಅಕ್ಟೋಬರ್‌ನಲ್ಲಿ ನಡೆದ ಹಿಂದಿನ ಉಪಚುನಾವಣೆಗಳಲ್ಲಿ ಇಮ್ರಾನ್ ಎಂಟು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಆರರಲ್ಲಿ ಗೆಲುವು ಸಾಧಿಸಿದ್ದರು.

ಒಂಬತ್ತು ಪಕ್ಷಗಳ ಮೈತ್ರಿಕೂಟದ ಆಡಳಿತಾರೂಢ ಪಾಕಿಸ್ತಾನ್ ಡೆಮಾಕ್ರಟಿಕ್ ಮೂವ್‌ಮೆಂಟ್ (ಪಿಡಿಎಂ) ಉಪಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದಿದೆ. ಪಿಡಿಎಂ ತನ್ನ ನಿರ್ಧಾರಕ್ಕೆ ಅಂಟಿಕೊಂಡಿದ್ದೇ ಆದರೆ, ಪಿಟಿಐ ಯಾವುದೇ ಸಮಸ್ಯೆಯಿಲ್ಲದೆ ಎಲ್ಲಾ ಸ್ಥಾನಗಳನ್ನು ಮರಳಿ ಪಡೆಯಲಿದೆ.

ಶುಕ್ರವಾರ ಪಾಕಿಸ್ತಾನದ ಚುನಾವಣಾ ಆಯೋಗವು ರಾಷ್ಟ್ರೀಯ ಸಂಸತ್ತಿನ 33 ಕ್ಷೇತ್ರಗಳ ಉಪಚುನಾವಣಾ ದಿನಾಂಕವನ್ನು ಘೋಷಿಸಿತ್ತು. ಕಳೆದ ವರ್ಷ ಏಪ್ರಿಲ್‌ನಲ್ಲಿ ನಡೆದ ವಿಶ್ವಾಸಮತ ಯಾಚನೆಯಲ್ಲಿ ಸೋತು ಇಮ್ರಾನ್ ಖಾನ್ ಅಧಿಕಾರ ಕಳೆದುಕೊಂಡಿದ್ದರು. ಬಳಿಕ ಅವರ ಪಕ್ಷದ ಎಲ್ಲ ಸಂಸದರು ರಾಜೀನಾಮೆ ನೀಡಿದ್ದರು.

ಸುಸ್ಥಿರ ಇಂಧನ: ವಿಮಾನ ಪರೀಕ್ಷೆ

ದುಬೈ (ಎಪಿ): ಪರಿಸರಕ್ಕೆ ಇಂಗಾಲ ಹೊರಸೂಸುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಪರಿಸರ ಪೂರಕ ಸುಸ್ಥಿರ ಇಂಧನವನ್ನು ಬಳಸಿ ಎಮಿರೇಟ್ಸ್‌ನ ಬೋಯಿಂಗ್ 777 ವಿಮಾನವನ್ನು ಸೋಮವಾರ ಒಂದು ಗಂಟೆ ಕಾಲ ಪರೀಕ್ಷಾರ್ಥ ಹಾರಾಟ ನಡೆಸಲಾಯಿತು.

ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿದ ವಿಮಾನ ಇಕೆ 2646, ಯಶಸ್ವಿಯಾಗಿ ತನ್ನ ಯಾನ ಕೊನೆಗೊಳಿಸಿತು. ಬೋಯಿಂಗ್‌ನ ಎರಡು ಜನರಲ್ ಎಲೆಕ್ಟ್ರಿಕ್ ಎಂಜಿನ್‌ಗಳಲ್ಲಿ ಒಂದಕ್ಕೆ ಈ ಇಂಧನವನ್ನು ಬಳಸಿ ಚಲಾಯಿಸಲಾಯಿತು. ಇನ್ನೊಂದು ಎಂಜಿನ್‌ಗೆ ಸುರಕ್ಷತೆಗಾಗಿ ಸಾಂಪ್ರದಾಯಿಕ ಜೆಟ್ ಇಂಧನ ತುಂಬಿಸಲಾಗಿತ್ತು.


ಅಮೆರಿಕ ನಾಯಕರ ಜತೆ ಡೊಭಾಲ್ ಮಹತ್ವದ ಸಭೆ

ವಾಷಿಂಗ್ಟನ್ (ಪಿಟಿಐ): ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು 'ನಿರ್ಣಾಯಕ ಮತ್ತು ಹೊಸ ತಂತ್ರಜ್ಞಾನ' (ಐಸಿಇಟಿ) ಕುರಿತು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವನ್ ಸೇರಿದಂತೆ ಅಮೆರಿಕದ ಹಿರಿಯ ನಾಯಕರ ಜತೆ ಮಹತ್ವದ ಮಾತುಕತೆ ನಡೆಸಲಿದ್ದಾರೆ.

ಭಾರತ– ಅಮೆರಿಕದ ನಡುವೆ ಪರಮಾಣು ಒಪ್ಪಂದದ ಬಳಿಕ ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಈಗ ನಡೆಯುವ ಮಾತುಕತೆಗಳು 'ಮಹತ್ವದ ಮೈಲಿಗಲ್ಲು' ಆಗಬಹುದು ಎಂದು ಅಧಿಕಾರಿಗಳು, ಶಿಕ್ಷಣ ತಜ್ಞರು ಮತ್ತು ಉದ್ಯಮಿಗಳು ವಿಶ್ಲೇಷಿಸಿದ್ದಾರೆ.

ಈ ಮಹತ್ವದ ಮಾತುಕತೆ ಸಲುವಾಗಿ ಡೊಭಾಲ್ ಅವರು ಸೋಮವಾರ ಅಮೆರಿಕಕ್ಕೆ ಭೇಟಿ ನೀಡಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,604
ಇಂದಿನ ಅಂತ್ಯ	17,648
▲	44
ದಿನದ ಗರಿಷ್ಠ	17,405

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹465
12 ಮೊಟ್ಟೆಗೆ ₹63
ಮೈಸೂರು
100 ಮೊಟ್ಟೆಗೆ ₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1600)
ಸೋಯಾ (ರಿಫೈನ್ಡ್)	₹1180 (1170)
ಸೂರ್ಯಕಾಂತಿ (ರಿಫೈನ್ಡ್)	₹1190 (1180)
ಪಾಮೋಲಿನ್	₹940 (925)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹139.50
ಆರ್‌ಎಸ್‌ಎಸ್-5 ₹135
ಗುಡ್ ಲಾಟ್ ₹130

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ತುಮಕೂರು	₹11000-11000
ತರೀಕೆರೆ	₹10000-10000
ತುರುವೇಕೆರೆ	₹11160-11160

'ವರ್ಷಾಂತ್ಯಕ್ಕೆ ಬೋಯಿಂಗ್ ಕ್ಯಾಂಪಸ್ ಶುರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಾಣ ಆಗುತ್ತಿರುವ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಕ್ಯಾಂಪಸ್ ವರ್ಷಾಂತ್ಯದ ವೇಳೆಗೆ ಕಾರ್ಯಾಚರಣೆ ಆರಂಭಿಸಲಿದೆ ಎಂದು ಬೋಯಿಂಗ್ ಇಂಡಿಯಾ ಕಂಪನಿ ಸೋಮವಾರ ತಿಳಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೋಯಿಂಗ್ ಇಂಡಿಯಾದ ಅಧ್ಯಕ್ಷ ಸಲೀಲ್ ಗುಪ್ತೆ, '43 ಎಕರೆ ಪ್ರದೇಶದಲ್ಲಿ ₹ 1,629 ಕೋಟಿ ವೆಚ್ಚದಲ್ಲಿ ಕ್ಯಾಂಪಸ್ ನಿರ್ಮಾಣ ಆಗುತ್ತಿದೆ. ವರ್ಷಾಂತ್ಯದ ವೇಳೆಗೆ ಕಾರ್ಯಾಚರಣೆ ಆರಂಭಿಸಲಿದ್ದು, ಅಮೆರಿಕದಾಚೆಗಿನ ಕಂಪನಿಯ ಅತಿದೊಡ್ಡ ಕ್ಯಾಂಪಸ್ ಇದಾಗಿದೆ' ಎಂದರು.

'ವಿಮಾನಯಾನ ಉದ್ಯಮವು ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯ ಮಟ್ಟಕ್ಕೆ ತರಲು 2050ರ ಗುರಿ ಇಟ್ಟುಕೊಂಡಿದೆ. ಆದರೆ ಈ ಗುರಿ ಸಾಧನೆ ಕಷ್ಟ. ಏಕೆಂದರೆ ಕಾರು, ಬೈಕ್, ಬಸ್‌ಗಳಲ್ಲಿ ವಿದ್ಯುತ್ ಚಾಲಿತ ಮೋಟರ್ ಅಳವಡಿಸಿದಷ್ಟು ಸುಲಭ ಇದಲ್ಲ. ವಿಮಾನಯಾನ ಉದ್ಯಮದಲ್ಲಿ ಈ ನಿಟ್ಟಿನಲ್ಲಿ ಮಾಡಿರುವ ಹೂಡಿಕೆಯಿಂದ ಕಾರ್ಯಸಾಧ್ಯವಾಗುವಂತಹ ಯಾವುದೇ ಫಲಿತಾಂಶ ಬಂದಿಲ್ಲ. ಹೀಗಾಗಿ ಇಂಧನ ಕ್ಷಮತೆ ಹೆಚ್ಚಿಸುವ ಅಥವಾ ಕಡಿಮೆ ಇಂಧನ ಬಳಸುವ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಕಡೆಗೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಜೈವಿಕ ಇಂಧನ, ಕೃಷಿ ತ್ಯಾಜ್ಯದಿಂದ ಉತ್ಪಾದನೆ ಆಗುವ ಇಂಧನ ಬಳಕೆ ಮಾಡುವ ಸಾಧ್ಯತೆಗಳ ಪರಿಶೀಲನೆ ನಡೆದಿದೆ' ಎಂದು ಸಲೀಲ್ 'ಪ್ರಜಾವಾಣಿ'ಗೆ ತಿಳಿಸಿದರು.

ಅದಾನಿ ಸಮೂಹದ ಪ್ರತಿಕ್ರಿಯೆ ಎಲ್‌ಐಸಿಯಿಂದ ಪರಿಶೀಲನೆ

ನವದೆಹಲಿ (ರಾಯಿಟರ್ಸ್): ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಗೆ ಅದಾನಿ ಸಮೂಹ ನೀಡಿರುವ ಪ್ರತಿಕ್ರಿಯೆಯನ್ನು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಪರಿಶೀಲಿಸುತ್ತಿದ್ದು, ಸಮೂಹದ ಆಡಳಿತ ಮಂಡಳಿ ಜೊತೆ ಕೆಲವು ದಿನಗಳಲ್ಲಿ ಮಾತುಕತೆ ನಡೆಸಲಿದೆ.

'ವಾಸ್ತವ ಸಂಗತಿ ಏನು ಎಂಬುದು ನಮಗೆ ಖಚಿತವಾಗಿಲ್ಲ... ನಾವು ದೊಡ್ಡ ಹೂಡಿಕೆದಾರ ಆಗಿರುವ ಕಾರಣ, ಆ ಪ್ರಶ್ನೆಗಳನ್ನು ಕೇಳುವ ಅಧಿಕಾರ ನಮಗೆ ಇದೆ. ನಾವು ಖಂಡಿತವಾಗಿಯೂ ಅವರ ಜೊತೆ ಮಾತುಕತೆ ನಡೆಸುತ್ತೇವೆ' ಎಂದು ಎಲ್‌ಐಸಿ ವ್ಯವಸ್ಥಾಪಕ ನಿರ್ದೇಶಕ ರಾಜ್ ಕುಮಾರ್ ಅವರು ತಿಳಿಸಿದ್ದಾರೆ.

'ನಾವು ಅದಾನಿ ಸಮೂಹ ನೀಡಿರುವ 413 ಪುಟಗಳ ವರದಿಯನ್ನು ಪರಿಶೀಲಿಸುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ. ದೀರ್ಘಾವಧಿ ಹೂಡಿಕೆದಾರರು ತನ್ನ ಮೇಲೆ ಸಂಪೂರ್ಣ ವಿಶ್ವಾಸ ಇರಿಸಿದ್ದಾರೆ ಎಂದು ಅದಾನಿ ಸಮೂಹ ಹೇಳಿದ ನಂತರದಲ್ಲಿ ಕುಮಾರ್ ಈ ಹೇಳಿಕೆ ನೀಡಿದ್ದಾರೆ.

'ತೀರಾ ಕೆಟ್ಟದ್ದೇನೂ ಇಲ್ಲವೆಂದಾದರೆ ಎಲ್‌ಐಸಿ ದೀರ್ಘಾವಧಿಯ ದೃಷ್ಟಿಕೋನವನ್ನು ಹೊಂದಿರುತ್ತದೆ. ಈಗಿನ ಸಂದರ್ಭದಲ್ಲಿ ಕೆಟ್ಟದ್ದು ಯಾವುದೂ ಕಾಣುತ್ತಿಲ್ಲ' ಎಂದು ಅವರು ಅದಾನಿ ಸಮೂಹದ ವಿಚಾರವಾಗಿ ಹೇಳಿದ್ದಾರೆ.

ಒಟ್ಟು ಹೂಡಿಕೆ ₹ 36 ಸಾವಿರ ಕೋಟಿ

ಮುಂಬೈ (ಪಿಟಿಐ): ಅದಾನಿ ಸಮೂಹದ ಈಕ್ವಿಟಿ ಹಾಗೂ ಸಾಲಪತ್ರಗಳಲ್ಲಿ ತಾನು ತೊಡಗಿಸಿರುವ ಹಣದ ಒಟ್ಟು ಮೊತ್ತ ₹ 36,474 ಕೋಟಿ ಎಂದು ಎಲ್‌ಐಸಿ ಸೋಮವಾರ ಹೇಳಿದೆ. ತನ್ನ ಒಟ್ಟು ಹೂಡಿಕೆಯ ಶೇಕಡ 1ಕ್ಕಿಂತ ಕಡಿಮೆ ಮೊತ್ತವು ಅದಾನಿ ಸಮೂಹದಲ್ಲಿ ವಿನಿಯೋಗವಾಗಿದೆ ಎಂದು ಅದು ತಿಳಿಸಿದೆ.

ಎಲ್‌ಐಸಿ ನಿರ್ವಹಿಸುತ್ತಿರುವ ಹೂಡಿಕೆಗಳ ಒಟ್ಟು ಮೊತ್ತವು 2022ರ ಸೆಪ್ಟೆಂಬರ್‌ಗೆ ₹ 41.66 ಲಕ್ಷ ಕೋಟಿ ಆಗಿತ್ತು. ಅದಾನಿ ಸಮೂಹದ ಕೆಲವು ಕಂಪನಿಗಳ ಷೇರುಮೌಲ್ಯವು ಭಾರಿ ಇಳಿಕೆ ಕಂಡಿರುವ ಹೊತ್ತಿನಲ್ಲಿ ಎಲ್‌ಐಸಿ ಈ ಮಾಹಿತಿ ನೀಡಿದೆ. ಎಲ್‌ಐಸಿ, ದೇಶದ ಅತಿದೊಡ್ಡ ಸಾಂಸ್ಥಿಕ ಹೂಡಿಕೆದಾರ.

ಈಕ್ವಿಟಿಗಳಲ್ಲಿ ತೊಡಗಿಸಿರುವ ಹಣದ ಮೊತ್ತವು ₹ 30,127 ಕೋಟಿ. ಜನವರಿ 27ರ ವಹಿವಾಟಿನ ಕೊನೆಯಲ್ಲಿ ಈ ಹೂಡಿಕೆಯು ₹ 56,142 ಕೋಟಿ ಆಗಿತ್ತು ಎಂದು ಅದು ಹೇಳಿದೆ.

ಮೂರು ದಿನಗಳಿಂದ ಸಮೂಹದ ಕಂಪನಿಗಳ ಷೇರು ಮೌಲ್ಯ ಇಳಿಕೆ

ಅದಾನಿ: ₹ 5.56 ಲಕ್ಷ ಕೋಟಿ ನಷ್ಟ

ಮುಂಬೈ (ಪಿಟಿಐ): ಅದಾನಿ ಸಮೂಹದ ಕಂಪನಿಗಳ ವಹಿವಾಟಿನ ಮೇಲೆ ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯು ಬೀರಿರುವ ನಕಾರಾತ್ಮಕ ಪರಿಣಾಮವು ಸೋಮವಾರವೂ ಮುಂದುವರಿದಿದೆ.

ಸೋಮವಾರದ ವಹಿವಾಟಿನಲ್ಲಿ ಅದಾನಿ ಎಂಟರ್‌ಪ್ರೈಸಸ್ (ಶೇ 4.21), ಅಂಬುಜಾ ಸಿಮೆಂಟ್ಸ್ (ಶೇ 1.65) ಮತ್ತು ಎಸಿಸಿ (ಶೇ 1.10) ಷೇರುಗಳು ಮಾತ್ರವೇ ಗಳಿಕೆ ಕಂಡವು. ಇನ್ನುಳಿದ ಏಳು ಕಂಪನಿಗಳ ಷೇರುಗಳು ನಷ್ಟ ಅನುಭವಿಸಿದವು. ಮೂರು ದಿನಗಳ ವಹಿವಾಟಿನಲ್ಲಿ ಅದಾನಿ ಸಮೂಹದ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ₹ 5.56 ಲಕ್ಷ ಕೋಟಿಯಷ್ಟು ಕರಗಿದೆ.

ಮೂರು ದಿನಗಳ ವಹಿವಾಟಿನಲ್ಲಿ ಬ್ಯಾಂಕ್ ಆಫ್ ಬರೋಡಾ ಷೇರು ಶೇ 10.93ರಷ್ಟು, ಎಸ್‌ಬಿಐ ಶೇ 9.42 ಮತ್ತು ಎಲ್‌ಐಸಿ ಷೇರು ಶೇ 6.52ರಷ್ಟು ಇಳಿಕೆ ಕಂಡಿವೆ.

ಮೂರು ವಹಿವಾಟು ಅವಧಿಗಳಲ್ಲಿ ಕಂಪನಿಗಳ ನಷ್ಟ (%)

ಕಂಪನಿ	ನಷ್ಟ (%)
ಅದಾನಿ ಟೋಟಲ್‌ಗ್ಯಾಸ್	39.57
ಅದಾನಿ ಟ್ರಾನ್ಸ್‌ಮಿಷನ್	37.95
ಅದಾನಿ ಗ್ರೀನ್ ಎನರ್ಜಿ	37.93
ಅಂಬುಜಾ ಸಿಮೆಂಟ್ಸ್	22.28
ಅದಾನಿ ಪೋರ್ಟ್ಸ್	21.55
ಎಸಿಸಿ	18.47
ಅದಾನಿ ಎಂಟರ್‌ಪ್ರೈಸಸ್	16.38
ಅದಾನಿ ವಿಲ್ಮರ್	14.25
ಅದಾನಿ ಪವರ್	14.24
ಎನ್‌ಡಿಟಿವಿ	14.22

ಹಿಂಡನ್‌ಬರ್ಗ್ ರಿಸರ್ಚ್ ಮಾಡಿರುವ ಆರೋಪಕ್ಕೆ ಪ್ರತಿಯಾಗಿ ಅದಾನಿ ಸಮೂಹವು ಭಾನುವಾರ ಪ್ರತಿಕ್ರಿಯೆ ನೀಡಿದೆ. ಅದಾನಿ ಸಮೂಹ ನೀಡಿರುವ ಪ್ರತಿಕ್ರಿಯೆಯು ಸಮೂಹದ ಕಂಪನಿಗಳ ಷೇರುಗಳ ಮೇಲೆ ಮತ್ತು ಒಟ್ಟಾರೆಯಾಗಿ ಷೇರುಪೇಟೆಯ ಮೇಲೆ ಮಿಶ್ರ ಪರಿಣಾಮ ಬೀರಿತು. ಹೂಡಿಕೆದಾರರಲ್ಲಿ ಆತಂಕ ಮನೆಮಾಡಿರುವುದರಿಂದ ಮಧ್ಯಮಾವಧಿಯಲ್ಲಿ ವಹಿವಾಟು ಇದೇ ರೀತಿಯಲ್ಲಿ ಅಸ್ಥಿರವಾಗಿರುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ಐ.ಟಿ., ತೈಲ ಷೇರು ಗಳಿಕೆ: ಷೇರುಪೇಟೆಗಳಲ್ಲಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಕೇಂದ್ರ ಬಜೆಟ್ ಮತ್ತು ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿಯ ಘೋಷಣೆ ಆಗಲಿರುವುದರಿಂದ ಹೂಡಿಕೆದಾರರು ಎಚ್ಚರಿಕೆಯ ವಹಿವಾಟು ನಡೆಸಿದರು. ಹೀಗಿದ್ದರೂ ಐ.ಟಿ., ತೈಲ ಮತ್ತು ಹಣಕಾಸು ವಲಯದ ಷೇರುಗಳು ಚೇತರಿಕೆ ಹಾದಿಗೆ ಮರಳಿದವು.

ಸೆನ್ಸೆಕ್ಸ್‌ನಲ್ಲಿ ಬಜಾಜ್ ಫೈನಾನ್ಸ್ ಷೇರು ಶೇ 4.61ರಷ್ಟು ಗರಿಷ್ಠ ಏರಿಕೆ ಕಂಡಿತು. ಐ.ಟಿ. ವಿಭಾಗದಲ್ಲಿ ಎಚ್‌ಸಿಎಲ್ ಟೆಕ್ ಕಂಪನಿಯ ಷೇರು ಮೌಲ್ಯ ಶೇ 1.85ರಷ್ಟು ಹೆಚ್ಚಾಯಿತು. ಅದೇ ರೀತಿ ಇನ್ಫೊಸಿಸ್, ಟಿಸಿಎಸ್ ಷೇರು ಮೌಲ್ಯವೂ ಹೆಚ್ಚಾಯಿತು.

ಸೆನ್ಸೆಕ್ಸ್ 169 ಅಂಶ ಏರಿಕೆ ಕಂಡರೆ, ನಿಫ್ಟಿ 44 ಅಂಶ ಹೆಚ್ಚಾಯಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 0.25ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 86.44 ಡಾಲರ್‌ಗೆ ತಲುಪಿತು.

ರಾಷ್ಟ್ರೀಯತೆ ಹೆಸರಲ್ಲಿ ವಂಚನೆ ಮರೆಮಾಚಲಾಗದು: ಹಿಂಡನ್‌ಬರ್ಗ್

ನವದೆಹಲಿ (ಪಿಟಿಐ): 'ವಂಚನೆಯನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಮರೆಮಾಚಲು ಸಾಧ್ಯವಿಲ್ಲ' ಎಂದು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹಕ್ಕೆ ತಿರುಗೇಟು ನೀಡಿದೆ.

ಸಂಸ್ಥೆಯು ತನ್ನ ವಿರುದ್ಧ ಸಿದ್ಧಪಡಿಸಿರುವ ವರದಿಯು 'ಭಾರತದ ಮೇಲಿನ ದಾಳಿ' ಎಂದು ಅದಾನಿ ಸಮೂಹವು ಭಾನುವಾರ 413 ಪುಟಗಳ ಪ್ರತಿಕ್ರಿಯೆಯಲ್ಲಿ ಹೇಳಿತ್ತು. ಇದಕ್ಕೆ ಉತ್ತರವಾಗಿ ಸಂಸ್ಥೆಯು ಸೋಮವಾರ ಈ ಹೇಳಿಕೆ ನೀಡಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿಯು 'ಪರಿಣಾಮಗಳ ಬಗ್ಗೆ ಅರಿವಿದ್ದು ಭಾರತದ ಮೇಲೆ, ಅದರ ಸಂಸ್ಥೆಗಳ ಮೇಲೆ ಹಾಗೂ ಬೆಳವಣಿಗೆಯ ಮೇಲೆ ನಡೆಸಿರುವ ದಾಳಿ' ಎಂದು ಅದಾನಿ ಸಮೂಹವು ಭಾನುವಾರ ಹೇಳಿತ್ತು.



ಅದಾನಿ ಸಮೂಹವು 'ನಿರೀಕ್ಷಿಸಿದ ರೀತಿಯಲ್ಲಿಯೇ ಗಮನವನ್ನು ಮಹತ್ವದ ವಿಷಯಗಳಿಂದ ತಿರುಗಿಸಲು ಯತ್ನಿಸಿದೆ, ರಾಷ್ಟ್ರೀಯತೆಯ ಸಂಕಥನವನ್ನು ಮುಂದಕ್ಕೆ ತರಲು ಯತ್ನಿಸಿದೆ' ಎಂದು ಸಂಸ್ಥೆ ಹೇಳಿದೆ.

ಅದಾನಿ ಸಮೂಹವು ತನ್ನ ಭಾರಿ ಬೆಳವಣಿಗೆ ಹಾಗೂ ತನ್ನ ಅಧ್ಯಕ್ಷ ಗೌತಮ್ ಅದಾನಿ ಅವರ ಯಶಸ್ಸನ್ನು ದೇಶದ ಯಶಸ್ಸಿನ ಜೊತೆ ಬೆಸೆಯಲು ಪ್ರಯತ್ನ ಮಾಡಿದೆ ಎಂದು ಹಿಂಡನ್‌ಬರ್ಗ್ ಅಭಿಪ್ರಾಯಪಟ್ಟಿದೆ.

'ಈ ವಿಚಾರದಲ್ಲಿ ನಾವು ಸಹಮತ ಹೊಂದಿಲ್ಲ. ಸ್ಪಷ್ಟವಾಗಿ ಹೇಳಬೇಕು ಎಂದಾದರೆ, ಭಾರತವು ಶಕ್ತಿಶಾಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಹೊಂದಿದೆ. ಅದು ಪ್ರವರ್ಧಮಾನಕ್ಕೆ ಬರುತ್ತಿರುವ ಸೂಪರ್‌ಪವರ್ ದೇಶ. ಅದಕ್ಕೆ ಒಳ್ಳೆಯ ಭವಿಷ್ಯವಿದೆ. ಭಾರತದ ಭವಿಷ್ಯವನ್ನು ಅದಾನಿ ಸಮೂಹವು ಹಿಂದಕ್ಕೆ ಎಳೆದು ನಿಲ್ಲಿಸಿದೆ ಎಂಬುದು ನಮ್ಮ ನಂಬಿಕೆ. ಸಮೂಹವು ತನ್ನ ಮೇಲೆ ಭಾರತದ ಧ್ವಜವನ್ನು ಹೊದ್ದುಕೊಂಡು, ದೇಶವನ್ನು ವ್ಯವಸ್ಥಿತವಾಗಿ ಲೂಟಿ ಮಾಡುತ್ತಿದೆ' ಎಂದು ಕಿಡಿಕಾರಿದೆ.

'ನಮ್ಮ ವರದಿಯು ಅದಾನಿ ಸಮೂಹಕ್ಕೆ ನಿರ್ದಿಷ್ಟವಾಗಿ 88 ಪ್ರಶ್ನೆಗಳನ್ನು ಕೇಳಿದೆ. ಅದಕ್ಕೆ ನೀಡಿರುವ ಪ್ರತಿಕ್ರಿಯೆಯಲ್ಲಿ ಸಮೂಹವು 62 ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಉತ್ತರಿಸಲು ವಿಫಲವಾಗಿದೆ. ಸಮೂಹವು ಪ್ರಶ್ನೆಗಳನ್ನು ವಿಭಾಗವಾರು ವರ್ಗೀಕರಣ ಮಾಡಿಕೊಂಡು, ಅವುಗಳಿಗೆ ಅಸ್ಪಷ್ಟ ವಿವರಣೆ ನೀಡಿದೆ' ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

30–1–2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10450
ದಪ್ಪ ಗುಜರಾತ್(ಹೊಸ)	11500-11550

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1610)
ಒಂದು ವಾರದ ಡೆಲಿವರಿ	1615 (1605)
ಸೋಯಾ ಕಚ್ಚಾ	1100 (1100)
ಪಾಮ್ ವಾರದ ಡೆಲಿವರಿ	9383 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	1080 (1080)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,850 (57,000)
ಬೆಳ್ಳಿ ಕೆ.ಜಿ 68,150 (68,100)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700-750
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಕಾರ್ಕಳ	
ಹೊಸತು	30000-40000
ಹಳತು	40000-54500
ಚಿತ್ರದುರ್ಗ	
ಬೆಟ್ಟೆ	35119-35599
ಕೆಂಪುಗೋಟು	30109-30510
ರಾಶಿ	45029-45479
ಕುಮಟ	
ಚಿಪ್ಪು	27209-32089
ಕೋಕ	17869-31099
ಹಳೆಚಾಲಿ	36509-39599
ಹೊಸಚಾಲಿ	34189-36629
ಸಾಗರ	
ಬಿಳಿಗೋಟು	12099-31299
ಚಾಲಿ	28690-39369
ಕೋಕ	18989-33200
ಕೆಂಪುಗೋಟು	16789-39899
ರಾಶಿ	32699-46879
ಸಿಪ್ಪೆಗೋಟು	4690-21219
ಶಿವಮೊಗ್ಗ	
ಬೆಟ್ಟೆ	46200-52569
ಗೊರಬಲು	17080-35650
ರಾಶಿ	38899-47050
ಸರಕು	55019-78400
ಸಿದ್ದಾಪುರ	
ಬಿಳಿಗೋಟು	27899-33309
ಚಾಲಿ	38499-40599
ಕೋಕ	26899-31219
ಕೆಂಪುಗೋಟು	31689-33219
ರಾಶಿ	42109-45919
ತಟ್ಟಿಬೆಟ್ಟೆ	38569-43099
ಶಿರಸಿ	
ಬೆಟ್ಟೆ	31099-42899
ಬಿಳಿಗೋಟು	23169-34609
ಚಾಲಿ	39199-41861
ಕೆಂಪುಗೋಟು	31699-34699
ರಾಶಿ	41399-45808
ಯಲ್ಲಾಪುರ	
ಬಿಳಿಗೋಟು	24899-32892
ಹಳೆಚಾಲಿ	36529-41699
ಹೊಸಚಾಲಿ	32629-36019
ಕೋಕ	16899-29732
ಕೆಂಪುಗೋಟು	26899-36599
ರಾಶಿ	26899-36599
ತಟ್ಟಿಬೆಟ್ಟೆ	38599-44177

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14100	14400	159.85 ಸೆಂಟ್ಸ್
ಎಸಿ	7140	6850	6200	
ಆರ್‌ಪಿ	9100	8600	8900	ಲಂಡನ್
ಆರ್‌ಸಿ	4900	168 on OT	4500	1943 ಡಾಲರ್ಸ್

ಅಡುಗೆ ಎಣ್ಣೆ: ತಾಪಮಾನ ಉಲ್ಲೇಖ ಕೈಬಿಡಲು ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಪೊಟ್ಟಣದ ಮೇಲೆ ತಾಪಮಾನ ಉಲ್ಲೇಖಿಸದೇ ಪೊಟ್ಟಣದಲ್ಲಿ ಎಷ್ಟು ಎಣ್ಣೆ ಇದೆ ಎಂಬುದನ್ನು ಪ್ರಮಾಣ ಹಾಗೂ ತೂಕದ ಲೆಕ್ಕದಲ್ಲಿ ನಮೂದಿಸಲು ಅಡುಗೆ ಎಣ್ಣೆ ತಯಾರಕರು, ಪ್ಯಾಕ್ ಮಾಡುವವರು ಮತ್ತು ಆಮದು ಮಾಡಿಕೊಳ್ಳುವವರಿಗೆ ನೀಡಿದ್ದ ಗಡುವನ್ನು ಕೇಂದ್ರ ಸರ್ಕಾರವು ಆರು ತಿಂಗಳವರೆಗೆ ವಿಸ್ತರಣೆ ಮಾಡಿದೆ.

ಪೊಟ್ಟಣದಲ್ಲಿ ಬದಲಾವಣೆ ಮಾಡಲು ಈ ಮೊದಲು ಜನವರಿ 15ರ ಗಡುವು ನೀಡಲಾಗಿತ್ತು. ಉದ್ಯಮದ ಮನವಿಯ ಮೇರೆಗೆ ಹೆಚ್ಚುವರಿ ಕಾಲಾವಕಾಶ ನೀಡಲಾಗಿದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ವಾಸ್ತವದಲ್ಲಿ ಅಡುಗೆ ಎಣ್ಣೆಯನ್ನು 30 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಪ್ಯಾಕ್ ಮಾಡಬೇಕು. ಒಂದೊಮ್ಮೆ 21 ಡಿಗ್ರಿ ಸೆಲ್ಸಿಯಸ್‌ನಲ್ಲಿ ಪ್ಯಾಕ್ ಮಾಡಿದರೆ ಆಗ 919 ಗ್ರಾಂ ಎಂದು ನಮೂದಿಸಬೇಕಾಗುತ್ತದೆ. 60 ಡಿಗ್ರಿ ಸೆಲ್ಸಿಯಸ್‌ನಲ್ಲಿ ಪ್ಯಾಕ್ ಮಾಡಿದರೆ ಆಗ ತೂಕವು 892.6 ಗ್ರಾಂ ಆಗುತ್ತದೆ. ಹೀಗೆ ಬೇರೆ ಬೇರೆ ತಾಪಮಾನಗಳಲ್ಲಿ ಎಣ್ಣೆಯ ತೂಕವು ಬೇರೆ ಬೇರೆ ಬರುವುದರಿಂದ ತಾಪಮಾನ ಉಲ್ಲೇಖ ಕೈಬಿಡಲು ನಿರ್ಧರಿಸಲಾಗಿದೆ.



ಅಡುಗೆ ಎಣ್ಣೆ ಮಾರಾಟ ಮಾಡುವ ಕೆಲವು ಕಂಪನಿಗಳು ನ್ಯಾಯಸಮ್ಮತವಲ್ಲದ ವಹಿವಾಟುಗಳಲ್ಲಿ ತೊಡಗಿಕೊಂಡಿವೆ ಎಂಬ ದೂರುಗಳು ಗ್ರಾಹಕರಿಂದ ಬಂದ ಕಾರಣ ಸಚಿವಾಲಯ ಈ ಕ್ರಮ ಕೈಗೊಂಡಿದೆ.

ಐಸಿಸಿ 19 ವರ್ಷದೊಳಗಿನವರ ಟಿ20 ಕ್ರಿಕೆಟ್ 'ವಿಶ್ವಕಪ್ ತಂಡ'

ಶಫಾಲಿ ವರ್ಮಾ, ಶ್ವೇತಾ, ಪಾರ್ಶ್ವಿಗೆ ಸ್ಥಾನ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಭಾನುವಾರ ಕೊನೆಗೊಂಡ 19 ವರ್ಷದೊಳಗಿನ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿದವರನ್ನು ಆಯ್ಕೆ ಮಾಡಿಕೊಂಡು ಐಸಿಸಿ ಹೆಸರಿಸಿದ 'ವಿಶ್ವಕಪ್ ತಂಡ'ದಲ್ಲಿ ಭಾರತದ ಮೂವರಿಗೆ ಸ್ಥಾನ ಲಭಿಸಿದೆ.

ವಿಶ್ವಕಪ್ ವಿಜೇತ ಭಾರತ ತಂಡದ ನಾಯಕಿ ಶಫಾಲಿ ವರ್ಮಾ, ಬ್ಯಾಟರ್ ಶ್ವೇತಾ ಶೆರಾವತ್ ಮತ್ತು ಸ್ಪಿನ್ನರ್ ಪಾರ್ಶ್ವಿ ಚೋಪ್ರಾ, ಐಸಿಸಿ ತಂಡದಲ್ಲಿ ಅವಕಾಶ ಗಿಟ್ಟಿಸಿಕೊಂಡಿದ್ದಾರೆ.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತ ತಂಡ 7 ವಿಕೆಟ್‌ಗಳಿಂದ ಇಂಗ್ಲೆಂಡ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿತ್ತು. ಶಫಾಲಿ ಅವರು ಟೂರ್ನಿಯಲ್ಲಿ ಒಟ್ಟು 172 ರನ್ ಕಲೆಹಾಕಿದ್ದರು. ಯುಎಇ ವಿರುದ್ಧದ ಪಂದ್ಯದಲ್ಲಿ ಅವರು 34 ಎಸೆತಗಳಲ್ಲಿ 78 ರನ್ ಗಳಿಸಿದ್ದರು.

ಶ್ವೇತಾ ಅವರು 99ರ ಸರಾಸರಿಯಲ್ಲಿ 297 ರನ್ ಗಳಿಸಿ, ಟೂರ್ನಿಯ ಗರಿಷ್ಠ ಸ್ಕೋರರ್ ಎನಿಸಿಕೊಂಡಿದ್ದರು. ಅವರು 139.43ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಕಲೆಹಾಕಿದ್ದರು. ಮೊದಲ ಮೂರು ಪಂದ್ಯಗಳಲ್ಲಿ ಕೇವಲ ಎರಡು ವಿಕೆಟ್ ಪಡೆದು ಕೊಂಡಿದ್ದ ಪಾರ್ಶ್ವಿ, ಆ ಬಳಿಕ ಕೈಚಳಕ ಮೆರೆದಿದ್ದರಲ್ಲದೆ ಆರು ಪಂದ್ಯಗಳಿಂದ ಒಟ್ಟು 11 ವಿಕೆಟ್ ಗಳಿಸಿದ್ದರು. ಅತ್ಯಧಿಕ ವಿಕೆಟ್ ಪಡೆದ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದ್ದರು.



ಶಫಾಲಿ ವರ್ಮಾ

ಇಂಗ್ಲೆಂಡ್‌ನ ಗ್ರೇಸ್ ಸ್ಕ್ರಿವೆನ್ಸ್ ಅವರು ತಂಡದ ನಾಯಕಿಯಾಗಿದ್ದು, ಅದೇ ದೇಶದ ಹನ್ನಾ ಬೇಕರ್, ಎಲೀ ಆ್ಯಂಡರ್ಸನ್ ಸ್ಥಾನ ಗಳಿಸಿದ್ದಾರೆ. ನ್ಯೂಜಿಲೆಂಡ್‌ನ ಜಾರ್ಜಿಯಾ ಪ್ಲಿಮೆರ್, ಶ್ರೀಲಂಕಾದ ದೇವನಿ ವಿಹಾಂಗ, ಬಾಂಗ್ಲಾದೇಶದ ಶೋರ್ನಾ ಅಖ್ತರ್, ದಕ್ಷಿಣ ಆಫ್ರಿಕಾದ ಕರಬೊ ಮೆಸೊ, ಆಸ್ಟ್ರೇಲಿಯಾದ ಮ್ಯಾಗಿ ಕ್ಲಾರ್ಕ್ ಮತ್ತು ಪಾಕಿಸ್ತಾನದ ಅನೋಶಾ ನಾಸಿರ್ ಅವರು ತಂಡದಲ್ಲಿದ್ದಾರೆ.

ನಾಳೆ ಸನ್ಮಾನ: ವಿಶ್ವಕಪ್ ವಿಜೇತ ತಂಡಕ್ಕೆ ಬಿಸಿಸಿಐ ಬುಧವಾರ ಸನ್ಮಾನ ಏರ್ಪಡಿಸಲಿದೆ. ದಿಗ್ಗಜ ಬ್ಯಾಟರ್ ಸಚಿನ್ ತೆಂಡೂಲ್ಕರ್ ಭಾಗವಹಿಸಲಿದ್ದಾರೆ.

'ಸೀನಿಯರ್ ತಂಡದಲ್ಲಿ ಮಿಂಚಬಲ್ಲರು'

ನವದೆಹಲಿ (ಪಿಟಿಐ): ಜೂನಿಯರ್ ವಿಶ್ವಕಪ್ ಗೆದ್ದ ತಂಡದಲ್ಲಿರುವ ಕೆಲವು ಆಟಗಾರ್ತಿಯರು ಸೀನಿಯರ್ ತಂಡದಲ್ಲಿ ಸ್ಥಾನ ಪಡೆದು ಮಿಂಚುವ ಸಾಮರ್ಥ್ಯ ಹೊಂದಿದ್ದಾರೆ ಎಂದು ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಹೇಳಿದ್ದಾರೆ.

ಶ್ವೇತಾ ಶೆರಾವತ್, ಪಾರ್ಶ್ವಿ ಚೋಪ್ರಾ, ವೇಗಿ ಟೈಟಸ್ ಸಾಧು, ಆಫ್‌ಸ್ಪಿನ್ನರ್ ಅರ್ಚನಾ ದೇವಿ ಮತ್ತು ಎಡಗೈ ಸ್ಪಿನ್ನರ್ ಮನ್ನತ್ ಕಶ್ಯಪ್ ಅವರು ಗಮನಾರ್ಹ ಪ್ರದರ್ಶನ ನೀಡಿದ್ದರು.

'ಸ್ಪಿನ್ನರ್‌ಗಳು ಮತ್ತು ವೇಗಿಗಳು ಪ್ರಭಾವಿ ಎನಿಸಿದ್ದಾರೆ. ಸೀನಿಯರ್ ತಂಡದಲ್ಲಿ ಈ ಎರಡೂ ವಿಭಾಗಗಳಲ್ಲಿ ಸುಧಾರಣೆ ಕಾಣಬೇಕಿದೆ. ಯುವ ಆಟಗಾರ್ತಿಯರ ಪ್ರದರ್ಶನ, ಬಲಿಷ್ಠ ತಂಡ ಕಟ್ಟಲು ನೆರವಾಗಲಿದೆ' ಎಂದರು.

ಪೆಶಾವರ: ಆತ್ಮಾಹುತಿ ಬಾಂಬ್ ಸ್ಫೋಟ, 61 ಮಂದಿ ಸಾವು

ಒಂದನೇ ಪುಟದಿಂದ

ಸುಮಾರು 400 ಮಂದಿ ಪೊಲೀಸರು ಸ್ಥಳದಲ್ಲಿದ್ದರು. ಘಟನೆಯಲ್ಲಿ ಮಸೀದಿಯ ಕಟ್ಟಡದ ಒಂದು ಭಾಗ ಕುಸಿದುಬಿದ್ದಿದ್ದು, ಅದರ ಅಡಿಯಲ್ಲಿ ಹಲವರು ಸಿಕ್ಕಿಹಾಕಿಕೊಂಡಿರುವ ಆತಂಕ ಇದೆ ಎಂದು ಭದ್ರತಾ ಮತ್ತ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರಾರ್ಥನೆ ಸಲ್ಲಿಸುವ ಸಲುವಾಗಿ ಮಸೀದಿಯೊಳಗೆ ಪ್ರವೇಶಿಸುತ್ತಿದ್ದ ವೇಳೆ ಸ್ಫೋಟ ಸಂಭವಿಸಿತು. ನಾನು ಸ್ವಲ್ಪದರಲ್ಲೇ ಪಾರಾದೆ' ಎಂದು ಪೆಶಾವರದ ಪೊಲೀಸ್ ಅಧೀಕ್ಷಕ ಶಾಜದ್ ಕೌಕಬ್ ತಿಳಿಸಿದರು. ಪೆಶಾವರದ ಆಸ್ಪತ್ರೆಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದ್ದು, ಸಂತ್ರಸ್ತರಿಗಾಗಿ ರಕ್ತದಾನ ಮಾಡುವಂತೆ ನಾಗರಿಕರಲ್ಲಿ ಕೋರಲಾಗಿದೆ.

ಟಿಟಿಪಿ ಹೊಣೆ: ಅಫ್ಗಾನಿಸ್ತಾನದಲ್ಲಿ ಕಳೆದ ಆಗಸ್ಟ್‌ನಲ್ಲಿ ನಡೆದ ದಾಳಿಯ ವೇಳೆ ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಕಮಾಂಡರ್ ಉಮರ್ ಖಾಲಿದ್ ಖುರಸಾನಿ ಮೃತಪಟ್ಟಿದ್ದು, ಅದಕ್ಕೆ ಪ್ರತೀಕಾರವಾಗಿ ಈ ಆತ್ಮಾಹುತಿ ದಾಳಿ ನಡೆಸಲಾಗಿದೆ ಎಂದು ಆತನ ಸಹೋದರ ಹೇಳಿಕೆ ನೀಡಿದ್ದಾನೆ.

ಕಳೆದ ವರ್ಷ ನಗರದ ಕೊಚಾ ರಿಸಾಲ್ದಾರ್ ಪ್ರದೇಶದ ಶಿಯಾ ಮಸೀದಿಯೊಳಗೆ ಇಂತಹದೇ ದಾಳಿ ನಡೆದು 63 ಮಂದಿ ಮೃತಪಟ್ಟಿದ್ದರು.



ಬಾಂಬ್ ಸ್ಫೋಟದ ಬಳಿಕ ಕುಸಿದು ಬಿದ್ದ ಮಸೀದಿಯ ದೃಶ್ಯ –ಎಎಫ್‌ಪಿ ಚಿತ್ರ

2.5 ಕೋಟಿ ವಾಹನ ಮಾರಾಟ ಮಾಡಿದ ಮಾರುತಿ ಸುಜುಕಿ

ನವದೆಹಲಿ/ಟೋಕಿಯೊ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಭಾರತದಲ್ಲಿ ಒಟ್ಟು 2.5 ಕೋಟಿ ವಾಹನಗಳನ್ನು ಮಾರಾಟ ಮಾಡಿದ ಮೈಲಿಗಲ್ಲನ್ನು ಜನವರಿ 9ರಂದು ಕ್ರಮಿಸಿದೆ ಎಂದು ಸುಜುಕಿ ಮೋಟರ್ ಕಾರ್ಪೊರೇಷನ್ ತಿಳಿಸಿದೆ.

ಸುಜುಕಿ ಕಂಪನಿಯು ಮಾರುತಿ ಉದ್ಯೋಗ್ ಜೊತೆ ಪಾಲುದಾರಿಕೆಯೊಂದಿಗೆ 1983ರ ಡಿಸೆಂಬರ್‌ನಲ್ಲಿ ತನ್ನ ಮೊದಲ ಕಾರು (ಮಾರುತಿ 800) ಬಿಡುಗಡೆ ಮಾಡಿತ್ತು. ಈಗ ಮಾರುತಿ ಸುಜುಕಿ ಕಂಪನಿಯು 17 ಮಾದರಿಯ ಕಾರುಗಳನ್ನು ದೇಶದಲ್ಲಿ ತಯಾರಿಸಿ, ಮಾರಾಟ ಮಾಡುತ್ತಿದೆ.

ಕಂಪನಿಯು ಒಂದು ಕೋಟಿ ಕಾರುಗಳನ್ನು ಮಾರಾಟ ಮಾಡಿದ ಮೈಲಿಗಲ್ಲನ್ನು 2012ರ ಫೆಬ್ರುವರಿಯಲ್ಲಿ ದಾಟಿತ್ತು, 2 ಕೋಟಿ ಕಾರುಗಳನ್ನು ಮಾರಾಟ ಮಾಡಿದ ಮೈಲಿಗಲ್ಲನ್ನು 2019ರಲ್ಲಿ ಕ್ರಮಿಸಿತ್ತು.

ಕ್ರಿಕೆಟ್: ಭಾರತ ಮಹಿಳಾ ತಂಡ ಜಯಭೇರಿ



ದೀಪ್ತಿ ಶರ್ಮಾ

ಈಸ್ಟ್ ಲಂಡನ್, ದಕ್ಷಿಣ ಆಫ್ರಿಕಾ (ಪಿಟಿಐ): ದೀಪ್ತಿ ಶರ್ಮಾ (11ಕ್ಕೆ 3) ಅವರ ಬೌಲಿಂಗ್ ಬಲದಿಂದ ಭಾರತ ಮಹಿಳಾ ತಂಡವು ಇಲ್ಲಿ ನಡೆದ ಟಿ20 ತ್ರಿಕೋನ ಸರಣಿಯ ಕೊನೆಯ ಲೀಗ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿತು.

ಜೆಮಿಮಾ ರಾಡ್ರಿಗಸ್ (ಔಟಾಗದೆ 42 ರನ್) ಮತ್ತು ಹರ್ಮನ್‌ಪ್ರೀತ್ ಕೌರ್ (ಔಟಾಗದೆ 32) ಭಾರತ ತಂಡದ ಗೆಲುವು ಸುಲಭಗೊಳಿಸಿದರು.

ಬುಧವಾರ ನಡೆಯುವ ಸರಣಿಯ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 94 (ಹೇಲಿ ಮ್ಯಾಥ್ಯೂಸ್ 34, ಜೈದಾ ಜೇಮ್ಸ್ 21; ದೀಪ್ತಿ ಶರ್ಮಾ 11ಕ್ಕೆ 3, ಪೂಜಾ ವಸ್ತ್ರಕರ್ 19ಕ್ಕೆ 2, ರಾಜೇಶ್ವರಿ ಗಾಯಕವಾಡ 9ಕ್ಕೆ 1). ಭಾರತ: 13.5 ಓವರ್‌ಗಳಲ್ಲಿ 2 ವಿಕೆಟ್‌ಗೆ 95 (ಜೆಮಿಮಾ ರಾಡ್ರಿಗಸ್ ಔಟಾಗದೆ 42, ಹರ್ಲೀನ್ ಡಿಯೊಲ್ 13, ಹರ್ಮನ್‌ಪ್ರೀತ್ ಕೌರ್ ಔಟಾಗದೆ 32; ಶಮಿಲಿಯಾ ಕಾನೆಲ್ 17ಕ್ಕೆ 1, ಹೇಲಿ ಮ್ಯಾಥ್ಯೂಸ್ 7ಕ್ಕೆ 1). ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳ ಜಯ.



ಪ್ರಶಸ್ತಿ ಗೆದ್ದ ಮಂಗಳೂರು ವಿವಿ ತಂಡ. ನಿಂತವರು (ಎಡದಿಂದ): ಸಹನಾ, ವಿದ್ಯಾಶ್ರೀ, ಕವನ, ಯಮುನಾ, ದಿವ್ಯ, ಪಲ್ಲವಿ, ಮೇಘನಾ, ಶ್ವೇತಾ, ಪ್ರಿಯಾ. ಕುಳಿತವರು: ರಾಕಿ ಪೂವಮ್ಮ.ಎಂ (ವ್ಯವಸ್ಥಾಪಕಿ), ಪ್ರವೀಣ್ ಕುಮಾರ್ ಕೆ (ಕೋಚ್), ಜಯಲಕ್ಷ್ಮಿ ಜೆ

ಬಾಲ್ ಬ್ಯಾಡ್ಮಿಂಟನ್: ಮಂಗಳೂರು ವಿವಿ ಮಹಿಳಾ ತಂಡ ಚಾಂಪಿಯನ್

ಮಂಗಳೂರು: ಮಹಿಳೆಯರ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳೂರು ವಿಶ್ವವಿದ್ಯಾಲಯ ಸತತ ಎಂಟನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿದೆ.

ಚೆನ್ನೈನ ಕ್ರೆಸೆಂಟ್ ವಿವಿ ಆಶ್ರಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ನಡೆದ ಮೂರು ಸೆಮಿಫೈನಲ್ ಲೀಗ್ ಪಂದ್ಯಗಳಲ್ಲೂ ಏಕಪಕ್ಷೀಯ ಜಯ ಸಾಧಿಸಿದ ತಂಡ ಒಟ್ಟು 12ನೇ ಬಾರಿ ಚಾಂಪಿಯನ್ ಆದ ಸಾಧನೆಗೆ ಪಾತ್ರವಾಯಿತು.

ಒಟ್ಟು 84 ವಿವಿಗಳು ಭಾಗವಹಿಸಿದ್ದ ಟೂರ್ನಿಯಲ್ಲಿ ನೇರವಾಗಿ ಕ್ವಾರ್ಟರ್ ಫೈನಲ್ ಪ್ರವೇಶ ಪಡೆದಿದ್ದ ಮಂಗಳೂರು ವಿವಿ ಸೇಲಂನ ಪೆರಿಯಾರ್ ವಿವಿ ತಂಡವನ್ನು ಸೋಲಿಸಿ ದಾಖಲೆಯ ಸತತ 18ನೇ ಬಾರಿ ಲೀಗ್ ಹಂತಕ್ಕೆ ಪ್ರವೇಶ ಪಡೆದುಕೊಂಡಿತು. ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಅಣ್ಣಾ ವಿವಿ ತಂಡವನ್ನು 35-24, 35-24ರಲ್ಲಿ, ಮದ್ರಾಸ್ ವಿವಿ ತಂಡವನ್ನು 35-27, 35-32ರಲ್ಲಿ ಮತ್ತು ಚೆನ್ನೈನ ಎಸ್.ಆರ್.ಎಂ ವಿವಿ ತಂಡವನ್ನು 35-22, 35-25ರಲ್ಲಿ ಸೋಲಿಸಿತು. ಮಂಗಳೂರು ಒಟ್ಟು 9 ಪಾಯಿಂಟ್ ಪಡೆದುಕೊಂಡಿತು. 4 ಪಾಯಿಂಟ್ ಗಳಿಸಿದ ಮದ್ರಾಸ್ ರನ್ನರ್ ಅಪ್ ಆದರೆ, ಎಸ್‌ಆರ್‌ಎಂ ತೃತೀಯ ಸ್ಥಾನ ಗಳಿಸಿತು. ಮಂಗಳೂರು ತಂಡದ ನಾಯಕಿ, ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಜಯಲಕ್ಷ್ಮಿ 8 ಬಾರಿಯೂ ಪ್ರಶಸ್ತಿ ಗೆದ್ದ ತಂಡ ಪ್ರತಿನಿಧಿಸಿ ದಾಖಲೆ ನಿರ್ಮಿಸಿದ್ದಾರೆ. 4ನೇ ಬಾರಿ ನಾಯಕಿಯಾಗಿ ತಂಡವನ್ನು ಮುನ್ನಡೆಸಿದ್ದಾರೆ ಎಂದು ಕೋಚ್ ಪ್ರವೀಣ್ ಕುಮಾರ್ ಕೆ ತಿಳಿಸಿದ್ದಾರೆ.

ಫೆ. 5ರಿಂದ ರಾಷ್ಟ್ರಮಟ್ಟದ ಅಂಧರ ಕ್ರಿಕೆಟ್

ಬೆಳಗಾವಿ: ಇಲ್ಲಿನ ಆಟೊ ನಗರದಲ್ಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಫೆ.5ರಿಂದ 9ರವರೆಗೆ ರಾಷ್ಟ್ರಮಟ್ಟದ ಅಂಧರ ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದ್ದು, 27 ರಾಜ್ಯಗಳು, ಒಂದು ಕೇಂದ್ರಾಡಳಿತ ಪ್ರದೇಶ ಹಾಗೂ ರೈಲ್ವೇಸ್ ತಂಡದ ಆಟಗಾರರು ಭಾಗವಹಿಸಲಿದ್ದಾರೆ.

ದೇಶದ ಏಳು ನಗರಗಳಲ್ಲಿ ಪಂದ್ಯಗಳು ನಡೆಯಲಿವೆ. ಆ ಪೈಕಿ 'ಬಿ' ಗುಂಪಿನ ಲೀಗ್ ಹಂತದ 10 ಪಂದ್ಯಗಳನ್ನು ಬೆಳಗಾವಿಯಲ್ಲಿ ಆಯೋಜಿಸಲಾಗುತ್ತಿದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶ ತಂಡಗಳು ಪಾಲ್ಗೊಳ್ಳಲಿವೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ 'ಸಮರ್ಥನಂ' ಸಂಸ್ಥೆಯ ಸಂಸ್ಥಾಪಕ ಮಹಾಂತೇಶ ಕಿವಡಸಣ್ಣವರ, '5ನೇ ಆವೃತ್ತಿಯ ನಾಗೇಶ ಟ್ರೋಫಿ ಟೂರ್ನಿ ಆಯೋಜಿಸುವ ಅವಕಾಶ ಬೆಳಗಾವಿಗೆ ಸಿಕ್ಕಿದೆ. ಇಂಡಸ್ ಇಂಡ್ ಬ್ಯಾಂಕ್ ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆ ಸಹಯೋಗದಲ್ಲಿ ಟೂರ್ನಿ ಏರ್ಪಡಿಸಲಾಗಿದೆ' ಎಂದರು.

ಸಂಸ್ಥೆಯ ಬೆಳಗಾವಿ ಶಾಖೆ ಮುಖ್ಯಸ್ಥ ಎಂ.ಜಿ.ಅರುಣಕುಮಾರ್, 'ಈ ಟೂರ್ನಿಗೆ ತಗಲುವ ವೆಚ್ಚದ ಶೇ 50ರಷ್ಟು ಮೊತ್ತವನ್ನು ಇಂಡಸ್‌ಇಂಡ್ ಬ್ಯಾಂಕ್ ಭರಿಸಲಿದೆ. ನಗರದ ಸಂಘ–ಸಂಸ್ಥೆಗಳು ನಮಗೆ ನೆರವಾಗಬೇಕು' ಎಂದು ಕೋರಿದರು.

ಜೈಪುರ: ದರ್ಗಾದಲ್ಲಿ ಬಿಗುವಿನ ಸ್ಥಿತಿ

ಜೈಪುರ (ಪಿಟಿಐ): ಸೂಫಿ ಸಂತ ಖ್ವಾಜಾ ಮೊಯಿನುದ್ದೀನ್ ಚಿಸ್ತಿ ಅವರ ಉರುಸ್ ಸಂದರ್ಭದಲ್ಲಿ ಅಜ್ಮೇರ್ ಷರೀಫ್ ದರ್ಗಾ ಖಾದಿಂಗಳು ಮತ್ತು ಇಸ್ಲಾಂನ ಬರೆಲ್ವಿ ವರ್ಗದ ನಡುವೆ ಸೋಮವಾರ ವಾಗ್ವಾದ ಉಂಟಾಗಿದ್ದು, ಕೆಲಹೊತ್ತು ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ದರ್ಗಾದ ಒಳಗೆ ಗುಂಪೊಂದು ಘೋಷಣೆ ಕೂಗಿದ್ದು, ಇದಕ್ಕೆ ಖಾದಿಂಗಳು ಆಕ್ಷೇಪಿಸಿದರು. ಇದು ಘರ್ಷಣೆಗೆ ಕಾರಣವಾಗಿತ್ತು ಎಂದು ದರ್ಗಾ ಪೊಲೀಸ್ ಠಾಣೆಯ ಎಸ್‌ಎಚ್‌ಒ ಅಮರ್ ಸಿಂಗ್ ಅವರು ತಿಳಿಸಿದರು.

ರಾಜ್ಯಪಾಲರ ಭಾಷಣಕ್ಕೆ ತೆಲಂಗಾಣ ಸರ್ಕಾರ ಸಮ್ಮತಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ರಾಜ್ಯಪಾಲರ ವಿಷಯದಲ್ಲಿ ತಳೆದಿದ್ದ ಬಿಗಿ ನಿಲುವನ್ನು ಕೆ.ಸಿ.ಚಂದ್ರಶೇಖರ ರಾವ್ ನೇತೃತ್ವದ ತೆಲಂಗಾಣ ಸರ್ಕಾರ ಸಡಿಲಗೊಳಿಸಿದೆ. ಬಜೆಟ್ ಅಧಿವೇಶದನ ಮೊದಲ ದಿನ ರಾಜ್ಯಪಾಲರ ಭಾಷಣಕ್ಕೆ ಅನುವು ಮಾಡಿಕೊಡಲಿದೆ.

ಈ ನಿಲುವಿನೊಂದಿಗೆ ವಾರ್ಷಿಕ ಬಜೆಟ್ ಮಂಡನೆ ಕುರಿತಂತೆ ಅನಿಶ್ಚಿತತೆ ಬಗೆಹರಿದಿದೆ. ಕಳೆದ ವರ್ಷ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಅವರ ಭಾಷಣವಿಲ್ಲದೇ ಬಜೆಟ್ ಅಧಿವೇಶನ ನಡೆದಿತ್ತು.

ಈ ವರ್ಷವು ವಿಧಾನಮಂಡಲದ ಹಿಂದಿನ ಅಧಿವೇಶನವನ್ನು ಅಧಿಕೃತವಾಗಿ ಮುಂದೂಡಲಾಗಿಲ್ಲ. ಹೀಗಾಗಿ, ತಾಂತ್ರಿಕವಾಗಿ ಅಧಿವೇಶನದ ಮೊದಲ ದಿನ ರಾಜ್ಯಪಾಲರ ಭಾಷಣ ಅಗತ್ಯವಿಲ್ಲ ಎಂದು ಸರ್ಕಾರ ಪ್ರತಿಪಾದಿಸಿತ್ತು. ರಾಜಭವನ ಮತ್ತು ಸರ್ಕಾರದ ನಡುವಿನ ತಿಕ್ಕಾಟದ ಹಿನ್ನೆಲೆಯಲ್ಲಿ ಈ ವರ್ಷವು ರಾಜ್ಯಪಾಲರ ಭಾಷಣವಿಲ್ಲದೇ ಅಧಿವೇಶನವನ್ನು ನಡೆಸಲು ಸರ್ಕಾರ ಸಿದ್ಧತೆ ನಡೆಸಿತ್ತು.

ಆದರೆ, 2023–24ನೇ ಸಾಲಿನ ಬಜೆಟ್ ಮಂಡನೆಗೆ ಪೂರ್ವಾನುಮತಿ ನೀಡುವುದನ್ನು ರಾಜ್ಯಪಾಲರು ಮುಂದೂಡಿದ್ದರು. ಸರ್ಕಾರ ಜನವರಿ 21ರಂದೇ ಕರಡು ಪ್ರತಿಯನ್ನು ರಾಜಭವನಕ್ಕೆ ಕಳುಹಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ರಾಜ್ಯಪಾಲರು, 'ಅಧಿವೇಶನದ ಮೊದಲ ದಿನದ ಕಾರ್ಯಸೂಚಿಯಲ್ಲಿ ನಮ್ಮ ಭಾಷಣವು ಸೇರಿದೆಯೇ' ಎಂದು ಪ್ರಶ್ನಿಸಿದ್ದರು. ಆದರೆ, ಇದಕ್ಕೆ ಸರ್ಕಾರ ಪ್ರತಿಕ್ರಿಯೆ ನೀಡಿರಲಿಲ್ಲ.

ಬಜೆಟ್ ಕರಡು ಪ್ರತಿಗೆ ಅನುಮೋದನೆ ನೀಡದ ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿ ಇದಕ್ಕೂ ಮೊದಲು ತೆಲಂಗಾಣ ಸರ್ಕಾರವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಆದರೆ, ಬಳಿಕ ರಾಜ್ಯಪಾಲರ ಭಾಷಣಕ್ಕೆ ಅನುವು ಮಾಡಿಕೊಡುವ ತೀರ್ಮಾನದ ನಂತರ ಅರ್ಜಿಯನ್ನು ಹಿಂಪಡೆಯಿತು.

ಬಿಟಿಆರ್ ಶೀಲ್ಡ್ ಕ್ರಿಕೆಟ್: ಶಿವು ಅಜೇಯ 416 ರನ್



ಬೆಂಗಳೂರು: ಶಿವು ಎಂ. ಗಳಿಸಿದ ಅಜೇಯ 416 ರನ್‌ಗಳ ಬಲದಿಂದ ಗಿರಿಧನ್ವ ಸ್ಕೂಲ್ ತಂಡವು ಬಿಟಿಆರ್ ಶೀಲ್ಡ್ 14 ವರ್ಷದೊಳಗಿನವರ ಒಂದನೇ ಗುಂಪು ಎರಡನೇ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಇಲ್ಲಿ ನಡೆದ ಪಂದ್ಯದಲ್ಲಿ ಗಿರಿಧನ್ವ 414 ರನ್‌ಗಳಿಂದ ಜೈನ್ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್ ತಂಡದ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಗಿರಿಧನ್ವ ತಂಡವು 50 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 595 ರನ್ ಗಳಿಸಿತು. 197 ಎಸೆತಗಳನ್ನು ಎದುರಿಸಿದ ಶಿವು 86 ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದರು. ಗುರಿ ಬೆನ್ನತ್ತಿದ ಜೈನ್ ಸ್ಕೂಲ್ ತಂಡ 40.3 ಓವರ್‌ಗಳಲ್ಲಿ 181 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡು ಸೋಲನುಭವಿಸಿತು.

ಸಂಕ್ಷಿಪ್ತ ಸ್ಕೋರ್: ಗಿರಿಧನ್ವ ಸ್ಕೂಲ್: 50 ಓವರ್‌ಗಳಲ್ಲಿ 4 ವಿಕೆಟ್‌ಗೆ 595 (ಆದಿತ್ಯ ಮಯೂರ್ 60, ಶಿವು ಎಂ. ಔಟಾಗದೆ 416; ಮೆಹಿತ್ ಕನುಂಗಾ 137ಕ್ಕೆ 2). ಜೈನ್ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್: 40.3 ಓವರ್‌ಗಳಲ್ಲಿ 181 (ಧೈರ್ಯ ಗಬಾನಿ 21, ಸ್ವರೂಪ್ ಜೈನ್ 28, ಚೆದಾ ದೇವ್ ಜಿಗರ್ 49; ಗಗನ್ ಸಾಯಿ ಕೆ. 33ಕ್ಕೆ 3, ರೋಹಿತ್ ಸಾಯಿ ಕೇಟಿರೆಡ್ಡಿ 38ಕ್ಕೆ 3).

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕ–ಉತ್ತರಾಖಂಡ ಕ್ವಾರ್ಟರ್ ಫೈನಲ್ ಇಂದಿನಿಂದ

ಮಯಂಕ್ ಬಳಗಕ್ಕೆ ನಾಕೌಟ್ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸ ನಡೆಸಿದ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡದ ಆಟಗಾರರಲ್ಲಿ ಅಪಾರ ಆತ್ಮವಿಶ್ವಾಸ ಕಾಣುತ್ತಿತ್ತು.

ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನಲ್ಲಿ ಅಜೇಯವಾಗಿ ಎಂಟರ ಘಟ್ಟ ಪ್ರವೇಶಿಸಿರುವುದೇ ತಂಡದ ಹುಮ್ಮಸ್ಸು ಹೆಚ್ಚಲು ಕಾರಣ. ಅದೇ ಹುರುಪಿನಲ್ಲಿ ಮಂಗಳವಾರ ಇಲ್ಲಿ ನಡೆಯಲಿರುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡವು ಉತ್ತರಾಖಂಡ ಬಳಗವನ್ನು ಎದುರಿಸಲು ಸಿದ್ಧವಾಗಿದೆ.

ಆದರೆ ಕಳೆದ ಐದು ಋತುಗಳಲ್ಲಿ ನಾಕೌಟ್ ಹಂತದಲ್ಲಿಯೇ ಕರ್ನಾಟಕವು ಸೋತು ಹೊರಬಿದ್ದಿತ್ತು. ಅದರಲ್ಲಿ ಎರಡು ಸಲ ಕ್ವಾರ್ಟರ್‌ಫೈನಲ್ ಮತ್ತು ಮೂರು ಬಾರಿ ಸೆಮಿಫೈನಲ್‌ಗಳಲ್ಲಿ ನಿರಾಶೆ ಅನುಭವಿಸಿತ್ತು. ಆದರೆ ಅನುಭವ ಹಾಗೂ ಆಟಗಾರರ ಸಾಮರ್ಥ್ಯವನ್ನು ನೋಡಿದರೆ ಕರ್ನಾಟಕವೇ ಗೆಲ್ಲುವ ನೆಚ್ಚಿನ ತಂಡವಾಗಿದೆ.

> ಆಗಿಹೋಗಿರುವುದರ ಬಗ್ಗೆ ನಾವು ಯೋಚಿಸುತ್ತಿಲ್ಲ. ಅದರ ಅಗತ್ಯವೂ ನಮಗಿಲ್ಲ. ಮುಂದಿನ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳುವುದಷ್ಟೇ ನಮ್ಮ ಗುರಿ **–ಮಯಂಕ್ ಅಗರವಾಲ್**
> ಕರ್ನಾಟಕ ತಂಡದ ನಾಯಕ

ಉಚಿತ ಪ್ರವೇಶ

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಚಿನ್ನಸ್ವಾಮಿ ಕ್ರೀಡಾಂಗಣದ 'ಎ' ಮತ್ತು 'ಪಿ–3' ಸ್ಟ್ಯಾಂಡ್‌ಗಳಲ್ಲಿ ಪಂದ್ಯ ವೀಕ್ಷಿಸಲು ಶಾಲಾ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಿದೆ.

ಲೀಗ್ ಹಂತದಲ್ಲಿ ಮೂರು ಶತಕ ಬಾರಿಸಿರುವ ಆರ್. ಸಮರ್ಥ್, ದ್ವಿಶತಕ ಗಳಿಸಿರುವ ಮಯಂಕ್, ಮನೀಷ್ ಪಾಂಡೆ ಮತ್ತು ದೀರ್ಘ ಬಿಡುವಿನ ನಂತರ ತಂಡಕ್ಕೆ ಮರಳಿ ಶತಕ ದಾಖಲಿಸಿರುವ ದೇವದತ್ತ ಪಡಿಕ್ಕಲ್ ಉತ್ತಮ ಲಯದಲ್ಲಿದ್ದಾರೆ. ಪದಾರ್ಪಣೆಯ ಟೂರ್ನಿಯಲ್ಲಿ ಆಡುತ್ತಿರುವ ನಿಕಿನ್ ಜೋಸ್ ತಮ್ಮ ಛಾಪು ಮೂಡಿಸುವಲ್ಲಿ ಸಫಲರಾಗಿದ್ದಾರೆ. ಬ್ಯಾಟರ್ ಕೆ.ವಿ. ಸಿದ್ಧಾರ್ಥ್‌ಗೆ ಲೀಗ್ ಹಂತದಲ್ಲಿ ಅವಕಾಶ ಸಿಕ್ಕಿಲ್ಲ. ಒಂದೊಮ್ಮೆ ಇಲ್ಲಿ ಅವಕಾಶ ಸಿಕ್ಕರೆ ನಿಕಿನ್ ಜೋಸ್ ವಿಶ್ರಾಂತಿ ಪಡೆಯಬೇಕಾಗಬಹುದು.

ಇಲ್ಲಿಯವರೆಗೆ ತಂಡದ ಗೆಲುವಿನಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿರುವುದು ಬೌಲಿಂಗ್ ಪಡೆ. ವೇಗತ್ರಯರಾದ ವಿದ್ವತ್, ವೈಶಾಖ ಮತ್ತು ಕೌಶಿಕ್ ತಂಡದ ಶಕ್ತಿಯಾಗಿದ್ದಾರೆ. ಆಫ್‌ಸ್ಪಿನ್ನರ್ ಗೌತಮ್ ಲೀಗ್‌ನ ಕೊನೆಯ ಪಂದ್ಯದಲ್ಲಿ ಒಟ್ಟು ಒಂಬತ್ತು ವಿಕೆಟ್ ಗಳಿಸಿದ್ದರು. ಫೀಲ್ಡಿಂಗ್ ವಿಭಾಗದಲ್ಲಿ ಕ್ಯಾಚ್‌ಗಳನ್ನು ಕೈಚೆಲ್ಲದಿದ್ದರೆ ಮಯಂಕ್ ಬಳಗವು ಉತ್ತರಾಖಂಡವನ್ನು ಮಣಿಸುವ ಹಾದಿ ಸುಗಮವಾಗಲಿದೆ.



ಕರ್ನಾಟಕ ತಂಡದ ಮನೀಷ್ ಪಾಂಡೆ, ಮಯಂಕ್ ಆಗರವಾಲ್ ಮತ್ತು ಸಹ ಆಟಗಾರರು ತಾಲೀಮು ನಡೆಸಿದರು–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಗುಂಪು ಹಂತದಲ್ಲಿ ಮೂರು ಗೆಲುವು ಮತ್ತು ನಾಲ್ಕು ಡ್ರಾ ಸಾಧಿಸಿರುವ ಆದಿತ್ಯ ತಾರೆ ನಾಯಕತ್ವದ ಬಳಗವು ಸೆಮಿಫೈನಲ್ ಕನಸು ಕಾಣುತ್ತಿದೆ. ಬೌಲರ್‌ಗಳಾದ ಅಗ್ರಿಮ್ ತಿವಾರಿ, ನಿಖಿಲ್ ಕೊಹ್ಲಿ ಅವರ ಮುಂದೆ ಕರ್ನಾಟಕದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲಿದೆ. ಬ್ಯಾಟಿಂಗ್‌ನಲ್ಲಿ ಅವನೀಶ್ ಸುಧಾ, ಆದಿತ್ಯ ತಾರೆ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಇನ್ನುಳಿದ ಕ್ವಾರ್ಟರ್‌ಫೈನಲ್‌ಗಳು:
ಬಂಗಾಳ – ಜಾರ್ಖಂಡ್ (ಕೋಲ್ಕತ್ತ)
ಸೌರಾಷ್ಟ್ರ –ಪಂಜಾಬ್ (ರಾಜ್‌ಕೋಟ್)
ಮಧ್ಯಪ್ರದೇಶ –ಆಂಧ್ರ (ಇಂದೋರ್)

ಕ್ರಿಕೆಟ್: ಮುರಳಿ ವಿಜಯ್ ನಿವೃತ್ತಿ

ಚೆನ್ನೈ (ಪಿಟಿಐ): ತಮಿಳುನಾಡಿನ ಬ್ಯಾಟರ್ ಮುರಳಿ ವಿಜಯ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ನಿವೃತ್ತಿ ಪ್ರಕಟಿಸಿದ್ದಾರೆ.

61 ಟೆಸ್ಟ್, 17 ಏಕದಿನ ಮತ್ತು ಒಂಬತ್ತು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಈ ಬಲಗೈ ಬ್ಯಾಟರ್, ಕೆಲ ವರ್ಷಗಳಿಂದ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದರು.

ಆಸ್ಟ್ರೇಲಿಯಾದ ಪರ್ತ್‌ನಲ್ಲಿ 2018ರ ಡಿಸೆಂಬರ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಅವರು ಕೊನೆಯದಾಗಿ ಭಾರತ ತಂಡದ ಪರ ಆಡಿದ್ದರು.

2008–09ರ ಋತುವಿನಲ್ಲಿ ಆಸ್ಟ್ರೇಲಿಯಾ ತಂಡದ ಭಾರತ ಪ್ರವಾಸದ ವೇಳೆ ನಾಗಪುರದಲ್ಲಿ ನಡೆದ ಟೆಸ್ಟ್ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ಪ್ರಥಮ ದರ್ಜೆ ಮತ್ತು ಲಿಸ್ಟ್ ಎ ಪಂದ್ಯಗಳಲ್ಲಿ ಅವರು ತಮಿಳುನಾಡು ತಂಡವನ್ನು 2019ರ ಋತುವಿನವರೆಗೂ ಪ್ರತಿನಿಧಿಸಿದ್ದರು. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ 2020ರಲ್ಲಿ ಆಡಿದ್ದರು. ಆ ಬಳಿಕ ವೃತ್ತಿಪರ ಆಟಗಾರನಾಗಿ ಯಾವುದೇ ಟೂರ್ನಿಯಲ್ಲೂ ಆಡಿಲ್ಲ.

'ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ನಾನು ಅತ್ಯಧಿಕ ಪ್ರೀತಿಸುವ ಕ್ರಿಕೆಟ್ ಆಟದಲ್ಲೇ ಹೊಸ ಅವಕಾಶವನ್ನು ಕಂಡುಕೊಳ್ಳಲಿದ್ದೇನೆ' ಎಂದು 38 ವರ್ಷದ ಮುರಳಿ 'ಟ್ವೀಟ್' ಮಾಡಿದ್ದಾರೆ.

'ವಿವಿಧ ತಂಡಗಳಲ್ಲಿ ಆಡಲು ನನಗೆ ಅವಕಾಶ ಕಲ್ಪಿಸಿದ ಬಿಸಿಸಿಐ, ತಮಿಳುನಾಡು ಕ್ರಿಕೆಟ್ ಸಂಸ್ಥೆ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಗೆ ಕೃತಜ್ಞತೆ ಸಲ್ಲಿಸುತ್ತೇನೆ' ಎಂದಿದ್ದಾರೆ.

ಮುರಳಿ ಅವರು 135 ಪ್ರಥಮ ದರ್ಜೆ ಪಂದ್ಯಗಳಲ್ಲಿ 9,205 ರನ್‌ಗಳನ್ನು ಹಾಗೂ 94 ಲಿಸ್ಟ್ ಎ ಪಂದ್ಯಗಳಲ್ಲಿ 3,644 ರನ್ ಪೇರಿಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧನೆ

ಮಾದರಿ	ಪಂದ್ಯ	ಇನಿಂಗ್ಸ್	ರನ್	ಗರಿಷ್ಠ	ಸರಾಸರಿ	ಶತಕ
ಟೆಸ್ಟ್	61	105	3,982	167	38.28	12
ಏಕದಿನ	17	16	339	72	21.18	0
ಟಿ20	9	9	169	48	18.77	0



ಮುರಳಿ



ಖೇಲೊ ಇಂಡಿಯಾ ಯೂತ್ ಗೇಮ್ಸ್ ಉದ್ಘಾಟನಾ ಸಮಾರಂಭದಲ್ಲಿ ಕಲಾವಿದರು ಪ್ರದರ್ಶನ ನೀಡಿದರು –ಟ್ವಿಟರ್ ಚಿತ್ರ

ಖೇಲೊ ಇಂಡಿಯಾ: 6 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗಿ

ಭೋಪಾಲ್ (ಪಿಟಿಐ): ಯುವ ಕ್ರೀಡಾಪಟುಗಳ ಪ್ರದರ್ಶನಕ್ಕೆ ವೇದಿಕೆಯೊದಗಿಸುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ಗೆ ಸೋಮವಾರ ಇಲ್ಲಿ ವರ್ಣರಂಜಿತ ಚಾಲನೆ ಲಭಿಸಿತು.

ಭೋಪಾಲ್‌ನ ತಾತ್ಯಾ ಟೋಪೆ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಕ್ರೀಡಾಕೂಟ ಆರಂಭವಾಗಿದೆ ಎಂದು ಘೋಷಿಸಿದರು.

'ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಕೂಟವು ಐತಿಹಾಸಿಕ ಎನಿಸಲಿದೆ' ಎಂದು ಅವರು ತಿಳಿಸಿದರು. ಕಲಾವಿದರು ಹಾಡು, ನೃತ್ಯ ಪ್ರದರ್ಶನದ ಮೂಲಕ ಸಮಾರಂಭದ ಕಳೆ ಹೆಚ್ಚಿಸಿದರು.

13 ದಿನ ನಡೆಯುವ ಕೂಟದಲ್ಲಿ ಒಟ್ಟು 27 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದ್ದು, ವಿವಿಧ ರಾಜ್ಯಗಳ 6 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ.

ಕಯಾಕಿಂಗ್, ಕೆನೋಯಿಂಗ್, ಕೆನೋಯಿ ಸ್ಲಲೊಮ್ ಮತ್ತು ಫೆನ್ಸಿಂಗ್ ಕ್ರೀಡೆಗಳನ್ನು ಇದೇ ಮೊದಲ ಬಾರಿಗೆ ಈ ಕೂಟದಲ್ಲಿ ಸೇರಿಸಲಾಗಿದೆ.

ಮಧ್ಯಪ್ರದೇಶದ ಎಂಟು ನಗರಗಳಾದ ಭೋಪಾಲ್, ಇಂದೋರ್, ಉಜ್ಜಯಿನಿ, ಗ್ವಾಲಿಯರ್, ಜಬಲ್ಪುರ, ಮಂಡ್ಲಾ, ಬಾಲಾಘಾಟ್ ಮತ್ತು ಖರಗೋನ್‌ನಲ್ಲಿ ವಿವಿಧ ಸ್ಪರ್ಧೆಗಳು ನಡೆಯಲಿವೆ. ಸುಮಾರು 1,400 ಅಧಿಕಾರಿಗಳು ಹಾಗೂ 2 ಸಾವಿರ ಸ್ವಯಂಸ್ವೇವಕರು ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಮಧ್ಯಪ್ರದೇಶ ಕ್ರೀಡಾ ಸಚಿವರಾದ ಯಶೋಧರಾ ರಾಜೇ ಸಿಂಧಿಯಾ ಅವರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡರು.

ಹಾಕಿ ವಿಶ್ವಕಪ್‌ನಲ್ಲಿ ಭಾರತ ತಂಡದ ಕಳಪೆ ಸಾಧನೆ

ಕೋಚ್ ಗ್ರಹಾಂ ರೀಡ್ ರಾಜೀನಾಮೆ

ನವದೆಹಲಿ (ಪಿಟಿಐ): ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡದ ಕಳಪೆ ಸಾಧನೆಯ ಬಳಿಕ ಮುಖ್ಯ ಕೋಚ್ ಗ್ರಹಾಂ ರೀಡ್ ಅವರು ತಮ್ಮ ಸ್ಥಾನಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ.

ಒಡಿಶಾದ ಭುವನೇಶ್ವರದಲ್ಲಿ ಭಾನುವಾರ ಕೊನೆಗೊಂಡ ಪುರುಷರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಒಂಬತ್ತನೇ ಸ್ಥಾನ ಗಳಿಸಿತ್ತು.

2019ರ ಏಪ್ರಿಲ್‌ನಲ್ಲಿ ಕೋಚ್ ಆಗಿ ನೇಮಕವಾಗಿದ್ದ ರೀಡ್, ಭಾರತ 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಕಂಚಿನ ಪದಕ ಜಯಿಸಲು ಮಾರ್ಗದರ್ಶನ ಮಾಡಿದ್ದರು.


ಆಸ್ಟ್ರೇಲಿಯಾದ, 58 ವರ್ಷದ ರೀಡ್ ತಮ್ಮ ರಾಜೀನಾಮೆ ಪತ್ರವನ್ನು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಅವರಿಗೆ ಸಲ್ಲಿಸಿದ್ದಾರೆ.

'ರಾಜೀನಾಮೆ ನೀಡಿ ಅಧಿಕಾರ ಹಸ್ತಾಂತರ ಮಾಡಲು ಇದು ಸಕಾಲ. ತಂಡ ಮತ್ತು ಹಾಕಿ ಇಂಡಿಯಾದೊಂದಿಗೆ ಕಾರ್ಯನಿರ್ವಹಿಸಲು ಅವಕಾಶ ಸಿಕ್ಕಿದ್ದು ಗೌರವದ ಸಂಗತಿ. ಈ ಮಹಾಪಯಣದ ಪ್ರತಿ ಕ್ಷಣವನ್ನು ಆಸ್ವಾದಿಸಿದ್ದೇನೆ. ತಂಡಕ್ಕೆ ಶುಭ ಹಾರೈಸುವೆ' ಎಂದು ರೀಡ್ ಹೇಳಿದ್ದಾರೆ.

ರೀಡ್ ಅವರ ಕೋಚಿಂಗ್ ಅವಧಿ 2024ರ ಪ್ಯಾರಿಸ್ ಒಲಿಂಪಿಕ್ಸ್‌ವರೆಗೆ ಇತ್ತು. ರೀಡ್ ಅಲ್ಲದೆ ತಂಡದ ಅನಾಲಿಟಿಕಲ್ ಕೋಚ್ ಗ್ರೆಗ್ ಕ್ಲಾರ್ಕ್ ಮತ್ತು ವೈಜ್ಞಾನಿಕ ಸಲಹೆಗಾರ ಮಿಚೆಲ್ ಡೇವಿಡ್ ಪೆಂಬರ್ಟನ್ ಕೂಡ ತಮ್ಮ ಹುದ್ದೆಗಳಿಂದ ಕೆಳಗಿಳಿದಿದ್ದು, ಎಲ್ಲರೂ ಒಂದು ತಿಂಗಳು 'ನೋಟಿಸ್ ಪಿರಿಯಡ್'ನಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಮೂವರ ರಾಜೀನಾಮೆಯನ್ನು ಟಿರ್ಕಿ ಅಂಗೀಕರಿಸಿದ್ದಾರೆ.

ಯಶಸ್ವಿನ ಪಯಣ: ರೇಡ್ ಅವಧಿಯಲ್ಲಿ ಭಾರತ ತಂಡವು, 41 ವರ್ಷಗಳ ಬಳಿಕ ಒಲಿಂಪಿಕ್‌ನಲ್ಲಿ ಪದಕ ಜಯಿಸಿತ್ತು. ಕಳೆದ ವರ್ಷ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಮತ್ತು 2021–22ರ ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಮೂರನೇ ಸ್ಥಾನ ಗಳಿಸಿತ್ತು.



ಗ್ರಹಾಂ ರೀಡ್

ಹಾಕಿ: ಫೆ.4ಕ್ಕೆ ಟ್ರಯಲ್ಸ್

ಬೆಂಗಳೂರು: ಮಹಿಳಾ ಹಾಕಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಸಿದ್ಧತೆಗೆ ಕರ್ನಾಟಕ ತಂಡದ ಆಯ್ಕೆಯಾಗಿ ಟ್ರಯಲ್ಸ್ ನಡೆಯಲಿದೆ.

ಇಲ್ಲಿಯ ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅರೆನಾದಲ್ಲಿ ಫೆಬ್ರುವರಿ 4ರಂದು ಬೆಳಿಗ್ಗೆ 10ರಿಂದ ಟ್ರಯಲ್ಸ್ ನಡೆಯಲಿದೆ. ಆಂಧ್ರಪ್ರದೇಶದ ಕಾಕಿನಾಡದಲ್ಲಿ ಫೆಬ್ರುವರಿ 15ರಿಂದ 26ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಿಗದಿಯಾಗಿದೆ.

ಹಿಂದೆ ಸರಿದ ಸಾತ್ವಿಕ್–ಚಿರಾಗ್

ಬ್ಯಾಂಕಾಕ್ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಥಾಯ್ಲೆಂಡ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಟೂರ್ನಿಯು ಮಂಗಳವಾರದಿಂದ ಇಲ್ಲಿ ನಡೆಯಲಿದೆ.

ಇಂಡಿಯಾ ಓಪನ್ ಟೂರ್ನಿಯಲ್ಲಿ ಗಾಯಗೊಂಡಿದ್ದ ಸಾತ್ವಿಕ್ ಇನ್ನೂ ಸಂಪೂರ್ಣ ಚೇತರಿಸಿಕೊಂಡಿಲ್ಲದ ಕಾರಣ ಥಾಯ್ಲೆಂಡ್ ಟೂರ್ನಿಯಲ್ಲಿ ಆಡುತ್ತಿಲ್ಲ. ಚಿರಾಗ್– ಸಾತ್ವಿಕ್ ಅನುಪಸ್ಥಿತಿಯಲ್ಲಿ ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಗೌಡ್ ಪಂಜಾಲ ಡಬಲ್ಸ್‌ನಲ್ಲಿ ಭಾರತದ ಪರ ಆಡಲಿದ್ದಾರೆ.

ಇಶಾನ್ ಭಟ್ನಾಗರ್– ಸಾಯಿ ಪ್ರತೀಕ್ ಕೂಡ ಡಬಲ್ಸ್‌ನಲ್ಲಿ ಕಣಕ್ಕಿಳಿಯುವರು. ಪುರುಷರ ಸಿಂಗಲ್ಸ್‌ನಲ್ಲಿ ಬಿ.ಸಾಯಿ ಪ್ರಣೀತ್, ಸಮೀರ್ ವರ್ಮಾ, ಮಿಥುನ್ ಮಂಜುನಾಥ್, ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋದ್, ಅನುಪಮಾ ಉಪಾಧ್ಯಾಯ, ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ– ಗಾಯತ್ರಿ ಗೋಪಿಚಂದ್, ಶೃತಿ ಮಿಶ್ರಾ– ಎನ್.ಸಿಕ್ಕಿರೆಡ್ಡಿ, ತನಿಶಾ ಕ್ರಾಸ್ಟೊ– ಅಶ್ವಿನಿ ಪೊನ್ನಪ್ಪ, ಮಿಶ್ರ ಡಬಲ್ಸ್‌ನಲ್ಲಿ ಬಿ.ಸುಮೀತ್ ರೆಡ್ಡಿ– ಅಶ್ವಿನಿ, ರೋಹನ್ ಕಪೂರ್– ಸಿಕ್ಕಿ, ಇಶಾನ್– ತನಿಶಾ ಅದೃಷ್ಟ ಪರೀಕ್ಷಿಸಲಿದ್ದಾರೆ.

ಫೆ.7ರಂದು ಎಎಸ್‌ಎಫ್ ಟ್ರ್ಯಾಕ್ ಮತ್ತು ಫೀಲ್ಡ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶ್ವಿನೀಸ್ ಸ್ಪೋರ್ಟ್ಸ್ ಫೌಂಡೇಷನ್ (ಎಎಸ್‌ಎಫ್) ವತಿಯಿಂದ ಫೆ.7 ರಂದು ಕೊಡಗಿನ ಗೋಣಿಕೊಪ್ಪಲಿನ ಕೈಕೇರಿಯಲ್ಲಿರುವ ಎಎಸ್‌ಎಫ್/ ಕೆಎಎಲ್‌ಎಸ್ ಅರೆನಾದಲ್ಲಿ ಶಾಲಾ ಮಕ್ಕಳಿಗೆ ಟ್ರ್ಯಾಕ್ ಮತ್ತು ಫೀಲ್ಡ್ ಚಾಂಪಿಯನ್‌ಷಿಪ್ ಹಾಗೂ ಹಾಕಿ ಆಯ್ಕೆ ಟ್ರಯಲ್ಸ್ ಆಯೋಜಿಸಲಾಗಿದೆ.

ಟ್ರ್ಯಾಕ್ ಮತ್ತು ಫೀಲ್ಡ್ ಚಾಂಪಿಯನ್‌ಷಿಪ್‌ನಲ್ಲಿ ಬಾಲಕ ಮತ್ತು ಬಾಲಕಿಯರಿಗೆ 12 ವರ್ಷ (7/2/2011ರ ಬಳಿಕ ಜನಿಸಿದವರು), 14 ವರ್ಷ (7/2/2009 ರ ಬಳಿಕ ಜನಿಸಿದವರು) ಮತ್ತು 16 ವರ್ಷದೊಳಗಿನವರ (7/2/2007 ರ ಬಳಿಕ ಜನಿಸಿದವರು) ವಿಭಾಗಗಳಲ್ಲಿ ಸ್ಪರ್ಧೆ ಏರ್ಪಡಿಸಲಾಗಿದೆ.

ಹಾಕಿ ಟ್ರಯಲ್ಸ್ 14 ವರ್ಷ ಮತ್ತು 16 ವರ್ಷದೊಳಗಿನವರ ವಿಭಾಗಗಳಲ್ಲಿ ನಡೆಯಲಿದೆ. ನೋಂದಣಿ ಉಚಿತವಾಗಿದ್ದು, ಫೆ.4ರ ಒಳಗಾಗಿ ಹೆಸರು ಸಲ್ಲಿಸಬಹುದು. ಉತ್ತಮ ಪ್ರದರ್ಶನ ನೀಡುವ ಅಥ್ಲೀಟ್‌ಗಳಿಗೆ ಬಹುಮಾನ,ಸ್ಕಾಲರ್‌ಷಿಪ್ ನೀಡಲಾಗುವುದು ಎಂದು ಎಎಸ್‌ಎಫ್ ಸ್ಥಾಪಕರೂ ಆಗಿರುವ ಅಂತರರಾಷ್ಟ್ರೀಯ ಅಥ್ಲೀಟ್ ಅಶ್ವಿನಿ ನಾಚಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತರು ಹೆಸರನ್ನು ಇಮೇಲ್: kals.school@yahoo.in ಮೂಲಕ ನೋಂದಣಿ ಮಾಡಬಹುದು. ಮಾಹಿತಿಗೆ ಮೊ: 9567746443 (ಅಥ್ಲೆಟಿಕ್ಸ್) ಮತ್ತು 9980523443 (ಹಾಕಿ) ಸಂಪರ್ಕಿಸಬಹುದು.

ಯಂಗ್‌ಸ್ಟಾರ್‌ಗೆ ಜಯ

ಬೆಂಗಳೂರು: ಯಂಗ್‌ಸ್ಟಾರ್ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಸೋಮವಾರ 7–3ರಿಂದ ಎಚ್‌ಎಂಟಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಬಾಬು 6, 9 ಮತ್ತು 22ನೇ ನಿಮಿಷಗಳಲ್ಲಿ, ರಾಮಕೃಷ್ಣ (12ನೇ ನಿ.), ಮೊಹಮ್ಮದ್ ತಾಲಿಬ್ (15ನೇ ನಿ.), ಹರೀಶ್ (28ನೇ ನಿ.) ಮತ್ತು ದೀಪಕ್ (50ನೇ ನಿ.) ಗೋಲು ದಾಖಲಿಸಿದರು. ಎಚ್‌ಎಂಟಿ ತಂಡಕ್ಕಾಗಿ ತೇಸ್ವಿನ್ (20ನೇ ನಿ.), ಶಬಾರಿ (35ನೇ ನಿ.) ಮತ್ತು ಪಾರ್ಥನ್ (39ನೇ ನಿ.) ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ಕರ್ನಾಟಕ ಅರಣ್ಯ ಇಲಾಖೆ 2–1ರಿಂದ ಗುರು ಕ್ಲಬ್ ಎದುರು ಗೆದ್ದಿತು.

ವಾಲಿಬಾಲ್: ಬಳ್ಳಾರಿ ತಂಡ ಚಾಂಪಿಯನ್

ಮೈಸೂರು: ಜಿದ್ದಾಜಿದ್ದಿಯಿಂದ ಕೂಡಿದ್ದ ಪಂದ್ಯದಲ್ಲಿ ಚುರುಕಿನ ಆಟ ಪ್ರದರ್ಶಿಸಿದ ಬಳ್ಳಾರಿ ಪುರುಷರ ತಂಡದವರು ರಾಜ್ಯಮಟ್ಟದ 25ನೇ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಬೆಂಗಳೂರು ಕೇಂದ್ರ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್‌ನಲ್ಲಿ ಬಳ್ಳಾರಿ ತಂಡ 25-17, 42-44, 36-34 ಹಾಗೂ 25-17 ಸೆಟ್‌ಗಳಿಂದ ಗೆದ್ದಿತು.